

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 20 ಶುಕ್ರವಾರ 2026

ಸಂಪುಟ: 46 | ಸಂಚಿಕೆ: 301 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com



ಸಾರಿಗೆ ಮುಷ್ಕರ ಸ್ಥಗಿತ

ಬೇಡಿಕೆ ಈಡೇರಿಸಲು ಮಾ.2ರ ಹೊಸ ಡೆಡ್‌ಲೈನ್


ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸಾರಿಗೆ ನೌಕರರ ಪ್ರತಿಭಟನೆ.

ಬೆಂಗಳೂರು: ಸರ್ಕಾರದಿಂದ ಬೇಡಿಕೆ ಈಡೇರಿಸುವ ಭರವಸೆ ಸಿಕ್ಕಿದ ಹಿನ್ನೆಲೆ ಯಲ್ಲಿ ನಾಳೆಯಿಂದ ನಡೆಸಲು ನಿರ್ಧರಿಸಿದ್ದ ಮುಷ್ಕರ ವನ್ನು ಸಾರಿಗೆ ನೌಕರರು ಕೈಬಿಟ್ಟಿದ್ದಾರೆ. ಮುಷ್ಕರ ಕೈಬಿಟ್ಟಿದ್ದರಿಂದ ಬಿಎಂಟಿಸಿ ಮತ್ತು ಕೆಎಸ್ ಆರ್‌ಟಿಸಿ ಸೇರಿದಂತೆ ಎಲ್ಲಾ ನಿಗಮಗಳ ಬಸ್ಸುಗಳು ಎಂದಿನಂತೆ ರಸ್ತೆಗೆ ಇಳಿಯಲಿವೆ.

ಇಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿಯ ಸಭೆಯಲ್ಲಿ ಈ ಮಹತ್ವದ ತೀರ್ಮಾನ ತೆಗೆದುಕೊಳ್ಳಲಾಗಿದೆ. ನೌಕರರ ಬೇಡಿಕೆ, ಸರ್ಕಾರದ ಭರವಸೆ, ಮುಂದಿನ ಹೋರಾಟದ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ ಬಳಿಕ ಮುಷ್ಕರ ಕೈ ಬಿಡುವ ತೀರ್ಮಾನ ಕೈಗೊಳ್ಳಲಾಯಿತು. ಈಗ ವಿದ್ಯಾರ್ಥಿಗಳಿಗೆ ಪರೀಕ್ಷೆ ಇರುವುದರಿಂದ ಮುಷ್ಕರವನ್ನು ಕೈಬಿಟ್ಟು ಭರವಸೆ ಈಡೇರಿಕೆಗೆ ಮಾರ್ಚ್ 2ರ ಹೊಸ ಡೆಡ್‌ಲೈನ್ ನೀಡಲಾಯಿತು.

ಮುಷ್ಕರ ಕೈಬಿಟ್ಟರೂ ಹೋರಾಟವನ್ನು ಕೈಬಿಡದಿರಲು ನೌಕರರು ನಿರ್ಧರಿಸಿದ್ದಾರೆ. ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಮಾರ್ಚ್ 2 ರಂದು ರಾಜ್ಯಾದ್ಯಂತ ಉಪವಾಸ ಸತ್ಯಾಗ್ರಹ ನಡೆಸಲು ತೀರ್ಮಾನ ತೆಗೆದುಕೊಂಡಿದ್ದಾರೆ.

ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ ಮುಷ್ಕರ ವಾಪಸ್ ಪಡೆದಿದ್ದಕ್ಕೆ ನೌಕರರು ಸ್ಥಳದಲ್ಲೇ ಆಕ್ಷೇಪ ವ್ಯಕ್ತಪಡಿಸಿದ ಪ್ರಸಂಗವು ನಡೆಯಿತು. ನಮ್ಮ ಒಪ್ಪಿಗೆ ಇಲ್ಲದೇ ಸಂಘಟನೆ ಮುಷ್ಕರ ಕೈಬಿಟ್ಟ ನಿರ್ಧಾರವನ್ನು ವಿರೋಧಿಸಿದರು. ಸಂಘಟನೆಯ ನಿರ್ಧಾರವನ್ನು ನಾವು ಒಪ್ಪುವುದಿಲ್ಲ ಎಂದು ಹೇಳಿದರು. ಬೇಡಿಕೆ ಈಡೇರಿಸುವವರೆಗೆ ನಾವು ಹೋರಾಟ ಮಾಡುತ್ತೇವೆ ಎಂದು ಪ್ರತಿಭಟಿಸಿದರು. ಕೊನೆಗೆ ಜಂಟಿ ಸಮಿತಿ ಸದಸ್ಯರು ಮಾತಿಗೆ ಬೆಲೆ ನೀಡಿ ಒಲ್ಲದ ಮನಸ್ಸಿನಿಂದ ಸಾರಿಗೆ ನೌಕರರು ಮುಷ್ಕರ ಕೈಬಿಡಲು ಒಪ್ಪಿಗೆ ನೀಡಿದರು.

ಬೆಂಗಳೂರು, ಹಾಸನ, ಚಿಕ್ಕಮಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ನೌಕರರು ಉಪವಾಸ ಸತ್ಯಾಗ್ರಹ ನಡೆಸಲಿದ್ದಾರೆ. ■ 6ನೇ ಪುಟಕ್ಕೆ

ನೌಕರರ ಪ್ರಮುಖ ಬೇಡಿಕೆಗಳು

- 38 ತಿಂಗಳ ಹಿಂಬಾಕಿ ಹಣ ನೀಡಬೇಕು.
- ಸರ್ಕಾರಿ ನೌಕರರಿಗೆ ನೀಡುವ ವೇತನಕ್ಕೆ ಸರಿಸಮಾನ ವೇತನ ನೀಡಬೇಕು.
- ಕಾರ್ಮಿಕರ ಕಿರುಕುಳ ನಿಲ್ಲಬೇಕು
- 1–1–2024 ರಿಂದ ವೇತನ ಜಾರಿಗೊಳಿಸಬೇಕು

ಗ್ಯಾರಂಟಿಗಳ ಕೈಬಿಡಿ ಉದ್ಯೋಗ ಕೊಡಿ!

- ರಾಜ್ಯ ಸರ್ಕಾರಗಳಿಗೆ ಸುಪ್ರೀಂಕೋರ್ಟ್ ಸೂಚನೆ
- ಎಲ್ಲವನ್ನೂ ಉಚಿತವಾಗಿ ನೀಡಿದರೆ ಜನರಲ್ಲಿ ದುಡಿಯುವ ಭರವಸೆಯೇ ಹೋಗುತ್ತೆ!

ಬೆಂಗಳೂರು, ಫೆ.19(ಕೆಎಂಶಿ)– ರಾಜ್ಯ ಸರ್ಕಾರಗಳು ಉಚಿತ ಗ್ಯಾರಂಟಿಗಳನ್ನು ನೀಡುತ್ತಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂಕೋರ್ಟ್, ಇದನ್ನು ಪುನರ್ ಪರಿಶೀಲಿಸುವಂತೆ ಸೂಚಿಸಿದೆ.



ತಮಿಳುನಾಡಿನಲ್ಲಿ ಉಚಿತ ವಿದ್ಯುತ್ ನೀಡುತ್ತಿರುವುದಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠ, ಈ ವಿಚಾರಕ್ಕೆ ಸಂಬಂಧಿಸಿದಂತೆ ಕೇಂದ್ರ, ರಾಜ್ಯ ಸರ್ಕಾರ ಹಾಗೂ ರಾಜಕೀಯ ಪಕ್ಷಗಳಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ಮುಂದೂಡಿದೆ.

ಬೆಳಗ್ಗೆಯಿಂದ ಸಂಜೆವರೆಗೆ ಉಚಿತ ಆಹಾರ, ಗ್ಯಾಸ್, ವಿದ್ಯುತ್, ನಗದು ಮತ್ತಿತರೆ ಸೌಲಭ್ಯಗಳನ್ನು ನೀಡುತ್ತಿದ್ದರೆ, ಜನರು ಶ್ರಮವಹಿಸದೇ, ದುಡಿಯುವ ಭಾವನೆಯೇ ಇಲ್ಲವಾಗುತ್ತದೆ ಎಂದು ಸರ್ಕಾರಗಳನ್ನು ತರಾಟೆಗೆ ತೆಗೆದುಕೊಂಡಿದೆ.

ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಉದ್ಯೋಗಾವಕಾಶ ಸೃಷ್ಟಿಸಿ, ಗ್ಯಾರಂಟಿಗಳನ್ನು ನೀಡಬೇಡಿ. ಇದು ಒಳ್ಳೆಕೆ ಆಗುವುದಿಲ್ಲವೇ ಎಂದಿದೆ. ರಾಜಕೀಯ ಪಕ್ಷಗಳು ಚುನಾವಣೆ ಸಂದರ್ಭದಲ್ಲಿ ಮತದಾರರ ಓಲೈಕೆಗಾಗಿ ನೀಡುವ ಉಚಿತ ಭರವಸೆಗಳನ್ನು ಅಧಿಕಾರಕ್ಕೆ ಬಂದಾಗ ಜಾರಿಗೊಳಿಸುವುದರಿಂದ ರಾಷ್ಟ್ರದ ಆರ್ಥಿಕ ಅಭಿವೃದ್ಧಿಗೆ ಅಡ್ಡಿಯಾಗುತ್ತದೆ ಎಂದಿದೆ. ಯೋಜನೆಗಳನ್ನು ಜಾರಿಗೆ ತಂದಿರುವ ರಾಜ್ಯ ಸರ್ಕಾರಗಳು ಈಗಾಗಲೇ ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಅಭಿವೃದ್ಧಿ ಕುಂಠಿತಗೊಂಡಿವೆ. ಆದಾಯದ ಬಹುಪಾಲು ■ 6ನೇ ಪುಟಕ್ಕೆ

ಮುಡಾ ಮಾಜಿ ಆಯುಕ್ತ ನಟೇಶ್‌ಗೆ ಬಡ್ತಿ; ಮುಖ್ಯ ಕಾರ್ಯದರ್ಶಿ ಸಮರ್ಥನೆ


ಡಿ.ಬಿ.ನಟೇಶ್



ಸ್ನೇಹಮಯಿ ಕೃಷ್ಣ

ಬೆಂಗಳೂರು, ಫೆ.19(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಮಾಜಿ ಆಯುಕ್ತ ಡಿ.ಬಿ.ನಟೇಶ್ ಅವರಿಗೆ ಬಡ್ತಿ ನೀಡಿರುವುದನ್ನು ರಾಜ್ಯ ಸರ್ಕಾರ ಸಮರ್ಥಿಸಿಕೊಂಡಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರಿಗೆ ಆರು ಪುಟಗಳ ಪತ್ರ ಬರೆದು, ನಟೇಶ್ ಅವರಿಗೆ ಕಾನೂನಾತ್ಮಕವಾಗಿಯೇ ಬಡ್ತಿ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಇವರಿಗೆ ಬಡ್ತಿ ನೀಡುವ ಬಗ್ಗೆ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಿ, ಕೈಗೊಂಡ ನಿರ್ಧಾರದಂತೆ ಅವರಿಗೆ ಮುಂಬಡ್ತಿ ನೀಡಲಾಗಿದೆ ಎಂದು ಸಮರ್ಥಿಸಿಕೊಂಡಿದ್ದಾರೆ. ನಟೇಶ್ ಸೇರಿದಂತೆ ಕೆಲವು ಕೆಎಎಸ್ ಅಧಿಕಾರಿಗಳಿಗೆ ಬಡ್ತಿ ನೀಡಿದ ಸಂದರ್ಭದಲ್ಲಿ ಸ್ನೇಹಮಯಿ ಕೃಷ್ಣ ಬಡ್ತಿ ಬಗ್ಗೆ ■ 6ನೇ ಪುಟಕ್ಕೆ

ಬಿಜೆಪಿಯ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ತರೋಣ

ಬಿಜೆಪಿ ಕಾರ್ಯಕಾರಿಣಿಯಲ್ಲಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಕರೆ



ರಾಜಕಾರಣದಲ್ಲಿ 50 ವರ್ಷ ಪೂರೈಸಿದ ಮಾಜಿ ಸಿಎಂ ಯಡಿಯೂರಪ್ಪ ಅವರಿಗೆ ಸನ್ಮಾನ.

ಬೆಂಗಳೂರು: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ವಂತ ಶಕ್ತಿಯ ಮೇಲೆ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಹಾಗೂ ಭ್ರಷ್ಟ ಕಾಂಗ್ರೆಸ್ ಸರಕಾರವನ್ನು ಕಿತ್ತೊಗೆಯುವ ಸಂಕಲ್ಪ ಮಾಡಬೇಕಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕರೆ ನೀಡಿದ್ದಾರೆ.

ಗುರುವಾರ ನಗರದ ಅರಮನೆ ಮೈದಾನದಲ್ಲಿ ನಡೆದ ಬಿಜೆಪಿ ಕಾರ್ಯಕಾರಿಣಿಯಲ್ಲಿ 50 ವರ್ಷ ಸಕ್ರಿಯ ರಾಜಕಾರಣ ನಡೆಸಿದ ಹಿನ್ನೆಲೆಯಲ್ಲಿ ಪಕ್ಷದಿಂದ ಅಭಿನಂದನೆ ಸ್ವೀಕರಿಸಿದ ಬಳಿಕ ಮಾತನಾಡಿದ ಅವರು, ನನಗೆ ಸಂದ ಈ ಗೌರವ ಪಕ್ಷದ ಕಾರ್ಯಕರ್ತರಿಂದ ಬಂದಿದೆ. ಮುಂದಿನ ದಿನಗಳಲ್ಲಿ ಭ್ರಷ್ಟ ಸರಕಾರವನ್ನು ಕಿತ್ತೊಗೆದು ಅಭಿವೃದ್ಧಿ ಪರ ಬಿಜೆಪಿ ಸರಕಾರವನ್ನು ತರಲು ನೀವೆಲ್ಲರೂ ಸಿದ್ಧರಿದ್ದೀರಿ ಎಂದರು. ನೂರಕ್ಕೆ ನೂರು ವಿಶ್ವಾಸ ಇದೆ. ಮುಂದಿನ ದಿನಗಳಲ್ಲಿ ಈ ಭ್ರಷ್ಟ ಸರ್ಕಾರ ಕಿತ್ತೊಗೆದು ಅಭಿವೃದ್ಧಿ ಪರ ಬಿಜೆಪಿ ಸರ್ಕಾರ ಬರಲಿದೆ. ನಮ್ಮ ಸಾಧನೆ ಮಾತನಾಡಬೇಕು, ಮಾತನಾಡೋದೇ ಸಾಧನೆ ಆಗಬಾರದು. ನಮಗೆಲ್ಲ ಪ್ರಧಾನಿ ಮೋದಿ ಆದರ್ಶ. ಒಂದು ದಿನವೂ ಮೋದಿಯವರು ವಿಶ್ರಾಂತಿ ಪಡೆಯಲಿಲ್ಲ. ಇಡೀ ವಿಶ್ವವೇ ಮೆಚ್ಚುವಂಥ ನಾಯಕ ಮೋದಿ ನಮಗೆ ಸಿಕ್ಕಿದ್ದಾರೆ. ಈ ಸರ್ಕಾರ ಕಿತ್ತೊಗೆಯುವುದು ಕಷ್ಟ ಆಗಲ್ಲ. ಆ ದಿಕ್ಕಿನಲ್ಲಿ ಸಾಗೋಣ. ನಮಗೆ 85 ವರ್ಷ ವಯಸ್ಸು, ದೇವರ ದಯೆಯಿಂದ ಇನ್ನೂ ಐದಾರು ವರ್ಷ ಓಡಾಡ್ತೇನೆ. ನೀವು ಎಲ್ಲಿಗೆ ಯಾವಾಗ ಕರೆದರೂ ಬರ್ತೇನೆ, ಈ ಸರ್ಕಾರ ತೊಲಗಿಸೋಣ. 1974 ರಲ್ಲಿ ಗ್ರಾಮಗಳನ್ನು ಉಳಿಸಿ ರೈತರನ್ನು ರಕ್ಷಿಸಿ ಪಾದಯಾತ್ರೆ ಮಾಡಿದೆ. 1980 ರಲ್ಲಿ ಶಿವಮೊಗ್ಗ ಪಿಡಿಒ ಕಚೇರಿ ಮುಂದೆ ಜೀತ ಮುಕ್ತ ಹೋರಾಟ ಮಾಡಿದ್ದೆ ಎಂದು ನೆನಪಿಸಿದರು. ■ 6ನೇ ಪುಟಕ್ಕೆ

ಬಂಡೀಪುರದಲ್ಲಿ ಸಫಾರಿ ಸಮರ

- ಸಫಾರಿ ವಿರೋಧಿಸುವವರ ವಿರುದ್ಧ ತಿರುಗಿ ಬಿದ್ದ ಸ್ಥಳೀಯ ರೈತರು
- ದಶಕಗಳಿಂದ ಸ್ಥಳೀಯ ರೈತರಿಗೆ ಸಫಾರಿಯಿಂದ ಸಮಸ್ಯೆ ಆಗಿಲ್ಲ


ಸಫಾರಿ ಪುನರಾರಂಭಿಸುವಂತೆ ಆಗ್ರಹಿಸಿ ಸ್ಥಳೀಯರು ಪ್ರತಿಭಟನೆ ನಡೆಸುತ್ತಿರುವುದು.

ಬಂಡೀಪುರ, ಫೆ.19(ಎಂಟಿವೈ, ಸೋಮ್.ಜಿ)– ಸಫಾರಿ ಪುನರಾರಂಭಿಸುವುದಾಗಿ ರಾಜ್ಯ ಸರ್ಕಾರ ಘೋಷಿಸಿದ ಹಿನ್ನೆಲೆಯಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೇಲುಕಾಮನಹಳ್ಳಿ ಸಫಾರಿ ಕೇಂದ್ರದ ಬಳಿ ಇಂದು ಹೈಡ್ರಾಮಾವೇ ನಡೆಯಿತು. ಸಫಾರಿ ಪರ ಹಾಗೂ ವಿರೋಧ ಪ್ರತಿಭಟನೆ ನಡೆದವು. ಹಾಗಾಗಿ ಕೆಲ ಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಹೆಡಿಯಾಲ, ಮೊಳೆಯೂರು ವಲಯ ವ್ಯಾಪ್ತಿಯ ಸರಗೂರು ತಾಲೂಕಿನ ವಿವಿಧ ಗ್ರಾಮಗಳಲ್ಲಿ ಹುಲಿ ದಾಳಿ ಹಿನ್ನೆಲೆಯಲ್ಲಿ ನ.7ರಿಂದ ಸಫಾರಿಯನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿತ್ತು. ಸರ್ಕಾರ ನೇಮಿಸಿದ್ದ ತಜ್ಞರ ಸಮಿತಿ ನೀಡಿದ ವರದಿ ಮೇರೆಗೆ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಬುಧವಾರ ಕೆಲವು ಮಾರ್ಪಾಡಿನೊಂದಿಗೆ ಸಫಾರಿ ಪುನರಾರಂಭಿಸಲು ನಿರ್ಧರಿಸಿರುವುದಾಗಿ ಘೋಷಿಸಿದ್ದರು. ಸರ್ಕಾರದ ಈ ನಡೆಯನ್ನು ರೈತ ಸಂಘದ ಕೆಲ ಮುಖಂಡರು ತೀವ್ರ ವಿರೋಧಿಸಿದ್ದರೆ, ಸ್ಥಳೀಯರು ಸ್ವಾಗತಿಸಿದ್ದರು. ಈ ಹಿನ್ನೆಲೆಯಲ್ಲಿ ಎರಡೂ ಬಣದಿಂದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೇಲುಕಾಮನಹಳ್ಳಿ ಸಫಾರಿ ಕೇಂದ್ರದ ಬಳಿ ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಪೊಲೀಸರು ಮುಂಜಾಗ್ರತಾ ಕ್ರಮವಾಗಿ ಎರಡೂ ಗುಂಪಿನ ರೈತರನ್ನು ವಶಕ್ಕೆ ಪಡೆದು ಪರಿಸ್ಥಿತಿ ತಿಳಿಗೊಳಿಸಿದರು.

ಸಫಾರಿ ವಿರೋಧಿಸಿ ಪ್ರತಿಭಟನೆ: ಸಫಾರಿ ಪುನ ರಾರಂಭಿಸುವ ಸರ್ಕಾರದ ನಿಲುವು ವಿರೋಧಿಸಿ ಚಾಮರಾಜನಗರದ ರೈತ ಮುಖಂಡ ಹೊನ್ನೂರು ಪ್ರಕಾಶ್ ನೇತೃತ್ವದಲ್ಲಿ ಸಫಾರಿ ಕೇಂದ್ರದ ಬಳಿ ಗುರುವಾರ ಮಧ್ಯಾಹ್ನ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ■ 6ನೇ ಪುಟಕ್ಕೆ


ಸಫಾರಿ ವಿರೋಧಿಸಿ ರೈತರು ಪ್ರತಿಭಟನೆ ನಡೆಸುತ್ತಿರುವುದು.



ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ.
ಸಂಬಳ: 25,000-30,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
9187412584 / 9187312582





ಮೈಸೂರು ಮಿತ್ರ ಶುಕ್ರವಾರ 20 ಫೆಬ್ರವರಿ 2026

ಸೇಂಟ್ ಜೋಸೆಫ್ ಶಾಲೆಯಲ್ಲಿ ಮುಟ್ಟಿನ ನೈರ್ಮಲ್ಯ ಕುರಿತು ಜಾಗೃತಿ ಕಾರ್ಯಕ್ರಮ



ಎನ್‌ಜೆ ಆಸ್ಪತ್ರೆಯು ಸೇಂಟ್ ಜೋಸೆಫ್ ಶಾಲೆಯ ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ಮುಟ್ಟಿನ ನೈರ್ಮಲ್ಯದ ಕುರಿತು ಸಂವಾದಾತ್ಮಕ ಜಾಗೃತಿ ಕಾರ್ಯಕ್ರಮ ನಡೆಸಿತು.

ಮೈಸೂರು,ಫೆ.19– ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿ.ಎಸ್.ಆರ್) ಉಪಕ್ರಮದ ಭಾಗವಾಗಿ, ಮೈಸೂರಿನ ಎನ್‌ಜೆ ಆಸ್ಪತ್ರೆಯು ಸೇಂಟ್ ಜೋಸೆಫ್ ಶಾಲೆಯ ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ಮುಟ್ಟಿನ ನೈರ್ಮಲ್ಯದ ಕುರಿತು ಸಂವಾದಾತ್ಮಕ ಜಾಗೃತಿ ಕಾರ್ಯಕ್ರಮ ನಡೆಸಿತು.

ಡಾ.ಸಿಂಧು ಲಕ್ಷ್ಮಿ ಡಿ ಅವರು ಈ ಸಂವಾದ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಅವರು ವಿದ್ಯಾರ್ಥಿನಿಯರೊಂದಿಗೆ ಮುಟ್ಟಿನ ಸಮಯ, ಮುಟ್ಟಿನ ನೈರ್ಮಲ್ಯ ಪದ್ಧತಿಗಳು, ಸಾಮಾನ್ಯ ತಪ್ಪು ಗ್ರಹಿಕೆಗಳು, ಮುಟ್ಟಿನ ಸಮಯದಲ್ಲಿ ಪೋಷಣೆ ಮತ್ತು ಮುಟ್ಟಿನ ಅಸ್ವಸ್ಥತೆಯನ್ನು ನಿರ್ವಹಿಸಲು ಸರಳ ಯೋಗಾಸನಗಳ ಬಗ್ಗೆ ಮಾತನಾಡಿದರು.

ಕಾರ್ಯಕ್ರಮವನ್ನು ವಿದ್ಯಾರ್ಥಿ ಸ್ನೇಹಿ ಮತ್ತು ಆಕರ್ಷಕ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿತ್ತು. ಮುಟ್ಟಿನ ಮತ್ತು ಸಂಬಂಧಿತ ವಿಷಯಗಳ ಕುರಿತು ಮುಕ್ತ ಚರ್ಚೆಗೆ ಉತ್ತೇಜನ ನೀಡಲಾಗಿತ್ತು. ಮುಟ್ಟಿನ ನೈರ್ಮಲ್ಯ ಅಭ್ಯಾಸಗಳು, ನೈರ್ಮಲ್ಯ ಉತ್ಪನ್ನಗಳ ಸರಿಯಾದ ಬಳಕೆ ಮತ್ತು ವಿಲೇವಾರಿ, ಸೇರಿದಂತೆ, ಮುಟ್ಟಿನ ಸಮಯದಲ್ಲಿ ಪೋಷಣೆ ಮತ್ತು ಮುಟ್ಟಿನ ಅಸ್ವಸ್ಥತೆ ನಿವಾರಿಸಲು ಸಹಾಯ ಮಾಡುವ ಸರಳ ಯೋಗಾಸನಗಳು ಪ್ರಮುಖ ಕ್ಷೇತ್ರಗಳಲ್ಲಿ ಸೇರಿವೆ. ಎಲ್ಲಾ ವಿಷಯಗಳನ್ನು ವಯಸ್ಸಿಗೆ ಸೂಕ್ತವಾದ ಮತ್ತು ಅರ್ಥಮಾಡಿಕೊಳ್ಳಲು ಸುಲಭವಾದ ರೀತಿಯಲ್ಲಿ ವಿವರಿಸಲಾಯಿತು.

ಸರಿಯಾದ ವೈಜ್ಞಾನಿಕ ಜ್ಞಾನದ ಮೂಲಕ ಮುಟ್ಟನ್ನು ಸಾಮಾನ್ಯೀಕರಿಸುವುದು ಮತ್ತು ದೀರ್ಘಕಾಲದ ಸಾಮಾಜಿಕ ನಿಷೇಧಗಳನ್ನು ಮುರಿಯುವುದರ ಮೇಲೆ ವಿಶೇಷ ಒತ್ತು ನೀಡಲಾಯಿತು. ವಿದ್ಯಾರ್ಥಿನಿಯರು ಸಕ್ರಿಯವಾಗಿ ಭಾಗವಹಿಸಿ ತಮ್ಮ ಪ್ರಶ್ನೆಗಳನ್ನು ಮುಕ್ತವಾಗಿ ಹಂಚಿಕೊಳ್ಳುವ ಮೂಲಕ ಕಾರ್ಯಕ್ರಮವನ್ನು ಮಾಹಿತಿಯುಕ್ತ ಮತ್ತು ಆಕರ್ಷಕವಾಗಿ ಮಾಡಿದರು.

ಹದಿಹರೆಯದವರ ಆರೋಗ್ಯ ಮತ್ತು ಜಾಗೃತಿಯನ್ನು ಉತ್ತೇಜಿಸುವಲ್ಲಿ ಎನ್‌ಜೆ ಆಸ್ಪತ್ರೆಯ ಪಾತ್ರವನ್ನು ಗಮನಿಸಿದ ಶಾಲಾ ಆಡಳಿತ ಮಂಡಳಿಯು, ಅದರ ಸಿಎಸ್‌ಆರ್ ಉಪಕ್ರಮವನ್ನು ಶ್ಲಾಘಿಸಿತು. ಮುಟ್ಟು ನೈಸರ್ಗಿಕ ಜೈವಿಕ ಪ್ರಕ್ರಿಯೆ ಮತ್ತು ಆರೋಗ್ಯಕರ ಭವಿಷ್ಯಕ್ಕಾಗಿ ಅರಿವು, ನೈರ್ಮಲ್ಯ ಮತ್ತು ಆತ್ಮವಿಶ್ವಾಸ ಅತ್ಯಗತ್ಯ ಎಂಬ ಸಂದೇಶದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ಶಿವಾಜಿಯ ಶೌರ್ಯ ಯುವಕರಿಗೆ ಆದರ್ಶವಾಗಲಿ

ಮಾಜಿ ಕಾರ್ಪೊರೇಟರ್ ಪ್ರಶಾಂತ್‌ಗೌಡರ ಆಶಯ



ಛತ್ರಪತಿ ಶಿವಾಜಿ ಮಹಾರಾಜ್ 396ನೇ ಜಯಂತಿ ಅಂಗವಾಗಿ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಮೈಸೂರು: ಯುವಕರಿಗೆ ಧೈರ್ಯ, ಸಾಹಸ ಹಾಗೂ ಅಭಿಮಾನದ ಸಂಕೇತವಾಗಿರುವ ಶಿವಾಜಿ ಮಹಾರಾಜರು ಆದರ್ಶಪ್ರಾಯರಾಗಿದ್ದಾರೆ ಎಂದು ನಗರ ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್ ಗೌಡ ಹೇಳಿದರು.

ಛತ್ರಪತಿ ಶಿವಾಜಿ ಮಹಾರಾಜ್ 396ನೇ ಜಯಂತಿ ಅಂಗವಾಗಿ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಶಿವರಾಂ ಪೇಟೆಯಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಇಂದಿನ ಯುವಪೀಳಿಗೆ ಛತ್ರಪತಿಯವರಂತೆಯೇ ಸಾಹಸ, ಧೈರ್ಯ ಮತ್ತು ಹೋರಾಟದ ಮನೋಭಾವ ಬೆಳೆಸಿಕೊಳ್ಳಬೇಕು. ದೇಶ ಕಂಡ ಅಪ್ರತಿಮ ಹೋರಾಟಗಾರ. ಅನೇಕ ವೈರಿಗಳನ್ನು ಹಿಮ್ಮೆಟ್ಟಿಸಿ ಸಾಮ್ರಾಜ್ಯ ಕಟ್ಟಿ ಹಿಂದುತ್ವ ಉಳಿಸಿದ ಹಿಂದೂಗಳ ಹೃದಯ ಸಾಮ್ರಾಟರಾಗಿದ್ದಾರೆ. ಯುದ್ಧ ಕಲೆಗಳನ್ನು ಕರಗತ ಮಾಡಿಕೊಂಡು ಏಕಾಂಗಿಯಾಗಿ ಹೋರಾಟ ಮಾಡಿದರು. ಸೈನ್ಯ ಕಟ್ಟಿಕೊಂಡು ದೊಡ್ಡ ದೊಡ್ಡ ಸೈನ್ಯ ಹೊಂದಿದ್ದ ದೇಶ ವಿರೋಧಿಗಳಿಗೆ ಸೋಲಿನ ರುಚಿ ತೋರಿಸಿದವರು ಎಂದು ಸ್ಮರಿಸಿದರು.

ಮೈಸೂರು ರಕ್ಷಣಾ ವೇದಿಕೆ ಅಧ್ಯಕ್ಷ ಮೈಕಾ ಪ್ರೇಮ್ ಕುಮಾರ್ ಮಾತನಾಡಿ, ಜೀಜಾಬಾಯಿ ಬಾಲ್ಯದಲ್ಲಿಯೇ ಶಿವಾಜಿಗೆ ಧಾರ್ಮಿಕ ಸಂಸ್ಕಾರದೊಂದಿಗೆ ಯುದ್ಧ ಕಲೆಗಳನ್ನು ಕರಗತ ಮಾಡಿಸಿದ್ದರು. ಇದರಿಂದಾಗಿ ಅವರು ಛತ್ರಪತಿಯಾಗಿ ಬಾನೆತ್ತರಕ್ಕೆ ಬೆಳೆದು ಅಜರಾಮರಾಗಿದ್ದಾರೆ. ಹಲವು ಕೋಟೆಗಳನ್ನು ನೀಡಿದ್ದಾರೆ. ಅವರು ಹಾಕಿಕೊಟ್ಟ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕು ಎಂದರು.

ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್ ಕುಮಾರ್ ಮಾತನಾಡಿ, ಹಿಂದೂ ರಾಷ್ಟ್ರ ನಿರ್ಮಾಣಕ್ಕೆ ಅವಿರತವಾಗಿ ಶ್ರಮಿಸಿದ ಮಹಾನ್ ನಾಯಕ, ಪ್ರಜಾ ರಕ್ಷಕ, ರಾಷ್ಟ್ರ ಕಂಡ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ, ಅಧರ್ಮವನ್ನಳಿಸಿ ಧರ್ಮ ರಾಜ್ಯ ಸ್ಥಾಪಿಸಿದ ಯುಗಪುರುಷ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ಜನ್ಮದಿನದಂದು ಅವರಿಗೆ ನನ್ನ ಶತ ಕೋಟಿ ನಮನಗಳು. ಶಿವಾಜಿ ಮಹಾರಾಜರ ಶೌರ್ಯ, ಪರಾಕ್ರಮಗಳು, ದಿಟ್ಟ ಹೋರಾಟದ ಹಂಬಲ ಹಾಗೂ ಅವರ ಸಾಧನೆಗಳು ಸದಾಕಾಲ ಅವಿಸ್ಮರಣೀಯ ಎಂದರು. ಶ್ರೀ ತ್ರಿಪುರ ಭೈರವಿ ಮಠಾಧಿಪತಿ ಡಾ.ಕೃಷ್ ಮೋಹನ್ ನಂದಗಿರಿ ಗೋ ಸ್ವಾಮೀಜಿ, ಜಗದೀಶ್, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಎಸ್.ಎನ್.ರಾಜೇಶ್, ಬೈರತಿ ಲಿಂಗರಾಜು, ಅನೋಜ್ ಸರಸ್ವತ, ಹರೀಶ್‌ಗೌಡ, ಟಿ.ಎಸ್.ಅರುಣ್, ಅರಿವು ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ್ ಕಚಪ್, ವಿನೋದ್ ಅರಸ್,ಸುಚೆಂದ್ರ, ಪ್ರಮೋದ್‌ಗೌಡ, ಗುರುರಾಜ್ ಶೆಟ್ಟಿ, ಸಚಿನ್ ನಾಯಕ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಉಚಿತ ಆರೋಗ್ಯ ತಪಾಸಣೆ, ಉಪನ್ಯಾಸ ಕಾರ್ಯಕ್ರಮ

ಮೈಸೂರು,ಫೆ.19– ಮೈಸೂರಿನ ಹಿರಿಯ ನಾಗರೀಕರ ಮಂಡಳಿ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಮತ್ತು ಉಪನ್ಯಾಸ ಕಾರ್ಯಕ್ರಮವನ್ನು ಫೆ.23ರಂದು ಜಯಲಕ್ಷ್ಮೀಪುರಂನ ಆಸ್ಪತ್ರೆ ರಸ್ತೆಯಲ್ಲಿರುವ ಸರಸ್ವತಿ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ. ಉಚಿತ ಶ್ರವಣ ತಪಾಸಣೆ, ಶ್ರವಣ ದೋಷ ನಿವಾರಣೆ ಮತ್ತು ಜಾಗೃತಿ ಕಾರ್ಯಕ್ರಮದಲ್ಲಿ ವಾಕ್ ಮತ್ತು ಶ್ರವಣ ಚಿಕಿತ್ಸಾ ವೈದ್ಯರಾದ ಡಾ.ರಾಧಾ ಸಿಂಹಾದ್ರಿ ಆರೋಗ್ಯ ತಪಾಸಣೆ ಮಾಡಲಿದ್ದಾರೆ. ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ.ಹೆಚ್.ಎಂ. ನಾಗರಾಜು ಅಧ್ಯಕ್ಷತೆ ವಹಿಸಲಿದ್ದಾರೆ.

ಫೆ.22ರಂದು ಪೂರ್ವಭಾವಿ ಸಭೆ

ಮೈಸೂರು: ಸಂಯುಕ್ತ ಕರ್ನಾಟಕ ಆಟೋರಿಕ್ಷಾ ಚಾಲಕರ ಮತ್ತು ಮಾಲೀಕರ ಕ್ಷೇಮಾಭಿವೃದ್ಧಿ ಸಂಘ, ವಾಣಿಜ್ಯ ವಾಹನಗಳ ಚಾಲಕರು, ಮಾಲೀಕರ ಸಂಘದ ಪೂರ್ವಭಾವಿ ಸಭೆಯನ್ನು ಫೆ.22ರಂದು ಬೆಳಗ್ಗೆ 11 ಗಂಟೆಗೆ ಗೋವರ್ಧನ್ ಹೋಟೆಲ್‌ನಲ್ಲಿ ಕರೆಯಲಾಗಿದೆ ಎಂದು ಸಂಘದ ಅಧ್ಯಕ್ಷ ಶ್ರೀನಿವಾಸ ಮಿತ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿನಂದನೆ...



ಮೈಸೂರು ಜಿಲ್ಲಾ–ಗ್ರಾಮಾಂತರ ಜೆಡಿಎಸ್ ಅಧ್ಯಕ್ಷರಾಗಿ ನೇಮಕಗೊಂಡ ಮಾಜಿ ಶಾಸಕ ಅಶ್ವಿನ್‌ಕುಮಾರ್, ಮೈಸೂರು ನಗರ ಅಧ್ಯಕ್ಷ ಎಸ್‌ಬಿಎಂ ಮಂಜು ಹಾಗೂ ಸತೀಶ್ ಅವರನ್ನು ಮಾಜಿ ಕಾರ್ಪೊರೇಟರ್ ಸಿ.ಮಹದೇಶ್ ಅಭಿನಂದಿಸಿದರು. ಈ ವೇಳೆ ಮದನ್ ಮಾದೇಶ್, ನಂದನ್ ಮಾದೇಶ್, ದಾಸ ಪಾಲಳ್ಳಿ ಸತೀಶ್, ರವಿ, ಕಾರ್ತಿ ಇನ್ನಿತರರು ಉಪಸ್ಥಿತರಿದ್ದರು.

ಜಲ ಸಾಹಸ, ಭೂ ಸಾಹಸ ಕ್ರೀಡಾ ತರಬೇತಿ

ಮೈಸೂರು,ಫೆ.19– ಇಂಡಿಯನ್ ಮೌಂಟನೇರಿಂಗ್ ಫೌಂಡೇಷನ್ ಮತ್ತು ಕರ್ನಾಟಕ ರಾಫ್ಟಿಂಗ್ ಅಸೋಸಿಯೇಷನ್ ಇವರ ಸಹಯೋಗದೊಂದಿಗೆ ಮೈಸೂರು ಜಿಲ್ಲೆಯ 18 ರಿಂದ 29 ವರ್ಷದೊಳಗಿನ ಯುವಕ, ಯುವತಿಯರಿಗೆ ಭೂ ಸಾಹಸ ಮತ್ತು ಜಲ ಸಾಹಸ ಕ್ರೀಡಾ ತರಬೇತಿಗಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಜಲ ಸಾಹಸ ಕ್ರೀಡೆಯನ್ನು ವರುಣ ಕೆರೆ ಮತ್ತು ಭೂ ಸಾಹಸ ಕ್ರೀಡೆಯನ್ನು ಪಾಂಡವಪುರದ ಕುಂತಿಬೆಟ್ಟದಲ್ಲಿ ಫೆಬ್ರವರಿ ಕೊನೆಯ ವಾರದಲ್ಲಿ ನಡೆಸಲಾಗುತ್ತಿದ್ದು, ಮೈಸೂರು ಜಿಲ್ಲೆಯ ಅಭ್ಯರ್ಥಿಗಳು ಸ್ವವಿವರದೊಂದಿಗೆ ಫೆ.24 ರೊಳಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರ ದೂ.ಸಂಖ್ಯೆ: 0821–2564179 ಮತ್ತು ವಿಶ್ವ.ಎಂ ದೂ.ಸಂ: 9481075364 ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ನಾಳೆ ರಾಮಕೃಷ್ಣ ಪರಮಹಂಸರ 191ನೇ ಜಯಂತ್ಯೋತ್ಸವ



ಮೈಸೂರು,ಫೆ.19(ಜಿಎ)–ಮೈಸೂರಿನ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದಿಂದ ಫೆ.21ರಂದು ಸಂಜೆ 5 ಗಂಟೆಗೆ ರಾಮಕೃಷ್ಣ ನಗರದ ರಾಮಕೃಷ್ಣ ವೃತ್ತದಲ್ಲಿ ರಾಮಕೃಷ್ಣ ಪರಮಹಂಸರ 191ನೇ ಜಯಂತ್ಯೋತ್ಸವ, ಆಧ್ಯಾತ್ಮಿಕ ಚಿಂತನ–ಮಂಥನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪ್ರತಿಷ್ಠಾನ ಕಾರ್ಯಾಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4.30ಕ್ಕೆ ರಾಮಕೃಷ್ಣನಗರದ ಐ–ಬ್ಲಾಕ್‌ನ ಗಣಪತಿ ದೇವಸ್ಥಾನದಿಂದ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ರಾಮೇಶ್ವರಪ್ಪ ತಂಡದಿಂದ ಗೀತ ಗಾಯನ, ಶಿವಪ್ರಕಾಶ್ ಗುರೂಜಿಯವರಿಂದ ಯೋಗ ಪ್ರದರ್ಶನ ನಡೆಯಲಿದೆ. ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ ಸಾನ್ನಿಧ್ಯದಲ್ಲಿ ಶ್ರೀ ಭಾಷ್ಯಂ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸುವರು. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ರಿಂದ ಪುಷ್ಪಾರ್ಚನೆ, ಪ್ರೊ.ಎಂ.ಕೃಷ್ಣೇಗೌಡ, ಕೆ.ಅನಂತರಾಮು ಪ್ರಧಾನ ಭಾಷಣ ಮಾಡಲಿದ್ದಾರೆ ಎಂದರು.

ಮೂಳೆ ತಜ್ಞ ಜೆ.ಎಸ್.ಹೆಗಡೆ, ಸಂಸ್ಕೃತ ವಿದುಷಿ ಪ್ರೊ.ನಾಗಲಕ್ಷ್ಮಿ ಚಂದ್ರಶೇಖರ್ ಅವರಿಗೆ ರಾಮಕೃಷ್ಣ ಪರಮಹಂಸ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರತಿಷ್ಠಾನ ಅಧ್ಯಕ್ಷ ಡಿ.ಮಾದೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಆಯೋಜಕ ಸಮಿತಿ ಅಧ್ಯಕ್ಷ ಎಂ.ಬಸವಣ್ಣ, ಕಾರ್ಯದರ್ಶಿ ಕೆಂಪಲಿಂಗರಾಜು, ಖಜಾಂಚಿ ಎಸ್.ಪುರುಷೋತ್ತಮ, ಮಹಿಳಾ ಘಟಕದ ಅಧ್ಯಕ್ಷೆ ಅಮೃತಾ, ಡಾ.ಎಲ್.ಸ್ವಾಮಿಗೌಡ, ಸಂಚಾಲಕರಾದ ದಿನೇಶ್‌ಗೌಡ, ಯಶವಂತ್ ಇದ್ದರು.

ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಸಲ್ಲಿಸಲು ದಿನಾಂಕ ವಿಸ್ತರಣೆ

ಮೈಸೂರು,ಫೆ.19– ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2024–25ನೇ ಶೈಕ್ಷಣಿಕ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಸಲ್ಲಿಸಲು ದಿನಾಂಕವನ್ನು ಫೆ.28ರವರೆಗೆ ವಿಸ್ತರಿಸಿದೆ.

2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಶೇ.60ರಿಂದ ಶೇ, 74.99 ಅಂಕ ಪಡೆದ ಪ.ಜಾತಿಯ ವಿದ್ಯಾರ್ಥಿಗಳಿಗೆ ರೂ. 7000 ಮತ್ತು ಶೇ. 75ಕ್ಕಿಂತ ಹೆಚ್ಚು ಅಂಕ ಪಡೆದ ಪ.ಜಾತಿ ವಿದ್ಯಾರ್ಥಿಗಳಿಗೆ ರೂ. 15000/– ಪ್ರೋತ್ಸಾಹ ಧನವನ್ನು ಮಂಜೂರು ಮಾಡಲಾಗುತ್ತಿದ್ದು, ಆದಾಯ ಮಿತಿ ಇರುವುದಿಲ್ಲ. ರಾಜ್ಯ ಪಠ್ಯಕ್ರಮದಲ್ಲಿ 2025ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರಥಮ ದರ್ಜೆ ಪಡೆದು ಆಧಾರ್ ಸೀಡ್ ಆಗದ ಪ.ಜಾತಿ ವಿದ್ಯಾರ್ಥಿಗಳು ಹಾಗೂ CBSE ಮತ್ತು ICSC ಪಠ್ಯಕ್ರಮದಲ್ಲಿ 2025ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆ ಪಡೆದು ಈವರೆಗೂ ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಸಲ್ಲಿಸಬಹುದು. https://swdservices. karnata ka.gov.in/PrizeMoneyClientApp/register ಮೂಲಕ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗೆ ದೂ.ಸಂ: 0821–2520910 ಸಂಪರ್ಕಿಸಬಹುದಾಗಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಫೆ.19–ವಾಜಮಂಗಲ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಫೆ.20ರಂದು ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಹಾರೋಹಳ್ಳಿ, ಮೆಲ್ಲಹಳ್ಳಿ, ಗಳಿಗರಹುಂಡಿ, ಶಿವಪುರ, ಲಕ್ಷ್ಮಿಪುರಂ, ಹಲಗಯ್ಯನಹುಂಡಿ, ಎಟಿಎಂಇ ಕಾಲೇಜು, ಹೆಚ್‌ಎನ್‌ಕೆ ಇಂಡಸ್ಟ್ರೀಸ್, ಬನ್ನೂರು ಮುಖ್ಯ ರಸ್ತೆ, ಟಿ.ನರಸೀಪುರ ಮುಖ್ಯ ರಸ್ತೆ, ನಾಡನಹಳ್ಳಿ, ಭುಗತಹಳ್ಳಿ, ವಾಜಮಂಗಲ, ವರುಣ, ದಂಡಿಕೆರೆ, ಪಿಲ್ಲಹಳ್ಳಿ, ಚಿಕ್ಕಹಳ್ಳಿ, ಚೋರನಹಳ್ಳಿ, ಯಾಂದಳ್ಳಿ, ವರಕೋಡು, ಮೋಸಂಬಾಯನಹಳ್ಳಿ, ಬಡಗಲಹುಂಡಿ, ಕೆಂಪೇಗೌಡನಹುಂಡಿ, ಈಗಲ್ ಬರ್ಗ್ ಬಡಾವಣೆ, ವಸಂತನಗರ, ಪ್ರಕೃತಿ ಬಡಾವಣೆ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಶಾಂತವೇರಿ ಗೋಪಾಲಗೌಡನಗರ, ಜೆಎಸ್‌ಎಸ್ ಬಡಾವಣೆ 2ನೇ ಹಂತ, ಪೊಲೀಸ್ ಬಡಾವಣೆ 3ನೇ ಹಂತ, ಬಿವಿಎಲ್ ಬಡಾವಣೆ, ಸಪ್ತಮಾತೃಕ ಬಡಾವಣೆ, ಹೋಟೆಲ್ ಯತಿನ್, ಮೈ–ಸೆಮ್ ಕಾಲೇಜು, ವಿಟಿಯು ರೀಜನಲ್ ಸೆಂಟರ್, ಲಲಿತಾದ್ರಿಪುರ, ಲಲಿತಾದ್ರಿನಗರ ಬಡಾವಣೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಸಹಾಯಧನ ಸೌಲಭ್ಯ ಒದಗಿಸಲು ಅರ್ಜಿ ಆಹ್ವಾನ

ಮೈಸೂರು,ಫೆ.19–ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ, ಕರ್ನಾಟಕ ಮಡಿವಾಳ ಮಾಚೀದೇವ ಅಭಿವೃದ್ಧಿ, ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ, ಕರ್ನಾಟಕ ರಾಜ್ಯ ಕಾಡುಗೊಲ್ಲ ಅಭಿವೃದ್ಧಿ, ಕರ್ನಾಟಕ ಉಪ್ಪಾರ ಅಭಿವೃದ್ಧಿ, ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮಗಳ ಸಮುದಾಯದವರಿಗೆ 2025–26 ನೇ ಸಾಲಿನಲ್ಲಿ ಆಹಾರ ವಾಹಿನಿ (ಆಹಾರ ಕಿಯೋಸ್ಕ್) ಯೋಜನೆಯ ಸಹಾಯಧನ ಸೌಲಭ್ಯ ಒದಗಿಸಲು ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಜಿಯನ್ನು ಮಾ.6ರೊಳಗೆ ಸೇವಾ ಸಿಂಧು ಪೋರ್ಟಲ್‌ನ http://sevasindhu.karnataka.gov.in ಲಿಂಕ್ ಮೂಲಕ ಗ್ರಾಮ ಒನ್, ಕರ್ನಾಟಕ ಒನ್, ಬೆಂಗಳೂರು ಒನ್ ಸೇವಾ ಕೇಂದ್ರಗಳಲ್ಲಿ ಸಲ್ಲಿಸಬಹುದು. ಆಹಾರವಾಹಿನಿ (ಆಹಾರ ಕಿಯೋಸ್ಕ್) ಯೋಜನೆಯಡಿ ಸ್ಥಳಾಂತರಿಸಬಹುದಾದ ತಿಂಡಿ ಮಳಿಗೆಗಳನ್ನು ನಾಲ್ಕು ಚಕ್ರಗಳ ಇಗಿ –ಗೂಡ್ಸ್ ವಾಹನಗಳನ್ನು ಅಗತ್ಯಕ್ಕೆ ತಕ್ಕಂತೆ ನವೀಕರಿಸಿ ಫಲಾನುಭವಿಗಳಿಗೆ ವಿತರಿಸುವ ಯೋಜನೆಯಾಗಿದೆ. ನಿಗಮದಿಂದ ವಾಹನ ಖರೀದಿಗೆ 3 ಲಕ್ಷಗಳ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು ಉಳಿಕೆ ಮೊತ್ತವನ್ನು ಬ್ಯಾಂಕುಗಳು, ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಬಹುದಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0821–2341194 ಸಂಪರ್ಕಿಸಬಹುದು.

ನಿಧನ


ಪಿ.ಸಿದ್ದಚಾರ್



ಮೈಸೂರು: ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ಮೈಸೂರು ನಗರಾಧ್ಯಕ್ಷರಾಗಿದ್ದ ಮೈಸೂರಿನ ಜೆ.ಪಿ.ನಗರದ ನಿವಾಸಿ ಪಿ.ಸಿದ್ದಚಾರ್ (75) ಬುಧವಾರ ರಾತ್ರಿ ನಿಧನರಾಗಿದ್ದಾರೆ. ದಿವಂಗತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಮತ್ತು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗುರುವಾರ ಮಧ್ಯಾಹ್ನ ಜೆ.ಪಿ.ನಗರದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ರಾಜ್ಯಾಧ್ಯಕ್ಷ ಕೆ.ಪಿ. ನಂಜುಂಡಿ ಮತ್ತು ಮೈಸೂರಿನ ವಿಶ್ವಕರ್ಮ ಸಮಾಜದ ಮುಖಂಡರಾದ ರಿಶಿ ವಿಶ್ವಕರ್ಮ ಅವರು ಸಿದ್ದಚಾರ್ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಶ್ರೀಮತಿ ಅಮೃತಾಮೂರ್ತಿ



ಮೈಸೂರು ನಗರದ ಬೋಗಾದಿ ಬಡಾವಣೆಯ ನಿವಾಸಿ ಶ್ರೀಮತಿ ಅಮೃತಾ ಮೂರ್ತಿ ಬೆಂಗಳೂರಿನ ಯಲಹಂಕ ಬಳಿ ಸಂಭವಿಸಿದ ಅಪಘಾತದಿಂದಾಗಿ ಇಂದು ಗುರುವಾರ (ಫೆ.19) ಮುಂಜಾನೆ 1.30ರ ಸಮಯದಲ್ಲಿ ನಿಧನರಾಗಿದ್ದಾರೆ. ಶ್ರೀಯುತರು ಎಸ್ಸಾರ್ಕೆ ಎಂದೇ ಖ್ಯಾತರಾಗಿದ್ದ, ಸಂಗೀತ ವಿಮರ್ಶಕ ದಿವಂಗತ ಎಸ್ ಆರ್ ಕೃಷ್ಣಮೂರ್ತಿ ಯವರ ಪತ್ನಿ. ಮೃತರು ಇಬ್ಬರು ಗಂಡು ಮಕ್ಕಳು, ಒಬ್ಬ ಹೆಣ್ಣುಮಗಳು ಸಹಿತ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ಸಿದ್ದಮ್ಮ



ಮೈಸೂರಿನ ತಿಲಕನಗರ ನಿವಾಸಿ, ಮಹಾನಗರ ಪಾಲಿಕೆ ಮಾಜಿ ಸದಸ್ಯ ನಂದಕುಮಾರ್ ತಾಯಿ ಸಿದ್ದಮ್ಮ(85) ತಮ್ಮ ಸ್ವಗೃಹದಲ್ಲಿ ಗುರುವಾರ ರಾತ್ರಿ ನಿಧನರಾದರು.

ಇವರು ಮೂರು ಜನ ಗಂಡು ಮಕ್ಕಳು, ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಬನ್ನಿಮಂಟಪದ ಜೋಡಿ ತೆಂಗಿನಮರ ರುದ್ರಭೂಮಿಯಲ್ಲಿ ಫೆ.20ರ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.2.2026 ಶುಕ್ರವಾರ, ಮಳೆ ನಕ್ಷತ್ರ: ಶತಭಿಷ 19.02.2026 ರಿಂದ 03.03.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಉತ್ತರಭಾದ್ರ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

- **ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಸುಬ್ಬರಾಯನ ಕೆರೆ :** ಗುರು ವೈಭವೋತ್ಸವ–2026, ಧಾರ್ಮಿಕ ಕಾರ್ಯಕ್ರಮಗಳು, ಬೆಳಗ್ಗೆ 7ಕ್ಕೆ ಶ್ರೀಸೂಕ್ತ ಹೋಮ (ಮದುವೆ, ಕಲ್ಯಾಣ ಸಿದ್ಧಿ, ವ್ಯಾಪಾರ ವೃದ್ಧಿ), ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಸುಬ್ಬರಾಯನ ಕೆರೆ.
- **ನಾಗರಿಕ ವೇದಿಕೆ** : ಹೊರನಾಡ ಅನ್ನಪೂರ್ಣೇಶ್ವರಿ ರಥೋತ್ಸವ ಪ್ರಯುಕ್ತ ಶ್ರೀ ಅನ್ನಪೂರ್ಣೇಶ್ವರಿ ದೇವಿಗೆ ಅಭಿಷೇಕ, ಅನ್ನಸಂತರ್ಪಣೆ, ಸ್ಥಳ: ವೇದಿಕೆ ಆವರಣ, ಕುವೆಂಪುನಗರ, ಬೆಳಗ್ಗೆ 8 ರಿಂದ.
- **ಶ್ರೀ ಅನ್ನಪೂರ್ಣೇಶ್ವರಿ ಸೇವಾ ಟ್ರಸ್ಟ್** : ಶ್ರೀ ಅನ್ನಪೂರ್ಣೇಶ್ವರಿ ಅಮ್ಮನವರ 4ನೇ ವರ್ಷದ ವರ್ಧಂತಿ ಮಹೋತ್ಸವ, ಬೆಳಗ್ಗೆ 8 ಗಂಟೆಗೆ ಶ್ರೀ ಅನ್ನಪೂರ್ಣೇಶ್ವಿ ಅಮ್ಮನವರ ಅಭಿಷೇಕ, ದುರ್ಗಾಹೋಮ, ಪೂರ್ಣಾಹುತಿ, ಮಹಾಮಂಗಳಾರತಿ, ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ, ಸಂಜೆ 5ಕ್ಕೆ ಶ್ರೀ ಅನ್ನಪೂರ್ಣೇಶ್ವರಿ ತಂಡದವರಿಂದ ಭಜನೆ, ಸಂಜೆ 6 ರಿಂದ ಮೈಸೂರು ಮಂಜು, ಜನಪದ ಸಿರಿ ತಂಡದವರಿಂದ ಜನಪದ ಭಕ್ತಿಗೀತೆ ಕಾರ್ಯಕ್ರಮ, ರಾತ್ರಿ 8.30ಕ್ಕೆ ವಿಶೇಷ ಪೂಜೆ ಮತ್ತು ಪ್ರಸಾದ ವಿತರಣೆ, ಸ್ಥಳ: ಶ್ರೀ ಅನ್ನಪೂರ್ಣೇಶ್ವರಿ ಸನ್ನಿಧಿ, ವಿಜಯನಗರ 4ನೇ ಹಂತ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಪಾರ್ಕಿಸನ್ ಕಾಯಿಲೆ, ಮೈಗ್ರೇನ್, ಕಣ್ಣು–ಮೂಗಿನ ಅಲರ್ಜಿ, ಕೊಲೆಸ್ಟ್ರಾಲ್‌ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಸೋರಿಯಾಸಿಸ್(ಕಿಟಿಬಾ ಕುಷ್ಠ), ಶ್ರವಣ ಮತ್ತು ಕಿವಿಯ ಆರೈಕೆ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.
- **ಜೆಎಸ್‌ಎಸ್ ಮಹಿಳಾ ಕಾಲೇಜು** : ಕಮ್ಯೂನಿಕೇಷನ್ ಮತ್ತು ಸಾಫ್ಟ್‌ಸ್ಕಿಲ್ಸ್ ಕುರಿತು ಕಾರ್ಯಾಗಾರ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಮೈಸೂರು ವಿವಿ ಕೆರಿಯರ್ ಹಬ್ ಸಂಯೋಜಕ ಪ್ರೊ. ಆರ್. ಮಹೇಶ್, ಅಧ್ಯಕ್ಷತೆ : ಪ್ರಿನ್ಸಿಪಾಲ್ ಡಾ. ರೇಚಣ್ಣ, ಉಪಸ್ಥಿತರು : ಎಕ್ಸಾಮಿನೇಷನ್ ಕಂಟ್ರೋಲರ್ ಎಂ.ಎಂ. ಸ್ವಾಮಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.
- **ಭಾರತೀಯ ಅಂಚೆ ಇಲಾಖೆ** : 38ನೇ ಅಖಿಲ ಭಾರತ ಅಂಚೆ ಸಾಂಸ್ಕೃತಿಕ ಸಮಾವೇಶದ ಸಮಾರೋಪ, ಬಹುಮಾನ ವಿತರಣಾ ಸಮಾರಂಭ, ಮುಖ್ಯ ಅತಿಥಿಗಳು : ಪದ್ಮಶ್ರೀ ಪುರಸ್ಕೃತರಾದ ಹಿಂದೂಸ್ಥಾನಿ ಶಾಸ್ತ್ರೀಯ ಗಾಯಕ ಪಂಡಿತ್ ಎಂ. ವೆಂಕಟೇಶ್‌ಕುಮಾರ್, ಅಧ್ಯಕ್ಷತೆ : ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಕೆ. ಪ್ರಕಾಶ್, ಸ್ಥಳ: ಅಂಚೆ ತರಬೇತಿ ಕೇಂದ್ರದ ಸಭಾಂಗಣ, ನಜರ್‌ಬಾದ್ ಪೊಲೀಸ್ ಠಾಣೆ ಎದುರು, ಬೆಳಗ್ಗೆ 10.30ಕ್ಕೆ.
- **ಶಾರದಾ ವಿಲಾಸ ಕಾಲೇಜು** : ಶಾರದೋತ್ಸವ–2026, ಉದ್ಘಾಟನೆ : ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ನಾಟ್ಯಾಚಾರ್ಯ ಪ್ರೊ. ಕೆ. ರಾಮಮೂರ್ತಿರಾವ್, ಗೌರವ ಅತಿಥಿಗಳು : ಎಸ್‌ವಿಇಐ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಂಯ, ಕಾರ್ಯದರ್ಶಿ ಆರ್. ದಿನೇಶ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕ, ಸ್ಥಳ: ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.
- **ಕರ್ನಾಟಕ ಸಾಹಿತ್ಯ ಅಕಾಡೆಮಿ, ಚಕೋರ ಸಾಹಿತ್ಯ ವಿಚಾರ ವೇದಿಕೆ, ಪರಿಸರ ವಿಜ್ಞಾನ ಅಧ್ಯಯನ ವಿಭಾಗ** : ವಿಶೇಷ ಉಪನ್ಯಾಸ ಮಾಲಿಕೆ–11, ವಿಷಯ : ಪೂರ್ಣಚಂದ್ರ ತೇಜಸ್ವಿ ಅವರ ಕಥನಗಳಲ್ಲಿ ಪರಿಸರ, ಅಧ್ಯಕ್ಷತೆ : ಮೈಸೂರು ವಿವಿ ಪ್ರೊ. ಎನ್.ಕೆ. ಲೋಕನಾಥ್, ಉಪಸ್ಥಿತರು : ಪರಿಸರ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಎನ್.ಎಸ್. ರಾಜು, ಉಪನ್ಯಾಸ : ಕನ್ನಡ ಉಪನ್ಯಾಸಕ ರೋಹಿತ್ ಅಗಸರಹಳ್ಳಿ, ಮುಖ್ಯ ಅತಿಥಿಗಳು : ಮಂಡ್ಯ ವಿವಿ ಕುಲಸಚಿವ ಪ್ರೊ. ಜಿ.ವಿ. ವೆಂಕಟರಮಣ, ಅಕಾಡೆಮಿ ಸದಸ್ಯ ಸಂಚಾಲಕ ಪ್ರೊ. ಎಸ್. ಚಂದ್ರಕಿರಣ್ ಕುಳವಾಡಿ, ವೇದಿಕೆ ಜಿಲ್ಲಾ ಸಂಚಾಲಕರಾದ ಡಾ. ಎನ್. ಯೋಗೇಶ್, ಡಾ. ಶಭಾನ ಮೈಸೂರು, ಸ್ಥಳ: ವಿಭಾಗದ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.
- **ಮಾಲಿನಿ ನೃತ್ಯಶಾಲೆ ಮತ್ತು ಸಾಂಸ್ಕೃತಿಕ ಕೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ** : ಮಾಲಿನಿ ನೃತ್ಯಶಾಲೆ ವತಿಯಿಂದ ಭೂ ಕೈಲಾಸ ರಾವಣಗರ್ವಭಂಗ ಭರತನಾಟ್ಯ ಹಾಗೂ ನೃತ್ಯರೂಪಕ, ಸನ್ಮಾನಿತರು : ಹರಿಕಥಾ ವಿದ್ವಾಂಸ ಲೋಕೇಶ್‌ದಾಸ್, ಪುರುಷೋತ್ತಮ್ ಭಾರದ್ವಾಜ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಮಧ್ಯಾಹ್ನ 3ಕ್ಕೆ
- **ಮೈಸೂರು ವಿಶ್ವವಿದ್ಯಾನಿಲಯ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ** : ವಿಶೇಷ ಉಪನ್ಯಾಸ ಮಾಲಿಕೆ–7, ಮುಕ್ತ ವ್ಯಸನ ಬದುಕು ಹಸನ, ಅಧ್ಯಕ್ಷತೆ : ಹಿರಿಯ ಪ್ರಾಧ್ಯಾಪಕ ಪ್ರೊ. ಎಂ. ಚಂದ್ರಶೇಖರ, ಸ್ಥಳ: ಡಾ. ಎಸ್.ಆರ್. ರಂಗನಾಥನ್ ಸಭಾಂಗಣ, ಮಧ್ಯಾಹ್ನ 3.30ಕ್ಕೆ.
- **ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ:** ಯುಕ್ತಿ–2026 ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ವಿಟಿಯು ಎಕ್ಸಿಕ್ಯೂಟಿವ್ ಕೌನ್ಸಿಲ್ ಸದಸ್ಯ ಡಾ.ಬಿ.ಸದಾಶಿವೇಗೌಡ, ಅಧ್ಯಕ್ಷತೆ: ವಿಟಿಯು ಪ್ರಾದೇಶಿಕ ನಿರ್ದೇಶಕ ಡಾ.ಹೆಚ್.ಎಂ.ನಂಜುಂಡಸ್ವಾಮಿ, ಸ್ಥಳ: ವಿಟಿಯು ಮೈಸೂರು ಆವರಣ, ಸಂಜೆ 5ಕ್ಕೆ.
- **ಗಂಧದಗುಡಿ ಫೌಂಡೇಷನ್, ನೇಪಥ್ಯ ರಂಗ ತಂಡ** : ಮಾದಕ ದ್ರವ್ಯಗಳ ನಿರ್ಮೂಲನೆ ಹಾಗೂ ಅದರ ಸೇವನೆಯಿಂದ ಆಗುವ ಅನಾಹುತಗಳ ಕುರಿತು ಬೀದಿ ನಾಟಕ, ಉಪಸ್ಥಿತರು : ಉಪ ಪೊಲೀಸ್ ಆಯುಕ್ತ ಕೆ.ಎಸ್. ಸುಂದರ್‌ರಾಜ್, ಎಂ.ಎಂ. ನಿಖಿಲೇಶ್, ಪ್ರದೀಪ್, ಆರ್ಯನ್ ಗಂಧದ ಗುಡಿ, ಗೌತಮ್ ವಿರಾಜ್, ಆರ್. ಯಶೋಧ, ಮಹದೇವಶೆಟ್ಟಿ, ಭಾರ್ಗವಿ, ಗಣೇಶ್, ಸಾಗರ್, ವಿಜಯ್, ಸ್ಥಳ: ಚಿಕ್ಕ ಗಡಿಯಾರ, ಸಂಜೆ 5ಕ್ಕೆ.
- **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ:** ಸಂಸ್ಥೆಯ 90ನೇ ವಾರ್ಷಿಕೋತ್ಸವ, ಮಹಾಶಿವರಾತ್ರಿ ಪ್ರಯುಕ್ತ ಗುಜರಾತಿನ ಸುಪ್ರಸಿದ್ಧ ಶ್ರೀ ಸೋಮನಾಥ ದಿವ್ಯ ದರ್ಶನ, ಸಂಜೆ 6.15 ರಿಂದ ಸಂಚಾಲಕರಾದ ಬಿ.ಕೆ. ಮೋಹನ ಅವರಿಂದ ನನ್ನ ಖುಷಿ ನನ್ನ ಕೈಯಲ್ಲಿ ಕುರಿತು ಪ್ರವಚನ, ರಾತ್ರಿ 7ಕ್ಕೆ ಸೀನಿಯರ್ ಕನ್ಸಲ್ಟೆಂಟ್ ಡಾ. ಕೆ. ಜಾವೀದ್ ನಯೀಮ್ ಅವರಿಂದ ಗೌರವಪೂರ್ಣ ವೃದ್ಧಾಪ್ಯ ಕುರಿತು ಉಪನ್ಯಾಸ, ಕೇರಳ, ಕಲ್ಪೆಟ್ಟದ ಮೂಕಾಂಬಿಕಾ ಮೇಳದಿಂದ ಚಂಡೆ ವಾದ್ಯ, ಸ್ಥಳ: ಹುಣಸೂರು ರಸ್ತೆ, ಐಶ್ವರ್ಯ ಪೆಟ್ರೋಲ್ ಬಂಕ್ ಎದುರು.
- **ಸೂತ್ರ ಫೌಂಡೇಷನ್** : ವಾರಾಂತ್ಯ ರಂಗಶಾಲೆಯ ಮಕ್ಕಳು ಅಭಿನಯಿಸುವ ನಾಟಕ ಪಂಜರ ಶಾಲೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಸಿ.ಆರ್. ನಾಗರಾಜಯ್ಯ, ದೂರದರ್ಶನ ಕೇಂದ್ರದ ಕಾರ್ಯಕ್ರಮ ನಿರ್ವಾಹಕಿ ಶ್ರೀಮತಿ ಎಂ.ಎಸ್. ಲಕ್ಷ್ಮೀಕಾರಂತ್, ರಂಗ ನಿರ್ದೇಶಕ ದಿನೇಶ್ ಚಮ್ಮಾಳಿಗೆ, ಫೌಂಡೇಷನ್ ಸಂಸ್ಥಾಪಕ ಕಾರ್ಯದರ್ಶಿ ಜಿ. ಜಗದೀಶ್‌ಕುಮಾರ್, ಸ್ಥಳ: ಕಿರು ರಂಗಮಂದಿರ, ಸಂಜೆ 6.30ಕ್ಕೆ.

ತಿರುಮಕೂಡಲಿನಲ್ಲಿಂದು

- **ಶ್ರೀ ವ್ಯಾಸರಾಜ ಮಠ (ಸೋಸಲೆ) :** ಪುನಃಪ್ರತಿಷ್ಠಾಪನೆ ಹಾಗೂ ನೂತನ ಭವನ ಉದ್ಘಾಟನೆ, ದಿವ್ಯ ಸನ್ನಿಧಾನ : ಶ್ರೀ 1008 ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರು, ಶ್ರೀ 1008 ಶ್ರೀ ಸುಜನಿಧಿತೀರ್ಥ ಶ್ರೀಪಾದಂಗಳವರು, ಬೆಳಗ್ಗೆ 5.30 ರಿಂದ ವಿವಿಧ ಪೂಜಾ ಕೈಂಕರ್ಯ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ: ಬಿ.ಕೆ.ಮೀನಾಕ್ಷಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ರೋಹಿಣಿ ಸುಧಾಂ, ವ್ಯಾಖ್ಯಾನ–ಡಾ.ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆ ಗಳು, 9.05 ನಮ್ಮ ಆರೋಗ್ಯ, 9.30 ಗಾಂಧೀಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಕುನ್ನುಕುಡಿ ಬಾಲಮುರಳಿ ಕೃಷ್ಣನ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ: ಜಿ.ಎನ್.ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಅಕ್ಷತಾ ಎಸ್.ಭಟ್, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ನಾರಾಯಣ ಐಯ್ಯಂಗಾರ್ –ಗೋಟೂ ವಾದ್ಯ, 4.00 ಮಹಿಳಾರಂಗ– ಸಖೀ ಸಾಹಿತ್ಯ ಮಹಿಳಾ ಬರಹಗಾರರ ಜೊತೆ ಮಾತುಕತೆ, 4.30 ಪ್ರಾಯೋಜಿತ ಕಾರ್ಯಕ್ರಮ ಆಧುನಿಕ ಕೃಷಿ ಚಾವಡಿ–ವಿಜ್ಞಾನಿಗಳಿಂದ ಕೃಷಿಕರವರೆಗೆ, ಪ್ರಾಯೋಜಕರು–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ, 6.50 ಕೃಷಿರಂಗ ಮೈಸೂರಿನ C.I.I.L. ಸಭಾಂಗಣದಲ್ಲಿ ರೇಡಿಯೊ ಕಿಸಾನ್ ದಿನದ ಸಂದರ್ಭದಲ್ಲಿ ಏರ್ಪಡಿಸಾಗಿದ್ದ ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಹಾಗೂ ಕೃಷಿ ನವೋದ್ಯಮಗಳನ್ನು ಕುರಿತ ಕಾರ್ಯಾಗಾರದ ಬಾನುಲಿ ವರದಿ, ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ರಸಮಂಜರಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಅನಂತಪದ್ಮನಾಭ .ಎ–ವೀಣಾವಾದನ, 10.00 ಆಕಾಶವಾಣಿ ಸಂಗೀತ ಸಮ್ಮೇಳನ, ಕಲ್ಯಾಣಿ ಕೌತಲ್ಕರ್–ಲಘು ಸಂಗೀತ, ಹಸ್ಮುಖ್ ಪಟಡಿಯಾ –ಲಘು ಸಂಗೀತ

ಮೈಸೂರು ಮಿತ್ರ ಶುಕ್ರವಾರ 20 ಫೆಬ್ರವರಿ 2026

ರಾಜ್ಯದ ಸಮಗ್ರ ಅಭಿವೃದ್ಧಿಗೆ 13 ಅಂಶಗಳ ಪ್ರಸ್ತಾವನೆ ಸಿಎಂಗೆ ಸಲ್ಲಿಕೆ

ಬಜೆಟ್‌ನಲ್ಲಿ ಪ್ರಕಟಿಸುವಂತೆ ಶಾಸಕ ದಿನೇಶ್ ಗೂಳಿಗೌಡ ಆಗ್ರಹ



ಬೆಂಗಳೂರಿನಲ್ಲಿ ಗುರುವಾರ ಶಾಸಕ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ರಾಜ್ಯದ ಸಮಗ್ರ ಅಭಿವೃದ್ಧಿಗೆ 13 ಅಂಶಗಳ ಯೋಜನೆ ಪ್ರಕಟಿಸುವಂತೆ ಕೋರಿದರು.

ಬೆಂಗಳೂರು, ಫೆ.19(ಬಿಎಲ್‌ಯು)– ರಾಜ್ಯದ ಸಮಗ್ರ ಅಭಿವೃದ್ಧಿಗೆ 13 ಪ್ರಮುಖ ಯೋಜನೆಗಳನ್ನು ಘೋಷಣೆ ಮಾಡುವಂತೆ ಕರ್ನಾಟಕ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರೂ ಆದ ಶಾಸಕ ದಿನೇಶ್ ಗೂಳಿಗೌಡ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ.

ಬೆಂಗಳೂರಿನಲ್ಲಿ ಇಂದು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಅವರು, ಆರೋಗ್ಯ, ಕೃಷಿ, ತಂತ್ರಜ್ಞಾನ ಮತ್ತು ಆಡಳಿತ ಸುಧಾರಣೆಗೆ ಪೂರಕವಾದ 13 ಅಂಶಗಳ ಸಮಗ್ರ ಪ್ರಸ್ತಾವನೆಯನ್ನು ಸಲ್ಲಿಸಿದರು.

ಬೆಂಗಳೂರಿನ ಕೆಂಪೇಗೌಡ ಬಡಾವಣೆಯಲ್ಲಿ 20 ಎಕರೆ ಪ್ರದೇಶದಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆಯ ನೂತನ ಘಟಕ ಸ್ಥಾಪನೆ ಮಾಡಿ, ರೋಗಿಗಳ ಒತ್ತಡ ಕಡಿಮೆ ಮಾಡಬೇಕು.

ಮೈಸೂರು ರೇಷ್ಮೆ ಸೀರೆ ಉತ್ಪಾದನೆಯನ್ನು 5 ಸಾವಿರಕ್ಕೆ ಹೆಚ್ಚಳ ಮಾಡಬೇಕು. ನೂತನ ಜಲ ಆಯೋಗ ರಚನೆ ಮಾಡಿ ಜಲಾಶಯಗಳ ನಿರ್ವಹಣೆ, ಮಳೆ ನೀರು ಸಂಗ್ರಹ ಹಾಗೂ ಕೃಷಿ ಕೈಗಾರಿಕೆಗಳಿಗೆ ಸಮರ್ಪಕ ನೀರು ಪೂರೈಸಲು ವೈಜ್ಞಾನಿಕ ಸಲಹೆ ನೀಡಲು ಅವಕಾಶ ಕಲ್ಪಿಸಬೇಕು.

ಹಾಲು ಉತ್ಪಾದಕರ ಪ್ರೋತ್ಸಾಹ ಧನವನ್ನು 5 ರಿಂದ 7 ರೂಪಾಯಿಗಳಿಗೆ ಹೆಚ್ಚಿಸಬೇಕು, ಶಾಸಕರ ಪ್ರದೇಶಾಭಿವೃದ್ಧಿ ನಿಧಿಯನ್ನು 2 ರಿಂದ 4 ಕೋಟಿಗೆ ಹೆಚ್ಚಳ ಮಾಡಬೇಕು.

ಪ್ರತಿ ಜಿಲ್ಲೆಯಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಳವಡಿಕೆಗೆ ಅನುಕೂಲವಾಗುವಂತೆ ಡಿಪ್ಲೋಮೊ ಕೋರ್ಸ್ ಆರಂಭಿಸಬೇಕು, ಮೈಸೂರಲ್ಲಿ ಕಾನೂನು ವಿಶ್ವವಿದ್ಯಾನಿಲಯ ಪ್ರಾದೇಶಿಕ ಕಚೇರಿ ಸ್ಥಾಪನೆ ಮಾಡಬೇಕು, ಪರಿಸರ ಮಾಲಿನ್ಯ ತಡೆಗೆ ಎಲ್ಲಾ ಇಲಾಖೆಗಳಲ್ಲಿ ಎಲೆಕ್ಟ್ರಾನಿಕ್ ವಾಹನ ಖರೀದಿಸಬೇಕು.

ಗ್ಯಾರಂಟಿ ಯೋಜನೆಗಳ ನಿರ್ವಹಣೆಗೆ ಐಎಎಸ್ ಅಧಿಕಾರಿ ನೇತೃತ್ವದ ಪ್ರತ್ಯೇಕ ಸಚಿವಾಲಯ ಸ್ಥಾಪಿಸಬೇಕು, ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕನಿಷ್ಠ ಸಾವಿರ ಮನೆ ನಿರ್ಮಿಸಬೇಕು, ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ಭತ್ಯೆಯನ್ನು ಹೆಚ್ಚಳ ಮಾಡಬೇಕು.

ರೈತರ ಸಾಲದ ಮೊತ್ತ ಹೆಚ್ಚಳ ಮಾಡಬೇಕು, ಶೂನ್ಯ ಬಡ್ಡಿ ದರದ ಸಾಲದ ಒಟ್ಟು ಅನುದಾನವನ್ನು 28 ಸಾವಿರದಿಂದ 30 ಸಾವಿರಕ್ಕೆ ಹೆಚ್ಚಿಸಬೇಕು, ರೈತರ ಸಾಲ ಮನ್ನಾ ಮಾಡಿ, ಹೊಸ ಸಾಲ ಪಡೆಯಲು ಅವಕಾಶ ಕಲ್ಪಿಸಬೇಕು ಎಂದು ದಿನೇಶ್ ಗೂಳಿಗೌಡ ಒತ್ತಾಯಿಸಿದ್ದಾರೆ.

ಮೈಸೂರು ನಾರಾಯಣ ಆಸ್ಪತ್ರೆಯಲ್ಲಿ ಸುಧಾರಿತ ರೇಡಿಯೇಷನ್ ಆಂಕಾಲಜಿ ಸೇವೆಗಳಿಗೆ ಚಾಲನೆ

ಗಣಪತಿ ಸಚ್ಚಿದಾನಂದ ಶ್ರೀಗಳಿಂದ ಹೊಸ ಚಿಕಿತ್ಸಾ ವಿಧಾನದ ಬಗ್ಗೆ ಮೆಚ್ಚುಗೆ

ಮೈಸೂರು, ಫೆ.19(ಎಂಟಿವೈ)– ಕ್ಯಾನ್ಸರ್ ರೋಗಿಗಳಿಗೆ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಗುಣಮಟ್ಟದ ಚಿಕಿತ್ಸೆ ನೀಡಲು ಮೈಸೂರಿನ ನಾರಾಯಣ ಆಸ್ಪತ್ರೆಯ ರೇಡಿಯೇಷನ್ ಆಂಕಾಲಜಿ ವಿಭಾಗವು 'ನೆಕ್ಸ್ಟ್ ಜನರೇಷನ್ ಲೀನಿಯರ್ ಆಕ್ಸಿಲರೇಟರ್'(ಎಲ್‌ಐಎನ್‌ಎಸಿ) ಸಾಧನ ಅಳವಡಿಸಿಕೊಂಡಿದ್ದು, ಈ ನೂತನ ಚಿಕಿತ್ಸಾ ವಿಧಾನವನ್ನು ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ವೀಕ್ಷಿಸಿ, ಶುಭ ಕೋರಿದರು.

ಮೈಸೂರಿನ ರಿಂಗ್ ರಸ್ತೆಯಲ್ಲಿರುವ ನಾರಾಯಣ ಆಸ್ಪತ್ರೆಯಲ್ಲಿ ಗುರುವಾರ ಬೆಳಗ್ಗೆ ನಡೆದ ಕಾರ್ಯಕ್ರಮದಲ್ಲಿ ರೇಡಿಯೇಷನ್ ಆಂಕಾಲಜಿ ವಿಭಾಗದಲ್ಲಿ ಕ್ಯಾನ್ಸರ್ ರೋಗಿಗಳ ಚಿಕಿತ್ಸೆಗಾಗಿ ಹೊಸದಾಗಿ ಅಳವಡಿಸಿರುವ ಹೊಸ ತಂತ್ರಜ್ಞಾನವುಳ್ಳ 'ನೆಕ್ಸ್ಟ್ ಜನರೇಷನ್ ಲೀನಿಯರ್ ಆಕ್ಸಿಲರೇಟರ್' ಸಾಧನದ ಬಗ್ಗೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮಾಹಿತಿ ಪಡೆದರು. ಅಲ್ಲದೆ, ಅದರ ಕಾರ್ಯವೈಖರಿ, ಕ್ಯಾನ್ಸರ್ ರೋಗದ ನಿಖರ ಪತ್ತೆಗಾಗಿ ಹೊಸ ಸಾಧನದ ಮಹತ್ವದ ಬಗ್ಗೆ ಅಚ್ಚರಿಗೊಂಡರು.

ಪವಿತ್ರ ಸೇವೆ: ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಇದೇ ವೇಳೆ ಮಾತನಾಡಿ, ವೈದ್ಯಕೀಯ ವೃತ್ತಿಯು ನೋವನ್ನು ನಿವಾರಿಸುವ ಮತ್ತು ಜೀವವನ್ನು ಉಳಿಸುವ ಒಂದು ಪವಿತ್ರ ಸೇವೆ ಎಂದು ಪರಿಗಣಿಸಲ್ಪಟ್ಟಿದೆ. ಸುಧಾರಿತ ಕ್ಯಾನ್ಸರ್ ಚಿಕಿತ್ಸೆಯು ವಿಕಸನಗೊಂಡು ಬಲಗೊಳ್ಳುತ್ತಿರುವುದು ಕಷ್ಟದಲ್ಲಿರುವ ಕುಟುಂಬಗಳಿಗೆ ದೊಡ್ಡ ಭರವಸೆ ಮತ್ತು ಧೈರ್ಯ ನೀಡುತ್ತದೆ ಎಂದರು.

ಒತ್ತಡ ಮುಕ್ತ ಜೀವನ: ಎಲ್ಲರೂ ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳಬೇಕು. ಸಾತ್ವಿಕ ಆಹಾರ ಸೇವನೆ, ಮೊಬೈಲ್ ಅತಿಯಾದ ಬಳಕೆ ಸೇರಿದಂತೆ ಎಲ್ಲಾ ರೀತಿಯ ವ್ಯಸನಗಳಿಂದ ದೂರವಿರಬೇಕು. ಪ್ರಾಣಾಯಾಮ ಮತ್ತು ಧ್ಯಾನ ಮಾಡುವ ಅಭ್ಯಾಸ ಮಾಡಬೇಕು. ನಿಯಮಿತ ವ್ಯಾಯಾಮ, ನಿದ್ರೆ ಮತ್ತು ಎಚ್ಚರಾಗುವ ಚಕ್ರವನ್ನು ಸೂಕ್ತ ರೀತಿಯಲ್ಲಿ ಕಾಪಾಡಿಕೊಳ್ಳುವುದು ಹಾಗೂ ಒತ್ತಡ ಮುಕ್ತ ಮತ್ತು ತೃಪ್ತಿದಾಯಕ ಜೀವನ ನಡೆಸಬೇಕು. ಮೆಡಿಕಲ್, ಸರ್ಜಿಕಲ್ ಮತ್ತು ರೇಡಿಯೇಷನ್ ಆಂಕಾಲಜಿಯ ವಿವಿಧ ವಿಭಾಗಗಳ ತಜ್ಞರ ತಂಡದ ಬೆಂಬಲದೊಂದಿಗೆ, ನಾರಾಯಣ ಆಸ್ಪತ್ರೆ ಕ್ಯಾನ್ಸರ್ ಚಿಕಿತ್ಸಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಿಕೊಳ್ಳುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಸುಧಾರಿತ ಸೌಲಭ್ಯ: ಇದಕ್ಕೂ ಮುನ್ನ ನಾರಾಯಣ ಹೆಲ್ತ್ ಸಂಸ್ಥೆಯ ಸಂಸ್ಥಾಪಕರಾದ ಡಾ.ದೇವಿಶೆಟ್ಟಿ ಮಾತನಾಡಿ, ಸಮಾಜಕ್ಕೆ ಸಮಗ್ರ ಕ್ಯಾನ್ಸರ್ ಚಿಕಿತ್ಸಾ ಸೌಲಭ್ಯ ಒದಗಿಸಲು ನಾವು ಬದ್ಧರಾಗಿದ್ದೇವೆ. ಭಾರತದಾದ್ಯಂತ ಕ್ಯಾನ್ಸರ್ ಪ್ರಕರಣಗಳು ಸ್ಥಿರವಾಗಿ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ, ನಮ್ಮ ಮುಂದಿರುವ ಸವಾಲು ಕೇವಲ ಚಿಕಿತ್ಸಾ ಸಾಮರ್ಥ್ಯಗಳನ್ನು ಹೆಚ್ಚಿಸುವುದು ಮಾತ್ರವೇ ಅಲ್ಲ, ಬದಲಿಗೆ ಈ ಸುಧಾರಿತ ಸೌಲಭ್ಯಗಳು ಅಗತ್ಯವಿರುವ ಪ್ರತಿಯೊಬ್ಬ ರೋಗಿಗೂ ತಲುಪುವಂತೆ ನೋಡಿಕೊಳ್ಳುವುದು.

ವೈದ್ಯಕೀಯ ವಿಜ್ಞಾನ ಪ್ರಗತಿ ಎಲ್ಲರಿಗಾಗಿ: ಸುಧಾರಿತ ರೇಡಿಯೇಷನ್ ಥೆರಪಿಯನ್ನು ಜನರ ಸಮೀಪಕ್ಕೆ ತರುವುದರಿಂದ ಆರಂಭಿಕ ಹಂತದ ಚಿಕಿತ್ಸೆ ಮತ್ತು ಉತ್ತಮ ಫಲಿತಾಂಶಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಈ ತಾಂತ್ರಿಕ ಅಪ್ ಗ್ರೇಡ್ ನಿಖರ ಆಂಕಾಲಜಿ ಚಿಕಿತ್ಸೆ ಒದಗಿಸುವ ನಮ್ಮ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ವೈದ್ಯಕೀಯ ವಿಜ್ಞಾನದ ಪ್ರಗತಿಯು ಕೇವಲ ದೊಡ್ಡ ಮಹಾನಗರಗಳಿಗೆ ಮಾತ್ರವೇ ಸೀಮಿತವಾಗದೆ ಎಲ್ಲರಿಗೂ ಸಮಾನವಾಗಿ ದೊರಕುವಂತೆ ಮಾಡುತ್ತದೆ ಎಂದು ತಿಳಿಸಿದರು.

ಮೈಸೂರಿನ ನಾರಾಯಣ ಆಸ್ಪತ್ರೆಯಲ್ಲಿ ರೇಡಿಯೇಷನ್ ಆಂಕಾಲಜಿ ಸಾಮರ್ಥ್ಯವನ್ನು ಮೇಲ್ದರ್ಜೆಗೇರಿಸುವ ಮೂಲಕ ಮಂಡ್ಯ, ಮಡಿಕೇರಿ, ಚಾಮರಾಜನಗರ, ಹಾಸನ ಮತ್ತು ರಾಮನಗರದಂತಹ ನೆರೆಯ ಜಿಲ್ಲೆಗಳ ರೋಗಿಗಳು ಸುಧಾರಿತ ರೇಡಿಯೇಷನ್ ಥೆರಪಿ ಚಿಕಿತ್ಸಾ ಸೌಲಭ್ಯ ಒದಗಿಸುತ್ತಿದೆ. ಕ್ಯಾನ್ಸರ್ ತಡೆಗಟ್ಟುವಿಕೆ ಮಾಸಾಚರಣೆ ಸಂದರ್ಭದಲ್ಲಿಯೇ ಅತ್ಯಾಧುನಿಕ ಸೌಲಭ್ಯದ ಚಿಕಿತ್ಸಾ ವ್ಯವಸ್ಥೆ ಅನುಷ್ಠಾನಕ್ಕೆ ತರಲಾಗಿದೆ. ನಮ್ಮ ಸಂಕಲ್ಪ ಕೇವಲ ಜಾಗೃತಿ ಮೂಡಿಸುವುದು ಮಾತ್ರವಲ್ಲದೆ, ಕ್ಯಾನ್ಸರ್ ವಿರುದ್ಧದ ಹೋರಾಟದಲ್ಲಿ ನಿರ್ಣಾಯಕ ಕ್ರಮ ಕೈಗೊಳ್ಳುವುದೇ ಆಗಿದೆ ಎಂದರು.

ನಿಖರ ರೇಡಿಯೇಷನ್ ಡೋಸ್: 'ಎಲೆಕ್ಟಾ ಇನ್ಫಿನಿಟಿ ಲೀನಿಯರ್ ಆಕ್ಸಿಲರೇಟರ್' ವ್ಯವಸ್ಥೆಯು ಎಲೆಕ್ಟಾ ಸಂಸ್ಥೆಯ ನೆಕ್ಸ್ಟ್ ಜನರೇಷನ್ ರೇಡಿಯೇಷನ್ ಥೆರಪಿ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯನ್ನು ಅತ್ಯಂತ ನಿಖರವಾದ ಮತ್ತು ಮಾಡ್ಯುಲೇಟೆಡ್ ಚಿಕಿತ್ಸೆಗಳನ್ನು ಒದಗಿಸಲು ವಿನ್ಯಾಸಗೊಳಿಸಲಾಗಿದೆ. ಈ ಸುಧಾರಿತ ತಂತ್ರಜ್ಞಾನವು ಅತ್ಯಾಧುನಿಕ ಬೀಮ್ ಶೇಪಿಂಗ್ ಮತ್ತು ಇಮೇಜ್ ಗೈಡೆಡ್ ರೇಡಿಯೇಷನ್ ಥೆರಪಿ ಸಾಮರ್ಥ್ಯ ಒಳಗೊಂಡಿದೆ. ಕೇವಲ ಟ್ಯೂಮರ್ ಇರುವ ಭಾಗಕ್ಕೆ ಮಾತ್ರ ನಿಖರವಾದ ರೇಡಿಯೇಷನ್ ಡೋಸ್ ನೀಡಲು ಸಹಾಯ ಮಾಡುತ್ತದೆ. ಈ ವ್ಯವಸ್ಥೆಯು ವೈದ್ಯಕೀಯ ನಿಖರತೆ ಮತ್ತು ಸುರಕ್ಷತೆಯ ಉನ್ನತ ಗುಣಮಟ್ಟವನ್ನು ಕಾಯ್ದುಕೊಳ್ಳುವ ಜೊತೆಗೆ, ಚಿಕಿತ್ಸೆಯ ಸಮಯವನ್ನು ಕಡಿಮೆ ಮಾಡುವ ಮೂಲಕ ಕಾರ್ಯದಕ್ಷತೆಯನ್ನು ಹೆಚ್ಚಿಸುತ್ತದೆ. ರೋಗಿಗಳ ಚಿಕಿತ್ಸಾ ಫಲಿತಾಂಶ ಮತ್ತು ಅನುಭವವನ್ನು ಮತ್ತಷ್ಟು ಸುಧಾರಿಸಲು ಅತ್ಯಾಧುನಿಕ ಆಂಕಾಲಜಿ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಾರಾಯಣ ಹೆಲ್ತ್ ಸಂಸ್ಥೆಯ ಪವನಕುಮಾರ್ ಪರಮಾತ್ಮುನಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ನಾರಾಯಣ ಆಸ್ಪತ್ರೆಯ ರೇಡಿಯೇಷನ್ ಆಂಕಾಲಜಿ ವಿಭಾಗವು 'ನೆಕ್ಸ್ಟ್ ಜನರೇಷನ್ ಲೀನಿಯರ್ ಆಕ್ಸಿಲರೇಟರ್'(ಎಲ್‌ಐಎನ್‌ಎಸಿ) ಸಾಧನ ಅಳವಡಿಸಿಕೊಂಡಿದ್ದು, ಈ ನೂತನ ಚಿಕಿತ್ಸಾ ವ್ಯವಸ್ಥೆಯನ್ನು ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ವೀಕ್ಷಿಸಿ, ಶುಭ ಕೋರಿದರು.

ವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆ ಅಪಾಯ ತಡೆಯುತ್ತೆ

ಮೈಸೂರು,ಫೆ.19(ಪಿಎಂ)– ಬಾಟಲ್ ನೀರು ಬಳಕೆಯು ಕ್ಯಾನ್ಸರ್ ಸೇರಿದಂತೆ ಯಾವುದೇ ನಿರ್ದಿಷ್ಟ ರೀತಿಯ ಕಾಯಿಲೆಗೆ ಕಾರಣವಾಗುತ್ತದೆ ಎಂದು ಸಾಬೀತುಪಡಿಸಲು ಯಾವುದೇ ವೈಜ್ಞಾನಿಕ ಪುರಾವೆಗಳಿಲ್ಲ. ಬಹುಶಃ ಭವಿಷ್ಯದಲ್ಲಿ ತಜ್ಞರು ಇದನ್ನು ಕಂಡುಕೊಳ್ಳಬಹುದು ಎಂದು ನಾರಾಯಣ ಹೆಲ್ತ್ ಸಂಸ್ಥಾಪಕ ಮತ್ತು ಅಧ್ಯಕ್ಷ ಡಾ.ದೇವಿ ಪ್ರಸಾದ್ ಶೆಟ್ಟಿ ಅಭಿಪ್ರಾಯಪಟ್ಟರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು ಇತ್ತೀಚಿನ ದಿನಗಳಲ್ಲಿ ಹೆಚ್ಚು ಯುವ ಜನರು ಹೃದಯ ಸಂಬಂಧಿ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆಯೇ ಎಂಬುದಕ್ಕೆ ಪ್ರತಿಕ್ರಿಯಿಸಿ, 50 ವರ್ಷದ ಸದೃಢ ವ್ಯಕ್ತಿಯೊಬ್ಬರು ಮ್ಯಾರಥಾನ್‌ನಲ್ಲಿ ಓಡುವಾಗ ಹೃದಯಾಘಾತದಿಂದ ಸಾವನ್ನಪ್ಪಿದ ಸುದ್ದಿಯನ್ನು ಆಗಾಗ್ಗೆ ಕೇಳುತ್ತಿರುತ್ತೇವೆ. ಅಂತಹ ವ್ಯಕ್ತಿಗಳು 10 ವರ್ಷಗಳ ಹಿಂದೆ ಹೃದಯ ತಪಾಸಣೆಗೆ ಒಳಗಾಗಿದ್ದರೆ, ಬದುಕುಳಿಯಲು ಅವಕಾಶ ದೊರೆಯುತ್ತಿತ್ತು ಎಂದು ಹೇಳಿದರು.

ಹೃದಯ ವೈದ್ಯನಾಗಿ ನನ್ನ ಇಡೀ ಜೀವನದಲ್ಲಿ ಹೃದಯ ಸಂಬಂಧಿ ಕಾಯಿಲೆ ಇರುವ ಯಾರಾದರೂ ಹಠಾತ್ ಮರಣವನ್ನು ಅನುಭವಿಸುವುದನ್ನು ನಾನು ಎಂದಿಗೂ ನೋಡಿಲ್ಲ. ಹೃದಯ ಸಮಸ್ಯೆಗಳನ್ನು ಕೇವಲ ಒಂದು ಸರಳ ರಕ್ತ ಪರೀಕ್ಷೆ, ಇಸಿಜಿ, ಎಕೋ ಕಾರ್ಡಿಯೋಗ್ರಾಮ್ ಮತ್ತು ಸಿಟಿ ಸ್ಕ್ಯಾನ್ ಮೂಲಕ ಪತ್ತೆಹಚ್ಚಬಹುದು ಎಂದರು.

ಈ ನಾಲ್ಕು ಪರೀಕ್ಷೆಗಳನ್ನು ಮಾಡಿಸಿದರೆ ಅವರಲ್ಲಿ ಯಾರೂ ರೋಗಿಗಳಾಗಿ ಕೊನೆಗೊಳ್ಳುವುದಿಲ್ಲ ಆದ್ದರಿಂದ ಯಾರಿಗಾದರೂ ಹಠಾತ್ ಹೃದಯ ಸ್ತಂಭನ ಅಥವಾ ಕ್ಯಾನ್ಸರ್‌ನ ಕೊನೆಯ ಹಂತ ಇರುವುದು ಪತ್ತೆಯಾದರೆ, ಅವರು ವಾರ್ಷಿಕ ತಪಾಸಣೆಗೆ ಒಳಗಾಗುತ್ತಿರಲಿಲ್ಲ ಎಂದರ್ಥ. ನೀವು ಆರೋಗ್ಯ ರಕ್ಷಣೆ ಬಯಸಿದರೆ ಪ್ರತಿಯೊಬ್ಬರೂ ವಾರ್ಷಿಕ ಆರೋಗ್ಯ ತಪಾಸಣೆಗೆ ಒಳಗಾಗಬೇಕು ಎಂದು ತಿಳಿಸಿದರು.

ಶ್ರೀಲಂಕಾ ಸೋಲಿಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ ಜಿಂಬಾಬ್ವೆ



ಕೊಲಂಬೊ, ಫೆ.19(ವಿವಿಹೆಚ್)– ಇಲ್ಲಿನ ಆರ್ ಪ್ರೇಮದಾಸ್ ಕ್ರೀಡಾಂಗಣದಲ್ಲಿ ನಡೆದ ಐಸಿಸಿ ಪುರುಷರ ಟಿ ಟ್ವೆಂಟಿ ವಿಶ್ವಕಪ್ 2026ರ ಗ್ರೂಪ್ ಹಂತದ 38ನೇ ಪಂದ್ಯದಲ್ಲಿ ಜಿಂಬಾಬ್ವೆ ಟೂರ್ನಿಯಲ್ಲಿ ಸೋಲಿಲ್ಲದ ಸರದಾರರಾಗಿದ್ದ ಶ್ರೀಲಂಕಾಗೆ ಸೋಲುಣಿಸಿದೆ. ಈ ಮೂಲಕ ಜಿಂಬಾಬ್ವೆ 7 ಅಂಕಗಳೊಂದಿಗೆ ಬಿ ಗುಂಪಿನ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ.

ಪಂದ್ಯದಲ್ಲಿ ಟಾಸ್ ಗೆದ್ದ ಶ್ರೀಲಂಕಾ ಬ್ಯಾಟಿಂಗ್ ಆರಿಸಿಕೊಂಡು 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 178 ರನ್ ಕಲೆಹಾಕಿ ಜಿಂಬಾಬ್ವೆಗೆ 179 ರನ್‌ಗಳ ಸವಾಲನ್ನು ನೀಡಿತ್ತು. ಈ ಗುರಿಯನ್ನು ಬೆನ್ನತ್ತಿದ ಜಿಂಬಾಬ್ವೆ 19.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 182 ರನ್ ಬಾರಿಸಿ 6 ವಿಕೆಟ್‌ಗಳ ಗೆಲುವು ದಾಖಲಿಸಿದೆ.

ಶ್ರೀಲಂಕಾ ಇನ್ನಿಂಗ್ಸ್: ತಂಡದ ಪರ ಆರಂಭಿಕರಾಗಿ ಕಣಕ್ಕಿಳಿದ ಪತುಮ್ ನಿಸ್ಸಂಕ 41 ಎಸೆತಗಳಲ್ಲಿ 8 ಬೌಂಡರಿ ಸಹಿತ 62 ರನ್ ಚಚ್ಚಿದರು ಹಾಗೂ ಕುಸಾಲ್ ಪೆರೆರಾ 22 ರನ್ ಬಾರಿಸಿದರೆ, ಇನ್ನುಳಿದಂತೆ ಕುಸಾಲ್ ಮೆಂಡಿಸ್ 14, ಪವನ್ ರತ್ನಾಯಕೆ 25 ಎಸೆತಗಳಲ್ಲಿ 3 ಬೌಂಡರಿ ಹಾಗೂ 2 ಸಿಕ್ಸರ್ ಸಹಿತ 44 ರನ್ ಗಳಿಸಿದರು. ಕಮಿಂದು ಮೆಂಡಿಸ್ 7, ನಾಯಕ ದಸುನ್ ಶಣಕ 6, ದುಶನ್ ಹೇಮಂತ ಡಕ್‌ಔಟ್, ದುನಿತ್ ವೆಲ್ಲಲಾಗೆ ಅಜೇಯ 15 ಹಾಗೂ ಯಾವುದೇ ರನ್ ಗಳಿಸದ ಮಹೀಶ್ ತೀಕ್ಷಣ ಅಜೇಯರಾಗಿ ಉಳಿದರು.

ಜಿಂಬಾಬ್ವೆ ಪರ ಬ್ಲೆಸಿಂಗ್ ಮುಜರ್ಬಾನಿ, ಬ್ರಾಡ್ ಎವನ್ಸ್ ಹಾಗೂ ಗ್ರೇಮ್ ಕ್ರೆಮರ್ ತಲಾ ಎರಡು ವಿಕೆಟ್ ಮತ್ತು ರಯಾನ್ ಬರ್ಲ್ ಒಂದು ವಿಕೆಟ್ ಪಡೆದರು.

ಜಿಂಬಾಬ್ವೆ ಇನ್ನಿಂಗ್ಸ್: ಜಿಂಬಾಬ್ವೆ ಪರ ಆರಂಭಿಕರಾಗಿ ಕಣಕ್ಕಿಳಿದ ಬ್ರಿಯಾನ್ ಬೆನೆಟ್ 48 ಎಸೆತಗಳಲ್ಲಿ 8 ಬೌಂಡರಿ ಸಹಿತ ಅಜೇಯ 63 ರನ್ ಗಳಿಸಿದರು. ತಡಿವನಾಶೆ ಮಾರುಮಾನಿ 34, ರಯಾನ್ ಬರ್ಲ್ 23, ನಾಯಕ ಸಿಕಂದರ್ ರಾಜಾ 26 ಎಸೆತಗಳಲ್ಲಿ 2 ಬೌಂಡರಿ ಹಾಗೂ 4 ಸಿಕ್ಸರ್ ಸಹಿತ 45 ರನ್ ಚಚ್ಚಿದರು. ತಶಿಂಗ ಮುಸೆಕಿವ 1 ಹಾಗೂ ಟೋನಿ ಮುನ್ಯೊಂಗ ಅಜೇಯ 8 ರನ್ ಬಾರಿಸಿದರು. ಶ್ರೀಲಂಕಾದ ಪರ ದುಶನ್ ಹೇಮಂತ ಎರಡು ವಿಕೆಟ್, ದಸುನ್ ಶಣಕ ಹಾಗೂ ದುನಿತ್ ವೆಲ್ಲಲಾಗೆ ತಲಾ ಒಂದೊಂದು ವಿಕೆಟ್ ಪಡೆದರು.

ಕೆನಡಾವನ್ನು ಮಣಿಸಿದ ಅಫ್ಘಾನಿಸ್ತಾನ



ಚೆನ್ನೈ: ಚೆನ್ನೈನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಐಸಿಸಿ ಪುರುಷರ ಟಿ ಟ್ವೆಂಟಿ ವಿಶ್ವಕಪ್ 2026ರ ಗ್ರೂಪ್ ಹಂತದ 39ನೇ ಪಂದ್ಯದಲ್ಲಿ ಕೆನಡಾವನ್ನು 82 ರನ್ ಗಳಿಂದ ಮಣಿಸಿದ ಅಫ್ಘಾನಿಸ್ತಾನ, ಗೆಲುವಿನೊಂದಿಗೆ ಟೂರ್ನಿಗೆ ವಿದಾಯ ಹೇಳಿತು.

ಗುರುವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಅಫ್ಘಾನಿಸ್ತಾನ ಇಬ್ರಾಹಿಂ ಜದ್ರಾನ್ 95(56) ಹಾಗೂ ಸೆದ್ದಿಕ್ಕುಲ್ಲಾ ಅಟಲ್ 44(32) ಆಟದ ಬಲದಿಂದ ನಿಗದಿತ 20 ಓವರ್‌ಗಳಲ್ಲಿ ಕೇವಲ 4 ವಿಕೆಟ್ ಕಳೆದುಕೊಂಡು 200 ರನ್ ಗಳಿಸಿ ಎದುರಾಳಿ ತಂಡಕ್ಕೆ 201ರ ಬೃಹತ್ ಗುರಿ ನೀಡಿತು. ಈ ಮೊತ್ತ ಬೆನ್ನತ್ತಿದ ಕೆನಡಾ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ ಕೇವಲ 118 ರನ್ ಗಳಿಸಿ 82 ರನ್‌ಗಳ ಭಾರೀ ಅಂತರದ ಸೋಲು ಕಂಡಿತು.

ಅಫ್ಘನ್ ಪರ ಮೊಹಮ್ಮದ್ ನಬಿ 4 ಓವರ್ ಬೌಲಿಂಗ್ ಮಾಡಿ 7 ರನ್‌ಗೆ ಪ್ರಮುಖ ನಾಲ್ಕು ವಿಕೆಟ್ ಕಬಳಿಸಿ ಗಮನ ಸೆಳೆದರೆ, ತಮ್ಮ ಭರ್ಜರಿ ಬ್ಯಾಟಿಂಗ್ ಮೂಲಕ ತಂಡದ ಮೊತ್ತ ಹೆಚ್ಚಿಸಿದ ಜದ್ರಾನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಕೊಲೆ ಪ್ರಕರಣದಲ್ಲಿ ಇಬ್ಬರು ಯುವಕರಿಗೆ ಜೀವಾವಧಿ ಶಿಕ್ಷೆ

ಮೈಸೂರು, ಫೆ.19(ಪಿಎಂ)– ವ್ಯಕ್ತಿಯೊಬ್ಬರ ಹತ್ಯೆ ಪ್ರಕರಣ ಸಂಬಂಧ ಇಬ್ಬರು ಯುವಕರಿಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಜೀವಾವಧಿ ಶಿಕ್ಷೆ ಮತ್ತು ತಲಾ 1 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ಇಲವಾಲ ಪೊಲೀಸ್ ಠಾಣೆ ವ್ಯಾಪ್ತಿಯ ಆನಂದೂರು ಗ್ರಾಮದ ಪುನೀತ (23) ಹಾಗೂ ಪವನ್ (24) ಶಿಕ್ಷೆಗೆ ಒಳಗಾದವರು. ಈ ಇಬ್ಬರು ಹಳೇ ದ್ವೇಷದ ಕಾರಣ ತಮ್ಮ ಸ್ವಗ್ರಾಮದ ಮಂಜುನಾಥ ಎಂಬುವವರ ಮೇಲೆ 2017ರ ಜು.7ರಂದು ಗ್ರಾಮದ ಬೆಟ್ಟೇಗೌಡ ಎಂಬುವರ ಅಂಗಡಿ ಮುಂಭಾಗ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೆ, ಮಚ್ಚಿನಿಂದ ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದರು. ಹಲ್ಲೆಗೊಳಗಾಗಿದ್ದ ಮಂಜುನಾಥ ಚಿಕಿತ್ಸೆ ಫಲಕಾರಿಯಾಗದೇ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ 2017ರ ಜು.13ರಂದು ಮೃತಪಟ್ಟಿದ್ದರು.

ಈ ಸಂಬಂಧ ಪ್ರಕರಣ ದಾಖಲಿಸಿ, ತನಿಖೆ ನಡೆಸಿ ಹಿಂದಿನ ತನಿಖಾಧಿಕಾರಿ ಅಬ್ದುಲ್ ಕರೀಂ ರಾವತರ್ ದೋಷಾ ರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಪ್ರಕರಣದಲ್ಲಿ ಸದರಿ ನ್ಯಾಯಾಲಯದ ನ್ಯಾಯಾಧೀಶರಾದ ಉಷಾರಾಣಿ ಅಭಿಯೋಜನೆ ಪರ ಹಾಜರುಪಡಿಸಿದ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ ಈ ಇಬ್ಬರಿಗೆ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಅದರಂತೆ ದಂಡ ಪಾವತಿಸುವಲ್ಲಿ ವಿಫಲವಾದರೆ ಮತ್ತೆ ಒಂದು ವರ್ಷ ಸಾದಾ ಶಿಕ್ಷೆ ವಿಧಿಸಿದ್ದಾರೆ. ಜೊತೆಗೆ ಕಲಂ 504 ಐಪಿಸಿ ಅಡಿಯಲ್ಲಿ ಅಪರಾಧಕ್ಕೆ ಒಂದು ವರ್ಷ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಈ ಪ್ರಕರಣದಲ್ಲಿ ಸರ್ಕಾರಿ ಅಭಿಯೋಜಕಿ ಎಂ.ಎನ್. ರುಜನಾ ರಾವ್ ಸರ್ಕಾರದ ಪರ ವಾದ ಮಂಡಿಸಿದರು ಎಂದು ಪ್ರಕಟಣೆ ತಿಳಿಸಿದೆ.

ಗೃಹಿಣಿ ಅನುಮಾನಾಸ್ಪದ ಸಾವು; ನೇಣು ಬಿಗಿದ ಸ್ಥಿತಿಯಲ್ಲಿ ಶವ ಪತ್ತೆ

ಕ್ರೈಂ ಬಾಕ್ಸ್

ಮೈಸೂರು, ಫೆ.19(ಪಿಎಂ)– ಗೃಹಿಣಿಯೊಬ್ಬರ ಶವ ನೇಣು ಬಿಗಿದ ಸ್ಥಿತಿಯಲ್ಲಿ ಬುಧವಾರ ರಾತ್ರಿ ಸರಸ್ವತಿಪುರಂ 16ನೇ ಮೇನ್‌ನಲ್ಲಿ ಪತ್ತೆಯಾಗಿದೆ. ಇಲ್ಲಿನ ನಿವಾಸಿ ಸಂಧ್ಯಾ(45) ಅವರ ಶವ ಮನೆಯ ಫ್ಯಾನ್‌ಗೆ ನೇಣು ಬಿಗಿದಂತೆ ಪತ್ತೆಯಾಗಿದ್ದು, ಇವರ ಕಿರಿಯ ಸಹೋದರ, ಇದು ಆತ್ಮಹತ್ಯೆ ಅಲ್ಲವೆಂದು ಅನುಮಾನ ವ್ಯಕ್ತಪಡಿಸಿ ನೀಡಿರುವ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿರುವ ಸರಸ್ವತಿಪುರಂ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಗುರುವಾರ ಮಧ್ಯಾಹ್ನ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಶವ ಒಪ್ಪಿಸಿರುವುದಾಗಿ ಸರಸ್ವತಿಪುರಂ ಪೊಲೀಸರು ತಿಳಿಸಿದ್ದಾರೆ.

ಜನಪರ ಕಾಯ್ದೆ ದುರ್ಬಲಗೊಳಿಸುವ ಪ್ರಯತ್ನ: ಲಕ್ಷ್ಮಣ್

ಮನ್ರೇಗಾ ಮರುಜಾರಿಗೆ ಆಗ್ರಹಿಸಿ ಮೈಸೂರು ಜಿಲ್ಲಾ ಕಾಂಗ್ರೆಸ್ ವತಿಯಿಂದ ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕರ್ತರ ಪಾದಯಾತ್ರೆ



ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಮನ್ರೇಗಾ ಮರುಜಾರಿಗಾಗಿ ಮೈಸೂರು ಜಿಲ್ಲಾ ಕಾಂಗ್ರೆಸ್ ವತಿಯಿಂದ ಪಾದಯಾತ್ರೆ ನಡೆಸಲಾಯಿತು.

ಚಾಮುಂಡೇಶ್ವರಿ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿ

ಕಾಂಗ್ರೆಸ್ ಶಾಸಕರಿಲ್ಲದೆ ಚಾಮುಂಡೇಶ್ವರಿ ಕ್ಷೇತ್ರ ಅನಾಥವಾಗಿದೆ. ಅಲ್ಲಿನ ಕಾರ್ಯಕರ್ತರ ಸಮಸ್ಯೆ ಕೇಳುವವರು ಯಾರೂ ಇಲ್ಲವಾಗಿದ್ದಾರೆ. ಜಿಲ್ಲಾ ಕಾಂಗ್ರೆಸ್ ಈ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿ, ಸ್ಥಳೀಯ ಸಮಸ್ಯೆಗಳನ್ನು ಆಲಿಸುವ ಕೆಲಸ ಮಾಡಬೇಕು. ಅಲ್ಲಿನ ಶಾಸಕರು ಮೂರು ಬಾರಿ ಗೆದ್ದು, ನಾಲ್ಕನೇ ಬಾರಿ ಗೆಲ್ಲಲು ತಯಾರಿ ನಡೆಸುತ್ತಿದ್ದು, ಸ್ಥಳೀಯವಾಗಿ ಕಾಂಗ್ರೆಸ್ ಮುಖಂಡರು ಬೆಳೆಯಲು ಅವಕಾಶವನ್ನೇ ನೀಡುತ್ತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಆತ್ಮೀಯರಂತೆ ಬಿಂಬಿಸಿ, ಫೋಟೋ ತೆಗೆಸಿಕೊಂಡು, ಸಿಎಂ ಜೊತೆ ಚೆನ್ನಾಗಿದ್ದೇನೆ ಎಂದು ಹೇಳುವ ಕೆಲಸ ಆಗುತ್ತಿದೆ. ಕಾಂಗ್ರೆಸ್‌ಗೆ ಬರುತ್ತೇನೆ ಎಂದು ಹೇಳಿಕೊಳ್ಳುತ್ತಾ ಕೊನೆಗೆ ಈಗಿರುವ ಪಕ್ಷದಲ್ಲೇ ಚುನಾವಣೆಗೆ ನಿಲ್ಲುವ ನಾಟಕ ಆಡುತ್ತಿದ್ದಾರೆ. ಮತ್ತೊಂದೆಡೆ ಕುಮಾರಸ್ವಾಮಿ ಅವರು ಬಂದು ಜಿಟಿಡಿ ಅವರ ಕಥೆ ಮುಗಿಯಿತು ಎಂದು ಸುಳ್ಳು ಹೇಳುತ್ತಾರೆ. ಆದರೆ ಜಿ.ಟಿ.ದೇವೇಗೌಡ ಅವರು ಜೆಡಿಎಸ್ ಅಭ್ಯರ್ಥಿ, ಹೀಗಾಗಿ ಅಲ್ಲಿ ಈಗಿನಿಂದಲೇ ಇಬ್ಬರು ಇಲ್ಲ ಮೂವರು ಕಾಂಗ್ರೆಸ್ ಅಭ್ಯರ್ಥಿಗಳನ್ನು ತಯಾರು ಮಾಡುವ ಬಗ್ಗೆ ಮುಖ್ಯಮಂತ್ರಿಗಳಿಗೆ ಪಕ್ಷದ ಅಧ್ಯಕ್ಷರು ತಿಳಿಸಬೇಕು. ಕಳೆದ ಬಾರಿ ಹೊರಗಿನಿಂದ ಚುನಾವಣೆಗೆ ನಿಲ್ಲಿಸಿ ಕೊನೆಯ ಘಳಿಗೆಯಲ್ಲಿ ಓಡಿ ಹೋಗುವ ಕೆಲಸ ಈ ಬಾರಿ ಆಗಬಾರದು. –ಎಂ.ಲಕ್ಷ್ಮಣ್

ಮೈಸೂರು, ಫೆ.19(ವಿವಿಹೆಚ್)– ಜಿಲ್ಲಾ ಕಾಂಗ್ರೆಸ್ ಸಮಿತಿ ಸಹಯೋಗದಲ್ಲಿ ಚಾಮುಂಡೇಶ್ವರಿ ಮತ್ತು ಇಲವಾಲ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗದಿಂದ ತಾಲೂಕು ಕಚೇರಿವರೆಗೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಮನರೇಗಾ ಮರುಜಾರಿಗೆ ಆಗ್ರಹಿಸಿ ಪಾದಯಾತ್ರೆ ಮಾಡಿದರು.

ಈ ವೇಳೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಬಿಜೆಪಿಯು ನರೇಗಾ ಅಥವಾ ಗಾಂಧಿ ಹೆಸರನ್ನಷ್ಟೇ ಬದಲಾಯಿಸಿಲ್ಲ. ಬದಲಾಗಿ ಕಾಯ್ದೆಯ ಹೆಸರಿನೊಂದಿಗೆ ಗಾಂಧೀಜಿಯವರ ಆಶಯಗಳನ್ನು ಬದಲಾಯಿಸಿದೆ ಎಂದು ಕಿಡಿಕಾರಿದರು.

ವಿಬಿ ಜಿ ರಾಮ್ ಜಿ ಎಂಬ ಯಾವುದೋ ಗೊತ್ತಿಲ್ಲದ ಹೆಸರನ್ನು ಇಟ್ಟಿದ್ದಾರೆ. ಮೊದಲಿಗೆ 'ರಾಮ'ನ ಹೆಸರನ್ನು ಕಾಂಗ್ರೆಸ್ ವಿರೋಧಿಸುತ್ತಿದೆ ಎಂದು ಬಿಂಬಿಸಲಾಗಿತ್ತು. ಆದರೆ ಅಸಲಿಯತ್ತೇ ಬೇರೆ ಇದೆ. ಈ ಎಲ್ಲದರ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕೆಲಸ ಆಗಬೇಕಿದೆ. ಈ ಹೆಸರಿನೊಂದಿಗೆ ಈ ಹಿಂದೆ ಇದ್ದ ನರೇಗಾ ಸ್ವರೂಪವನ್ನೇ ಬದಲಾಯಿಸಲಾಗಿದೆ. ಇದರಿಂದಾಗಿ ಬಡಜನರಿಗಾಗುತ್ತಿರುವ ಅನ್ಯಾಯ ಪ್ರಶ್ನಿಸಬೇಕಿದೆ. ಬಿಜೆಪಿ ಮತಗಳಿಕೆಗಷ್ಟೇ ಹೋರಾಟಗಳನ್ನು ಕೈಗೆತ್ತಿಕೊಳ್ಳುತ್ತದೆ. ಆದರೆ ಕಾಂಗ್ರೆಸ್ ಜನಪರ ಹೋರಾಟಗಳಿಗಾಗಿ ತನ್ನ ಬದ್ಧತೆಯನ್ನು ಪ್ರದರ್ಶಿಸುತ್ತದೆ ಎಂದರು.

ನರೇಗಾ ಯೋಜನೆ ಜಾರಿಯಾಗಿ 20 ವರ್ಷಗಳಾಗಿದ್ದು, ರಾಜ್ಯದಲ್ಲಿ 180 ಕೋಟಿ ಕೂಲಿ ದಿನ ನಿರ್ಮಾಣ ಮಾಡಿದ್ದೇವೆ. 80 ಸಾವಿರ ಕೋಟಿ ಹಣ ಬಡವರಿಗಾಗಿ ಬಳಸಲಾಗಿದೆ. ಆ ಮೂಲಕ ಹಳ್ಳಿಗಳಲ್ಲಿ ಕೆರೆ–ಕಟ್ಟೆ ನಿರ್ಮಾಣ, ಚೆಕ್ ಡ್ಯಾಂ, ಕಾಲುವೆ ನಿರ್ಮಾಣವಾಗಿವೆ. ಇದನ್ನು ವಿರೂಪಗೊಳಿಸಿ ಜನಪರ ಕಾಯ್ದೆಯೊಂದನ್ನು ದುರ್ಬಲಗೊಳಿಸುವ ಪ್ರಯತ್ನವನ್ನ ಬಿಜೆಪಿ ಮಾಡುತ್ತಿದೆ ಎಂದರು.

ಕೇಂದ್ರ ಸರ್ಕಾರವು ಅಮೆರಿಕಾ ಜೊತೆ 40 ಲಕ್ಷ ಕೋಟಿ ವ್ಯವಹಾರದ ಒಪ್ಪಂದ ಮಾಡಿದ್ದು, ಅಲ್ಲಿನ ಉತ್ಪನ್ನಗಳಿಗೆ ಭಾರತದಲ್ಲಿ ಮಾರುಕಟ್ಟೆ ನೀಡುವ ಯೋಜನೆ ರೂಪಿಸಲಾಗಿದೆ. ರೈತ ವಿರೋಧಿ ಕೆಲಸಗಳಿಗೆ ಬಿಜೆಪಿ ಒಪ್ಪಂದ ಮಾಡಿಕೊಂಡಿದ್ದು, ಧವಸ ಧಾನ್ಯವೂ ಮುಂದಿನ ದಿನಗಳಲ್ಲಿ ಅಮೆರಿಕಾದಿಂದ ಬಂದರೆ ನಮ್ಮ ರೈತರ ಎದೆಗೆ ಮಣ್ಣು ಹಾಕಿದಂತೆ. ಬಿಜೆಪಿಯು ಜನರು ಹಳೆ ಪದ್ಧತಿಗೆ ಹೋಗಿ, ಬಡವರು, ದೀನ–ದಲಿತರು ತಮ್ಮ ಮುಂದೆ ಕೈಕಟ್ಟಿ ನಿಲ್ಲುವಂತೆ ಮಾಡುವ ವ್ಯವಸ್ಥೆ ರೂಪಿಸುತ್ತಿದ್ದಾರೆ. ಅದರಲ್ಲಿ ಈಗಾಗಲೇ ಶೇ.50 ರಷ್ಟು ಗೆದ್ದಿದ್ದಾರೆ ಎಂದರು.

ಇನ್ನು ನರೇಗಾ ಯೋಜನೆಯಿಂದ ಹಳ್ಳಿ ಜನರಿಗೆ ಹೆಚ್ಚಿನ ಅನುಕೂಲವಾಗುತ್ತಿದ್ದು, ಹೊಸ ಯೋಜನೆ ಬಗ್ಗೆ ಪ್ರತಿಯೊಂದು ಹಳ್ಳಿಯಲ್ಲಿಯೂ ಜಾಗೃತಿ ಮೂಡಿಸುವ ಕೆಲಸ ಆಗಬೇಕು ಎಂದು ತಿಳಿಸಿದರು.

ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಮಾತನಾಡಿ, ಉದ್ಯೋಗ ಭದ್ರತೆ ಕಾನೂನು ಅನ್ವಯ ಭಾರತೀಯನಿಗೆ ನಿರಂತರ ಉದ್ಯೋಗ ಹಾಗೂ ವೇತನ ದೊರೆಯಲು ಗಾಂಧೀಜಿ ಹೆಸರಿನಲ್ಲಿ ನರೇಗಾ ಯೋಜನೆ ಜಾರಿಗೊಳಿಸಲಾಯಿತು. ಆದರೆ ಬಿಜೆಪಿ ನರೇಗಾದಲ್ಲಿ ಗಾಂಧಿ ಅವರ ಹೆಸರನ್ನು ತೆಗೆದಿದೆ. ಕಾಂಗ್ರೆಸ್ ಗಾಂಧಿ, ಅಂಬೇಡ್ಕರ್ ಹೆಸರಿನಲ್ಲಿ ಅವರ ಸಿದ್ಧಾಂತದ ಅನ್ವಯ ದೇಶ ಮುಂದುವರೆಸುತ್ತಿದೆ. ಗಾಂಧಿ ಸಿದ್ಧಾಂತವನ್ನು ಬದಲಾಯಿಸಿದರೆ ಕಾಂಗ್ರೆಸ್ ಇಲ್ಲದಂತಾಗುತ್ತದೆ ಎಂಬ ಉದ್ದೇಶದಿಂದ ಬಿಜೆಪಿ ಕಾಯ್ದೆಯ ಸ್ವರೂಪ ಬದಲಾಯಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

2013–14ರಲ್ಲಿ ಉತ್ತರ ಭಾರತದ 12 ರಾಜ್ಯದಲ್ಲಿ ಬಿಜೆಪಿ ಗೆದ್ದಾಗ, ರಾತ್ರೋರಾತ್ರಿ 30 ದಿನಗಳ ಕಾಲ ಗಾಂಧಿ, ಬಾಬು ಜಗಜೀವನ ರಾಮ್, ಡಾ.ಬಿ.ಆರ್. ಅಂಬೇಡ್ಕರ್, ಜಯಪ್ರಕಾಶ್ ನಾರಾಯಣ ಪ್ರತಿಮೆಗಳನ್ನು ಒಡೆದು ಹಾಕಿದರು. ಈ ಬಗ್ಗೆ ಯಾರೂ ಗಮನ ಹರಿಸಿಲ್ಲ. ಆದರೆ ಇಂದು ಅವರ ತತ್ವ ಸಿದ್ಧಾಂತಗಳ ಮೇಲೆ ದಾಳಿಯಾಗುತ್ತಿದೆ. ಕಾಂಗ್ರೆಸ್ ಎಂದಿಗೂ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಗಾಂಧಿ ಅವರ ಸಿದ್ಧಾಂತ ಬಿಟ್ಟು ಕೆಲಸ ಮಾಡುವುದಿಲ್ಲ. ಅದನ್ನು ವಿರೋಧಿಸಿದರೆ ಕಾಂಗ್ರೆಸ್ ವಿರುದ್ಧವಾಗಿರುವ ಯಾವ ರಾಜಕೀಯ ಪಕ್ಷಗಳೂ ಉಳಿಯುವುದಿಲ್ಲ ಎಂದು ಎಚ್ಚರಿಸಿದರು.

ಇಲವಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರುಸ್ವಾಮಿ, ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸತೀಶ್ ಕುಮಾರ್, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಅಧ್ಯಕ್ಷ ಅರುಣ್ ಕುಮಾರ್, ಕಾಂಗ್ರೆಸ್ ಮುಖಂಡರಾದ ಶಿವಪ್ರಸಾದ್, ಸತೀಶ್ ಕುಮಾರ್, ಲೋಕೇಶ್ ಮಾದಾಪುರ, ಉತ್ತನಹಳ್ಳಿ ಶಿವಣ್ಣ, ಮೋಹನ್, ಸತೀಶ್ ಕುಮಾರ್ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಟೀಚರ್: ಈಗಿನ ಕಾಲಕ್ಕೆ ತಕ್ಕ ಒಂದು
ಗಾದೆ ಹೇಳೋ ಗುಂಡ
ಗುಂಡ : ಈಗಿನ ಕಾಲದ ಹುಡುಗಿಯರು ಅಮ್ಮನ
ಕೈ ತುತ್ತಿಗಿಂತ ಪಾನಿಪುರಿ ಅವನ
ಕೈ ತುತ್ತು ಜಾಸ್ತಿ ತಿಂದಿರೋದು..!

ಮೈಸೂರು ಮಿತ್ರ

ಶುಕ್ರವಾರ, ಫೆಬ್ರವರಿ 20, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ದಾರಿ ತಪ್ಪುವುದು ಸಹಜ. ಆದರೆ ತಪ್ಪಿದ ದಾರಿಯಲ್ಲಿ ಪ್ರಯಾಣ ಮುಂದುವರಿಸುವುದು ವಿಪರ್ಯಾಸ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಾತು ಆಡಿದರೆ ಹೋಯಿತು; ಮುತ್ತು ಒಡೆದರೆ ಹೋಯಿತು

ನಿಮ್ಮ ಪತ್ರಗಳು

ಲವಕುಶ ಪಾರ್ಕ್‌ಗೆ ಹಗಲು ವೇಳೆ ಬೀಗ ಹಾಕುವುದು ಉತ್ತಮ

ಮಾನ್ಯರೆ,

ಮೈಸೂರಿನ ಕುವೆಂಪುನಗರದಲ್ಲಿರುವ ಲವಕುಶ ಪಾರ್ಕ್ ಅನ್ನು ಈ ಮೊದಲು ಬೆಳಗ್ಗೆ 11 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಗೇಟ್‌ಗೆ ಬೀಗ ಹಾಕುತ್ತಿದ್ದರು. ಇತ್ತೀಚೆಗೆ ಬೀಗ ಹಾಕುತ್ತಿಲ್ಲ. ಶಾಲಾ–ಕಾಲೇಜುಗಳ ಹುಡುಗ–ಹುಡುಗಿಯರು ಕುಳಿತು ಆಡಬಾರದ ಆಟ ಆಡುತ್ತಾರೆ. ಕಡೇ ಪಕ್ಷ ದಿನವಹಿ ಕೆಲವು ರೋಮಿಯೋ ಜೂಲಿಯಟ್ ಜೋಡಿಗಳು ಇರುತ್ತಾರೆ. ಬಹುತೇಕ ಹುಡುಗಿಯರು ಶಾಲಾ ಯೂನಿಫಾರ್ಮ್‌ನಲ್ಲಿ ಇರುತ್ತಾರೆ. ಇದು ಕಾನೂನು ಪ್ರಕಾರ ಅಪರಾಧವಲ್ಲ ಗೊತ್ತು. ಆದರೆ ವಯಸ್ಸಿನ ಆವೇಗದಲ್ಲಿ ಏನಾದರೂ (!) ಜರುಗಿದರೆ, ಮದುವೆ ಮಾಡಿಕೊಳ್ಳುತ್ತೇನೆ ಎಂದು ಹೇಳಿ ಮೋಸ ಮಾಡಿದ ಎಂದು ಗೋಳಾಡಿ ಪೊಲೀಸ್ ಠಾಣೆ, ಕೋರ್ಟ್ ಎಂದು ಓಡಾಡುವವರು ಅವರೇ. ಪೋಷಕರು ಮಕ್ಕಳು ಕಲಿಯಲು ಶಾಲೆಗೆ ಹೋಗಿದ್ದಾರೆ ಎಂದು ತಿಳಿದಿರುತ್ತಾರೆ. ಪೋಷಕರು ಮಕ್ಕಳ ಚಟುವಟಿಕೆಗಳ ಬಗ್ಗೆ ಎಷ್ಟು ಜಾಗ್ರತೆ ವಹಿಸಿದರೂ ಸಾಲದು. ಪಾರ್ಕ್ ಅನ್ನು 11 ಗಂಟೆಯಿಂದ 4 ಗಂಟೆವರೆಗೆ ಬೀಗ ಹಾಕುವುದು ಉತ್ತಮ.

–ಅಕ್ಕಿಹೆಬ್ಬಾಳು ವೆಂಕಟೇಶ್, ಮೈಸೂರು

ಚಾಮುಂಡಿಪುರಂ ಲೈಬ್ರರಿಯಲ್ಲಿ ಅಪಾಯಕಾರಿ ಕಬ್ಬಿಣದ ಸಲಾಕೆ !

ಮಾನ್ಯರೆ,




ಮೈಸೂರಿನ ಚಾಮುಂಡಿಪುರಂ ಸರ್ಕಾರಿ ಲೈಬ್ರರಿಗೆ ಸಾರ್ವಜನಿಕರು ನಿಯತಕಾಲಿಕೆಯನ್ನು ಓದಲು ಮೆಟ್ಟಿಲು ಹತ್ತಿಕೊಂಡು ಒಂದನೇ ಮಹಡಿಗೆ ಹೋಗುತ್ತಾರೆ. ಆದರೆ ಇಲ್ಲಿ ಒಂದು ಕಬ್ಬಿಣದ ಸಲಾಕಿ (ರಾಡ್) ಇಳಿದು ಬರುವಾಗ ತಲೆಗೆ ಹೊಡೆದು ತುಂಬಾ ನೋವಾಗುತ್ತದೆ. ಇಲ್ಲಿನ ಮೇಲ್ವಿಚಾರಕರು ಇದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡಿಲ್ಲ. ಅಳತೆ ತೆಗೆದುಕೊಂಡು ಹೋಗಿರುತ್ತಾರೆ ಎಂದು ಅಸಡ್ಡೆ ಉತ್ತರ ಕೊಡುತ್ತಾರೆ. ದಿನಪತ್ರಿಕೆಗಳನ್ನು ಓದಲು ಅದರಲ್ಲೂ ವಿಶೇಷವಾಗಿ ವಯಸ್ಸಾದ, ಎತ್ತರ ಇರುವ ಸಾರ್ವಜನಿಕರು ಇಲ್ಲಿಗೆ ದಿನನಿತ್ಯ ಬರುತ್ತಾರೆ. ಅವರು ಮೆಟ್ಟಿಲು ಇಳಿದು ಬರುವಾಗ ಈ ಕಬ್ಬಿಣದ ಸಲಾಕಿ ತಲೆಗೆ ಹೊಡೆದರೆ ರಕ್ತ ಬರುವ ಮಟ್ಟಿಗೆ ನೋವಾಗುತ್ತದೆ. ಪೀಪಲ್ಸ್ ಪಾರ್ಕ್ ಲೈಬ್ರರಿಯಲ್ಲಿರುವ ಇದರ ಮುಖ್ಯಸ್ಥರಾದ ಮಂಜುನಾಥ್ ಅವರು ಇದನ್ನು ಪರಿಶೀಲಿಸಿ ಆದಷ್ಟು ಬೇಗ ಆ ಜಾಗವನ್ನು ಬಟ್ಟೆಯಿಂದ ಮುಚ್ಚಿದರೆ ಸಮಸ್ಯೆ ಪರಿಹಾರವಾಗುತ್ತದೆ. ಇನ್ನೊಂದು ವಾರದಲ್ಲಿ ಅದು ಕಾರ್ಯಗತವಾಗುತ್ತದೆ ಎಂದು ನಮ್ಮೆಲ್ಲರ ಆಶಯ.

– ಶ್ರೀನಿವಾಸ್, ನೊಂದ ಓದುಗ, ಚಾಮುಂಡಿಪುರಂ, ಮೈಸೂರು

ಪ್ರಶಸ್ತಿ ವಂಚಿತ ನಿರ್ದೇಶಕ ಜೋ ಸೈಮನ್!

ಮಾನ್ಯರೆ,



ಹೆಸರಾಂತ ಹಿರಿಯ ನಿರ್ದೇಶಕ ಜೋ ಸೈಮನ್‌ರವರು ಇತ್ತೀಚೆಗೆ ಹೃದಯಾಘಾತದಿಂದ ನಿಧನ ಹೊಂದಿರುವುದು ಚಿತ್ರರಂಗಕ್ಕೆ ಅಪಾರ ನಷ್ಟ ಉಂಟಾಗಿದೆ. ಅವರು ಸಾಹಸಸಿಂಹ ವಿಷ್ಣುವರ್ಧನ್ ಹಾಗೂ ರೆಬಲ್‌ಸ್ಟಾರ್ ಅಂಬರೀಶ್ ಅವರ ಜೊತೆ ಒಳ್ಳೆಯ ಗೆಳೆತನ ಹೊಂದಿದ್ದರು. ಸಿಂಹ ಜೋಡಿ, ಸಾಹಸ ಸಿಂಹ, ಹಾಂಕಾಂಗ್‌ನಲ್ಲಿ ಏಜೆಂಟ್ ಅಮರ್, ಸ್ನೇಹದ ಕಡಲಲ್ಲಿ, ರವಿವರ್ಮ, ಟೈಂ ಬಾಂಬ್ ಹಾಗೂ ಇನ್ನೂ ಹಲವು ಯಶಸ್ವಿ ಚಿತ್ರಗಳನ್ನು ನಿರ್ದೇಶಿಸಿದ್ದರು. ಅಂಬರೀಶ್ ಅವರ ಮಂಡ್ಯದ ಗಂಡು ಶೀರ್ಷಿಕೆಯ ಗೀತೆಯಲ್ಲಿ ಅವರು ಅಂಬರೀಶ್ ಜೊತೆ ನೃತ್ಯ ಮಾಡಿರುವುದು ಎಲ್ಲರ ಗಮನ ಸೆಳೆದಿದೆ. ಆದರೆ ಒಂದು ದುಃಖಕರ ಸಂಗತಿ ಎಂದರೆ ಯಾವುದೇ ಸರ್ಕಾರ ಇಂತಹ ಪ್ರಬುದ್ಧ ನಿರ್ದೇಶಕರನ್ನು ಗುರುತಿಸಿ ಪ್ರಶಸ್ತಿಗಳನ್ನು ನೀಡದಿರುವುದು ನಿಜಕ್ಕೂ ಶೋಚನೀಯ ಸಂಗತಿ. ಅಂದಿನ ಕಾಲದಲ್ಲಿ ಇವರು ನಿರ್ದೇಶಿಸಿದ ಯಾವುದೇ ಚಿತ್ರವಾದರೂ ಸೂಪರ್ ಹಿಟ್ ಶತದಿನೋತ್ಸವ ಆಚರಿಸುತ್ತಿತ್ತು. ಜೋ ಸೈಮನ್ ಆತ್ಮಕ್ಕೆ ಚಿರಶಾಂತಿ ದೊರೆಯಲಿ.


– ಜಿ.ಪಿ.ಸತೀಶ್, ಸಮಾಜ ಸೇವಕ, ಒಂಟಿಕೊಪ್ಪಲ್, ಮೈಸೂರು

ನಾಳೆ ಬಾ.....! ಅಧಿಕಾರ ಹಸ್ತಾಂತರದ ಪ್ರಹಸನ!

ಮಾನ್ಯರೆ,

ರಾಜ್ಯದಲ್ಲಿ ಕಳೆದ ನವೆಂಬರ್‌ನಿಂದಲೇ ಅಧಿಕಾರ ಹಸ್ತಾಂತರದ ಹಗ್ಗ–ಜಗ್ಗಾಟ ನಡೆಯುತ್ತಿದ್ದರೂ ಕಾಂಗ್ರೆಸ್ ಹೈ ಕಮಾಂಡ್ ಇತ್ತ ಭಿನ್ನಮತವನ್ನೂ ನಿಭಾಯಿಸದೆ, ಅತ್ತ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಆಗದೆ ಅಡಕತ್ತರಿಯಲ್ಲಿ ಸಿಕ್ಕಿಕೊಂಡಿದೆ. ಕೊಟ್ಟ ಮಾತನ್ನು ನಡೆಸಿಕೊಡಬೇಕಾದ ಎಐಸಿಸಿ ಅಧ್ಯಕ್ಷರು ಹೊಂದಾಣಿಕೆ ಮಾಡಿಕೊಂಡು ಹೋಗಿ ಎಂದು ಪದೇ ಪದೆ ಹೇಳುತ್ತಿದ್ದಾರೆ. ಹೈಕಮಾಂಡ್ ಕೈಯಲ್ಲಿ ಅಸ್ತ್ರವಿದ್ದರೂ ಪರಸ್ಪರ ಔತಣ ಕೂಟ ಏರ್ಪಡಿಸಿಕೊಂಡು ಬಗೆಹರಿಸಿಕೊಳ್ಳಿ ಎಂದು ನುಣುಚಿಕೊಳ್ಳುವ ತಂತ್ರ ಅನುಸರಿಸಿತು. ಆದರೂ ಬಗೆಹರಿದಿಲ್ಲ. ಇದನ್ನು ಬದಿಗೆ ತಳ್ಳಲು ಬಜೆಟ್ ತಯಾರಿ ಎಂದರು. ಮಾರ್ಚ್ 6ಕ್ಕೆ ಬಜೆಟ್ ಮಂಡನೆ ನಿಗದಿಯಾಗಿದ್ದರೂ, ಜನವರಿಯಲ್ಲೇ ಸಂಕ್ರಾಂತಿಗೇ ಬಜೆಟ್ ತಯಾರಿ ಎಂದರು. ನಂತರ ವಿಧಾನಸಭೆ ವಿಶೇಷ ಅಧಿವೇಶನ ಕರೆದರು. ಅಧಿವೇಶನದ ನಂತರ ಬಜೆಟ್ ತಯಾರಿ ಆರಂಭಿಸಿದರು. ವಾಸ್ತವವಾಗಿ ಬಜೆಟ್‌ಗೆ 15 ದಿನ ಮುಂಚಿತವಾಗಿ ತಯಾರಿ ನಡೆಸುತ್ತಿದ್ದವರು ಒಂದು ತಿಂಗಳ ಮುಂಚಿತವಾಗಿ ಇಲಾಖಾವಾರು ತಯಾರಿ ಆರಂಭಿಸಿದರು. ಇದರ ನಡುವೆ ಶಾಸಕರು, ಸಚಿವರು ಲಭ್ಯವಿಲ್ಲದಂತೆ ಮಾಡಲು ವಿದೇಶ ಪ್ರವಾಸ ಏರ್ಪಡಿಸಿದರು. ಹೀಗೆ ಮುಂದೂಡಲು ನೆಪಗಳು ನೂರಾರು... ಇದು ಮನೆಗೆ ಬೀಗ ಹಾಕಿ, ಬಾಗಿಲ ಮೇಲೆ 'ನಾಳೆ ಬಾ' ಎಂದು ಬರೆದಂತೆ ಆಗಿದೆ. ಆ ನಾಳೆ ಎಂದು ಬರುತ್ತದೆ ಎನ್ನುವುದು ಯಕ್ಷ ಪ್ರಶ್ನೆಯಾಗಿದೆ. ಸಾಲ ಕೊಟ್ಟವರ ಪಾಡು ಇದೇ. ಭಾಷೆ ತೆಗೆದುಕೊಂಡವರ ಪಾಡೂ ಭಿನ್ನವೇನಲ್ಲ. ಗಾದೆಯೇ ಇದೆಯಲ್ಲ ಕೊಟ್ಟವ ಕೋಡಂಗಿ.. ಇಸ್ಕೊಂಡವ ಈರಭದ್ರ....!

–ಮುಳ್ಳೂರು ಪ್ರಕಾಶ್, ಕನಕದಾಸ ನಗರ, ಮೈಸೂರು.



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ಇಂದಿನ ಕಾಲಕ್ಕೆ ಸ್ತ್ರೀ ತತ್ವ ಎಷ್ಟು ಮುಖ್ಯವಾಗುತ್ತದೆ?

ಒಂದು ಕಾಲದಲ್ಲಿ ಪ್ರಪಂಚದಾದ್ಯಂತ ಸ್ತ್ರೀ ತತ್ವದ ಆರಾಧನೆ ಚಾಲ್ತಿಯಲ್ಲಿತ್ತು. ಆದರೆ ದುರದೃಷ್ಟವಶಾತ್, ಧಾರ್ಮಿಕತೆಗೆ ಒಂದು ಮಹತ್ವಾಕಾಂಕ್ಷೆಯ ವಿಧಾನ ಜಾರಿಗೆ ಬಂತು. ಯಾವಾಗ ಪ್ರಪಂಚದಲ್ಲಿ ಗೆಲುವೊಂದೇ ಮಾರ್ಗವಾಯಿತೋ, ಜನರು ಸ್ತ್ರೀ ತತ್ವವನ್ನು ಭೂಮಿಯಿಂದ ನಿರ್ನಾಮ ಮಾಡಿದರು. ಮತ್ತು ಇಂದು, ಯಶಸ್ವಿಯಾಗಲು ಪುರುಷತ್ವವೊಂದೇ ಮಾರ್ಗವಾಗಿದೆ; ನಾವು ನಮ್ಮ ಹೆಣ್ಣುಮಕ್ಕಳನ್ನೂ ಸಹ ಅವರ ವರ್ತನೆ, ವಿಧಾನ ಮತ್ತು ಭಾವನೆಗಳಲ್ಲಿ ಪುರುಷತ್ವದ ಗುಣಗಳನ್ನು ತಂದುಕೊಳ್ಳುವಂತೆ ಒತ್ತಾಯಿಸಿದ್ದೇವೆ. ವಶಪಡಿಸಿಕೊಳ್ಳುವುದೊಂದೇ ಯಶಸ್ಸಿಗೆ ದಾರಿಯೆಂದು ನಾವು ಎಲ್ಲರನ್ನೂ ನಂಬಿಸಿದ್ದೇವೆ.

ಆದರೆ ವಶಪಡಿಸಿಕೊಳ್ಳುವುದು ದಾರಿಯಲ್ಲ; ಆಲಿಂಗಿಸಿಕೊಳ್ಳುವುದೇ ದಾರಿ. ಭೂಮಿಯನ್ನು ಗೆಲ್ಲಲು ಪ್ರಯತ್ನಿಸುತ್ತಿರುವುದು ನಾವಿಂದು ನೋಡುತ್ತಿರುವ ಎಲ್ಲಾ ಅನಾಹುತಗಳಿಗೆ ಎಡೆ ಮಾಡಿಕೊಟ್ಟಿದೆ. ಸ್ತ್ರೀ ತತ್ವವು ಪ್ರಬಲ ಅಂಶವಾಗಿದ್ದಿದ್ದರೆ, ಅಥವಾ ಸ್ತ್ರೀ ಮತ್ತು ಪುರುಷ ತತ್ವಗಳು ಸಮನಾಗಿದ್ದಿದ್ದರೆ, ಪರಿಸರದ ವಿಪತ್ತುಗಳು ಇರುತ್ತಿರಲಿಲ್ಲವೆಂದು ನನ್ನ ಅಭಿಪ್ರಾಯ. ಏಕೆಂದರೆ ಸ್ತ್ರೀ ಶಕ್ತಿ ಹಾಗೂ ಭೂಮಿಯ ಉಪಾಸನೆ ಯಾವಾಗಲೂ ಒಟ್ಟಿಗೆ ನಡೆಯುತ್ತಿತ್ತು. ಭೂಮಿಯನ್ನು ತಾಯಿಯಂತೆ ಕಾಣುತ್ತಿದ್ದ ಸಂಸ್ಕೃತಿಗಳು ಎಂದಿಗೂ ತಮ್ಮ ಸುತ್ತಲಿನ ಪರಿಸರಕ್ಕೆ ಹೆಚ್ಚು ಹಾನಿಯನ್ನು ಉಂಟುಮಾಡಿಲ್ಲ; ಯಾವಾಗ ಗೆಲ್ಲುವುದೊಂದನ್ನೇ ಜೀವನದ ಮಾರ್ಗವಾಗಿ ಪರಿಗಣಿಸಲಾಯಿತೋ ಆಗ ಮಾತ್ರ ನಷ್ಟ ಸಂಭವಿಸಿತು.

ಸದ್ಯದಲ್ಲಿ, ಭೂಮಿಗೆ ಇಷ್ಟೆಲ್ಲಾ ಹಾನಿಯನ್ನುಂಟುಮಾಡಿದ ನಂತರವೂ, ಭೂಮಿಯ ಮೇಲೆ ಸಾಕಷ್ಟು ಆಹಾರವಿದ್ದರೂ ಸಹ, ಅರ್ಧದಷ್ಟು ಜನಕ್ಕೆ ಇನ್ನೂ ಹೊಟ್ಟೆಗೆ ಸರಿಯಾಗಿ ತಿನ್ನಲಾಗುತ್ತಿಲ್ಲ. ಸ್ತ್ರೀ ತತ್ವದ ಅಂಶವು ಪ್ರಬಲವಾಗಿದ್ದಿದ್ದರೆ, ಜನಗಳು ಖಂಡಿತವಾಗಿಯೂ ಸರಿಯಾಗಿ ತಿಂದಿರುತ್ತಿದ್ದರು. ದಯೆ, ಪ್ರೀತಿ ಮತ್ತು ಸದಭಿರುಚಿಗಳು ಮೇಲುಗೈ ಸಾಧಿಸಿರುತ್ತಿದ್ದವು. ನಾವು ಜೀವನವನ್ನು ಅಪ್ಪಿಕೊಳ್ಳುವ ಬದಲು ಅದನ್ನು ಗೆಲ್ಲಲು ನಿರ್ಧರಿಸಿದೆವು. ಸ್ತ್ರೀ ತತ್ವವು ಪ್ರಧಾನವಾಗಿದ್ದಿದ್ದರೆ, ಬಹುಶಃ ನಾವು ಚಂದ್ರ ಅಥವಾ ಮಂಗಳ ಗ್ರಹಕ್ಕೆ ಹೋಗಿರುತ್ತಿರಲಿಲ್ಲ, ಆದರೆ ಅಲ್ಲಿಗೆ ಹೋಗುವ ಮೂಲಕ ನಿಜವಾಗಿಯೂ ನಾವೇನನ್ನು ಸಾಧಿಸಿದ್ದೇವೆ? ಒಂದು ಬಾವುಟವನ್ನು ನೆಟ್ಟು, ಒಂದು ಹೆಜ್ಜೆಗುರುತನ್ನು ಬಿಟ್ಟು ವಾಪಸ್ಸಾಗಿದ್ದೇವೆ. ಇದಕ್ಕೇನಾದರು ಮಹತ್ವವಿದೆಯೇ? ಇದರಿಂದಾಗಿ ಚಂದ್ರನ ಬಗ್ಗೆಯಿದ್ದ ರೋಮಾಂಚನವೆಲ್ಲಾ ಈಗ ಹೊರಟುಹೋಗಿದೆ.

ನಮ್ಮಿಡೀ ಜೀವನದ ಕಡೆಗಿನ ವರ್ತನೆಯು ಏರುಪೇರಾಗಿದೆ. ನಾನು ವೈಜ್ಞಾನಿಕ ಸಾಧನೆಗಳ ವಿರುದ್ಧವಲ್ಲ, ಆದರೆ ನಾವು



"ಬದುಕು ಅಮೂಲ್ಯವಾದುದು. ಅದನ್ನು ಆನಂದದಿಂದ ಅನುಭವಿಸುವುದನ್ನು ಬಿಟ್ಟು ಕಾಣದ ಅಥವಾ ಒಂದಲ್ಲ ಒಂದು ದಿನ ಎಲ್ಲರಿಗೂ ಬರುವ ಸಾವಿನ ಕುರಿತಾಗಿ ಭಯಪಡುವ ಅಗತ್ಯ ವಿಲ್ಲ. ಕೆಲವರು ತುಂಬಾ ಬೇಗ, ಕೆಲವರು ತುಂಬಾ ತಡವಾಗಿ, ಮತ್ತೂ ಕೆಲವರು ಆಕಸ್ಮಿಕವಾಗಿ ಸಾವನ್ನಪ್ಪುವುದು ಸಹಜ. ಅದಕ್ಕೆ ಸಾವಿನ ಭಯವನ್ನು ಬದಿಗೆ ಸರಿಸಿ ಕಣ್ಣಿಗೆ ಕಾಣುವ, ವಾಸ್ತವದಲ್ಲಿರುವ ಬದುಕಿನ ಬಗ್ಗೆ ಆಲೋಚಿಸಿ ಬಾಳುವುದನ್ನು ಕಲಿಯಬೇಕು.

ವಿಜ್ಞಾನವು ಜೀವನದ ಕಡೆಗೆ ನೀಡುವ ದೃಷ್ಟಿಯನ್ನು ಕಳೆದು ಕೊಂಡಿದ್ದೇವೆ. ಬಹಳಷ್ಟು ಜನರಿಗೆ, ವಿಜ್ಞಾನ ಮತ್ತು ತಂತ್ರಜ್ಞಾನವು ಕೇವಲ ಭೂಮಿಯ ಮೇಲಿನ ಎಲ್ಲವನ್ನೂ ನಮ್ಮ ಉಪಯೋಗಕ್ಕೆ ಬಳಸುವ ಬಗ್ಗೆಯಾಗಿದೆ. ಎಲ್ಲವನ್ನೂ ದುರ್ಬಳಕೆ ಮಾಡುವ ಈ ವರ್ತನೆಯು, ತುಂಬ ಗೆಲುವಿನ ಮನೋಭಾವವನ್ನು ಹೊಂದಿದ, ಪುರುಷತ್ವದ ಮಾರ್ಗ. ಪುರುಷ ಹಾಗೂ ಸ್ತ್ರೀ ತತ್ವಗಳೆರಡೂ ಸಹ ಸಮನಾಗಿ ಸರಿದೂಗಿದ್ದಿದ್ದರೆ, ನಾವು ಹೆಚ್ಚು ಉತ್ತಮವಾದ ಬದುಕನ್ನು ಬದುಕುತ್ತಿದ್ದೆವು.


ಭಾರತದಲ್ಲಿ ದೇವಿ ದೇವಸ್ಥಾನಗಳು

ಸ್ತ್ರೀ ತತ್ವದ ಆರಾಧನೆಯು ಭೂಮಿಯ ಮೇಲಿನ ಅತ್ಯಂತ ಪುರಾತನ ರೀತಿಯ ಆರಾಧನೆಯಾಗಿದೆ. ಭಾರತ, ಅರೇಬಿಯಾ, ಮತ್ತು ಆಫ್ರಿಕಾದ ಬಹಳಷ್ಟು ಭಾಗಗಳು ಸ್ತ್ರೀ ದೈವದ ಆರಾಧನೆಯಲ್ಲಿ ತೊಡಗಿದ್ದವು. ಆದರೆ ಇಂದು, ಪ್ರಪಂಚದಾದ್ಯಂತ ಪುರುಷತ್ವಕ್ಕೆ ಬಹಳಷ್ಟು ಪ್ರಾಧಾನ್ಯತೆಯನ್ನು ನೀಡಿರುವ ಕಾರಣದಿಂದಾಗಿ, ಸ್ತ್ರೀ ತತ್ವದ ಆರಾಧನೆಯನ್ನು ಇನ್ನೂ ಉಳಿಸಿಕೊಂಡು ಬಂದಿರುವ ಏಕೈಕ ಸಂಸ್ಕೃತಿಯೆಂದರೆ ಅದು ಭಾರತ.

ಧ್ಯಾನಲಿಂಗವನ್ನು ಪ್ರತಿಷ್ಠಾಪಿಸುವುದಕ್ಕೆ ಸ್ವಲ್ಪ ಮೊದಲು, ನಾನು ಒಂದು ಸಣ್ಣ ಜನರ ಗುಂಪಿನೊಂದಿಗೆ ದೇವಿ ದೇವಸ್ಥಾನಗಳ ಯಾತ್ರೆಗೆ ಹೋಗಿದ್ದೆ. ಆ ಸಮಯದಲ್ಲಿ, ನನಗೆ ತಮಿಳುನಾಡಿನ ಭೂಗೋಳದ ಪರಿಚಯ ಅಷ್ಟಾಗಿ ಇರಲಿಲ್ಲ. ಆದ್ದರಿಂದ ನಾನು ಕರ್ನಾಟಕಕ್ಕೆ ಹೋಗಲು ನಿರ್ಧರಿಸಿದೆ. ಏಕೆಂದರೆ ಅಲ್ಲಿ ನನಗೆ ದೇವಸ್ಥಾನಗಳು ಎಲ್ಲಿವೆ ಎಂಬುದು ಗೊತ್ತಿತ್ತು. ಅವು ಪ್ರಸಿದ್ಧವಾದ ದೇವಸ್ಥಾನಗಳೇನಲ್ಲ, ಆದರೆ ಸಣ್ಣ ಊರು ಮತ್ತು ಹಳ್ಳಿಗಳಲ್ಲಿನ ದೇವಸ್ಥಾನಗಳು. ನನಗೆ ಹಿಂದಿನಿಂದಲೂ ಅವುಗಳ ಬಗ್ಗೆ ತಿಳಿದಿತ್ತು. ಅದಕ್ಕಾಗಿ ನಾವು ಅವುಗಳನ್ನು ಹುಡುಕಿಕೊಂಡು ಹೋದೆವು. ಏಕೆಂದರೆ ನಮಗೆ ಕೆಲವು ವಿಷಯಗಳನ್ನು ಬಗೆಹರಿಸಬೇಕಿತ್ತು ಮತ್ತು ಅದನ್ನು ನೆರವೇರಿಸಲು ನಾವು ಸರಿಯಾದ ಸ್ಥಳ ಹಾಗೂ ಶಕ್ತಿಯ ಹುಡುಕಾಟದಲ್ಲಿದ್ದೆವು. ಈಶ ಯೋಗ ಕೇಂದ್ರದಲ್ಲಿ ನಾವದನ್ನು ಸೃಷ್ಟಿಸಬಹುದಾಗಿತ್ತು, ಆದರೆ ಅದಕ್ಕಾಗಿ ಒಂದು ಮಂದಿರವನ್ನು ಕಟ್ಟಿ ಅದನ್ನು ನಿರಂತರವಾಗಿ ನಿರ್ವಹಿಸಬೇಕಾಗಿತ್ತು. ನಾವಿನ್ನೂ ಧ್ಯಾನಲಿಂಗವನ್ನು ಪ್ರತಿಷ್ಠಾಪಿಸುವುದರಲ್ಲಿದ್ದೆವು, ಹಾಗಾಗಿ ಇದನ್ನೆಲ್ಲಾ ಮಾಡಲು ಮತ್ತೊಂದು ದೇವಸ್ಥಾನವನ್ನು ನಿರ್ಮಿಸುವುದು ನಮಗೆ ಬೇಕಾಗಿರಲಿಲ್ಲ.

ಹಾಗಾಗಿ ನಾವು ಈ ದೇವಸ್ಥಾನಗಳನ್ನು ಹುಡುಕಿಕೊಂಡು ಹೋದೆವು ಮತ್ತು ನಾನು ಸಂಪೂರ್ಣವಾಗಿ ಆಶ್ಚರ್ಯಚಕಿತನಾದೆನು. ಸಣ್ಣ ಊರುಗಳಲ್ಲಿ, ಕೆಲವೊಮ್ಮೆ ಸಣ್ಣ ಹಳ್ಳಿಗಳಲ್ಲಿ ಕೂಡ, ನೂರಾರು ವರ್ಷಗಳ ಹಿಂದೆ ಪ್ರತಿಷ್ಠಾಪಿಸಿದಂತಹ ದೇವಿ ದೇವಸ್ಥಾನಗಳು ಇನ್ನೂ ಸಹ ಬಹಳ ಶಕ್ತಿಯುತವಾಗಿವೆ? ಸಂಪೂರ್ಣವಾಗಿ, ಪ್ರಬಲವಾಗಿ ಮತ್ತು ತೀವ್ರವಾಗಿ ಶಕ್ತಿಯುತವಾಗಿವೆ. ಇವುಗಳಲ್ಲಿ ಬಹಳಷ್ಟು ದೇವಸ್ಥಾನಗಳನ್ನು, ಆ ಪ್ರಾದೇಶಿಕ ಭಾಗದ ಅವಶ್ಯಕತೆಗಳಿಗೆ ತಕ್ಕಂತೆ ನಿರ್ದಿಷ್ಟವಾದ ಉದ್ದೇಶಗಳಿಗಾಗಿ ನಿರ್ಮಿಸಲಾಗಿತ್ತು. ಇದನ್ನು ಯಾರೇ ಮಾಡಿದ್ದರೂ ಸಹ, ತುಂಬ ಚೆನ್ನಾಗಿ ಮಾಡಿದ್ದರು. ತಂತ್ರಜ್ಞಾನವು ಬಹಳ ಉತ್ತಮವಾಗಿತ್ತು ಮತ್ತಿದು ಇಷ್ಟೊಂದು ಸ್ಥಳಗಳಲ್ಲಿ ಆಗಿರಬೇಕೆಂದರೆ, ನಿಸ್ಸಂಶಯವಾಗಿ ಆ ತಂತ್ರಜ್ಞಾನವು ಜನರ ನಡುವೆ ತುಂಬ ವ್ಯಾಪಕ ಮತ್ತು ಪ್ರಸಿದ್ಧವಾಗಿತ್ತು. ಸಣ್ಣ ಹಳ್ಳಿಯೊಂದರಲ್ಲಿ ಯಾರೋ ಒಬ್ಬರು ಅಷ್ಟೊಂದು ದೊಡ್ಡ ಮಟ್ಟದ ಸಂಕೀರ್ಣತೆ ಹೊಂದಿರುವಂತದನ್ನು ಪ್ರತಿಷ್ಠಾಪಿಸಿರುವುದನ್ನು ನೋಡಿದ್ದು ನಮ್ಮಲ್ಲಿ ತುಂಬ ವಿನೀತ ಭಾವವನ್ನು ಮೂಡಿಸಿತು. ಇವರೆಲ್ಲಾ ಹೆಸರಿಲ್ಲದ ಯೋಗಿಗಳು. ಅವರು ಯಾರೆಂಬುದು ಯಾರಿಗೂ ಸಹ ತಿಳಿದಿಲ್ಲ. ಅವರು ದೇವಸ್ಥಾನದ ಮೇಲೆ ತಮ್ಮ ಹೆಸರುಗಳನ್ನು ಬರೆಯಲಿಲ್ಲ ಮತ್ತು ಅದೇ ಅದರ ಸೌಂದರ್ಯ? ಅವರ ಹೆಸರನ್ನು ಬಿಟ್ಟು ಹೋಗುವ ಅಗತ್ಯವನ್ನು ಅವರೆಂದೂ ಯೋಚಿಸಲೇ ಇಲ್ಲ. ಅಲ್ಲಿನ ಶಕ್ತಿಯೊಂದನ್ನೇ ಅವರು ಬಿಟ್ಟುಹೋಗಿರುವುದು.

ಕಿರಿಯ ಶ್ರೇಣಿ ನ್ಯಾಯಾಧೀಶರಾಗಿ ಆಯ್ಕೆಯಾದ ಮಹದೇವಸ್ವಾಮಿ ಅವರಿಗೆ ಲಾಗೈಡ್, ಹಿರಿಯ ವಕೀಲರಿಂದ ಅಭಿನಂದನೆ



ನಂಜನಗೂಡಲ್ಲಿ ವಕೀಲರಾಗಿದ್ದ ಮಹದೇವಸ್ವಾಮಿ ಅವರು ಕಿರಿಯ ಶ್ರೇಣಿ ನ್ಯಾಯಾಧೀಶರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಮೈಸೂರಿನ ಏರ್‌ಲೈನ್ಸ್ ಹೋಟೆಲ್‌ನಲ್ಲಿ 'ಲಾಗೈಡ್' ಬಳಗ ಹಾಗೂ ಹಿರಿಯ ವಕೀಲರು ಮೈಸೂರು ಪೇಟ ತೊಡಿಸಿ, ಶಾಲು ಹೊದಿಸಿ, ಸನ್ಮಾನಿಸಿದರು. ಈ ವೇಳೆ ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಎಚ್.ಎನ್.ವೆಂಕಟೇಶ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಮಾಜಿ ಅಧ್ಯಕ್ಷ ಜಿ.ವಿ.ರಾಮಮೂರ್ತಿ, ಹಿರಿಯ ವಕೀಲರಾದ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ, ವಕೀಲರಾದ ಲೋಕೇಶ್, ಕಿರಣ್, ಜಯ್ ಗಿರೀಶ್, ಮಹೇಶ್ ಹಲವು ಮಹಿಳಾ ವಕೀಲರು ಹಾಜರಿದ್ದರು.

ಇಂದು 38ನೇ ಅಖಿಲ ಭಾರತ ಅಂಚೆ ಸಾಂಸ್ಕೃತಿಕ ಸಮಾವೇಶದ ಬಹುಮಾನ ವಿತರಣೆ

ಮೈಸೂರು, ಫೆ.19–ಕರ್ನಾಟಕ ಅಂಚೆ ವೃತ್ತ ಭಾರತೀಯ ಅಂಚೆ ಇಲಾಖೆಯು 38ನೇ ಅಖಿಲ ಭಾರತ ಅಂಚೆ ಸಾಂಸ್ಕೃತಿಕ ಸಮಾವೇಶದ ಸಮಾರೋಪ ಹಾಗೂ ಬಹುಮಾನ ವಿತರಣಾ ಸಮಾರಂಭವನ್ನು ಫೆ.20ರಂದು ಬೆಳಗ್ಗೆ 10.30 ಗಂಟೆಗೆ ನಜರಾಬಾದ್ ಪೊಲೀಸ್ ಠಾಣೆಯ ಎದುರಿನಲ್ಲಿರುವ ಅಂಚೆ ತರಬೇತಿ ಕೇಂದ್ರದ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಬೆಂಗಳೂರು ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಕೆ.ಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಮಾರಂಭಕ್ಕೆ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು, ಖ್ಯಾತ ಭಾರತೀಯ ಹಿಂದೂಸ್ತಾನಿ ಶಾಸ್ತ್ರೀಯ ಗಾಯಕರಾದ ಪಂಡಿತ್ ಎಂ.ವೆಂಕಟೇಶ್ ಕುಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು,ಫೆ.19–ಕಾಮಗಾರಿ ನಿಮಿತ್ತ ಫೆ.20ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5ರವರೆಗೆ ಭಾರತ್ ಕ್ಯಾನ್ಸರ್ ಆಸ್ಪತ್ರೆ, ಜ್ಯೋತಿರ್ಗಮಯ ಕಾಂಪ್ಲೆಕ್ಸ್, ಇನ್‌ಫೋಸಿಸ್ ಮುಖ್ಯರಸ್ತೆ, ಪಿ.ಕೆ.ಕೆ.ಆರ್ ಕಾಂಕ್ರಿಟ್ ಸುತ್ತಮುತ್ತ, ಲಕ್ಷ್ಮೀಕಾಂತ ದೇವಸ್ಥಾನ ಸುತ್ತಮುತ್ತ, ಅಗ್ನಿಶಾಮಕದಳ ಆಫೀಸ್, ವೆಬ್ ಸಲ್ಯೂಷನ್, ಪ್ಲಾಸ್ಟಿ ಮುಖ್ಯ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಇನ್‌ಫೋಸಿಸ್ ಗೇಟ್–4, ಲಕ್ಷ್ಮೀಕಾಂತ ಬಡಾವಣೆ, ವೀವರ್ಸ್ ಕಾಲೋನಿ, ರಂಗಸನ್ಸ್, ಕ್ಲೂಬರ್ ಪ್ಯಾಬರಿಕ್ ಸೆಂಟರ್ ಹಾಗೂ ಸುತ್ತಮುತ್ತ. ಹೆಬ್ಬಾಳ್ 3ನೇ ಹಂತ, ಹೆಬ್ಬಾಳ್ ಮಾಳ, ಹೆಬ್ಬಾಳ 1ನೇ ಹಂತ, ಸುಬ್ರಮಣ್ಯನಗರ, ಬಸವನಗುಡಿ, ಮಾನಸ ಭಂಡಾರ ಸುತ್ತಮುತ್ತ. ಜಂಬುದೇವಪ್ಪ ಪ್ಯಾಕ್ಟರಿ, ಪಾಮ್ಗೂಲ ಒನ್ ಹೋಟೆಲ್, ಸುಪ್ರಿಂ ಬ್ರಿಕೇಟ್ಸ್, ಅರಸ್‌ಕಾರ್ ಸರ್ವೀಸ್, Opus point godown ಹಾಗೂ ಸುತ್ತಮುತ್ತ. ಆರೋಹ ಹೋಟೆಲ್, ಶುಭೋದಿನಿ ಚೌಲ್ಟ್ರಿ, ರಿಂಗ್ ರೋಡ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಮೈಸೂರು ಜಿಲ್ಲೆಯಲ್ಲಿ ಈ ಸಲ ದ್ವಿತೀಯ ಪಿಯು ಫಲಿತಾಂಶ 10ರೊಳಗೆ ಬರಲೇಬೇಕು

ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಜಿಪಂ ಸಿಇಓ ಯುಕೇಶ್‌ಕುಮಾರ್ ಸೂಚನೆ

ಮೈಸೂರು,ಫೆ.19(ಎಂಟಿವೈ)–ಮೈಸೂರು ಜಿಲ್ಲೆಯಲ್ಲಿ ಈ ಬಾರಿ ದ್ವಿತೀಯ ಪಿಯುಸಿ ಫಲಿತಾಂಶವನ್ನು ಹತ್ತರೊಳಗೆ ತರಲು ಶ್ರಮಿಸಬೇಕು ಎಂದು ಮೈಸೂರು ಜಿಪಂ ಸಿಇಓ ಎಸ್.ಯುಕೇಶ್‌ಕುಮಾರ್ ಸೂಚನೆ ನೀಡಿದ್ದಾರೆ.

ಮೈಸೂರು ಜಿಪಂ ಸಭಾಂಗಣದಲ್ಲಿ ಗುರುವಾರ ಮೈಸೂರು ಜಿಲ್ಲೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಭೆಯಲ್ಲಿ ಮಾತನಾಡಿದ ಅವರು, ಪಿಯುಸಿ ಫಲಿತಾಂಶ ಕಳೆದ ವರ್ಷಕ್ಕಿಂತ ಈ ಬಾರಿ ಸುಧಾರಿಸಬೇಕು. ಜಿಲ್ಲೆಯ ಫಲಿತಾಂಶ 10ನೇ ಸ್ಥಾನದೊಳಗೆ ಬರುವಂತೆ ನೋಡಿಕೊಳ್ಳಬೇಕು. ಕಳೆದ ವರ್ಷ ಜಿಲ್ಲೆಯು 14ನೇ ಸ್ಥಾನ ಹೊಂದಿತ್ತು. ಈ ಬಾರಿ ಅದಕ್ಕಿಂತ ಕಡಿಮೆ ಕುಸಿಯದಂತೆ ನೋಡಿಕೊಳ್ಳಬೇಕು. ಈ ವಿಚಾರದಲ್ಲಿ ಜವಾಬ್ದಾರಿ ಅರಿತು ಕೆಲಸ ಮಾಡಬೇಕು. ಪರೀಕ್ಷೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಫಲಿತಾಂಶ ಮೊದಲ ಐದರೊಳಗೆ ತರುವ ಗುರಿ ಇಟ್ಟುಕೊಂಡು ಶ್ರಮಿಸಿದರೆ, ಅಂತಿಮವಾಗಿ 10ನೇ ಸ್ಥಾನದೊಳಗೆ ತರಬಹುದು. ಸರ್ಕಾರಿ ಕಾಲೇಜುಗಳಲ್ಲಿ ಶೇ.40ಕ್ಕಿಂತ ಕಡಿಮೆ ಫಲಿತಾಂಶ ಬರದಂತೆ ಕಟ್ಟೆಚ್ಚರ ವಹಿಸಬೇಕು. ಒಂದು ವೇಳೆ ಅಷ್ಟು ಕಡಿಮೆ ಫಲಿತಾಂಶ ಬಂದರೆ, ಅಂತಹ ಕಾಲೇಜುಗಳ ಪ್ರಾಂಶುಪಾಲರ ಕಾರ್ಯವೈಖರಿ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ಎಚ್ಚರಿಕೆ ನೀಡಿದರು.



ಮೈಸೂರಿನ ಜಿಪಂ ಸಭಾಂಗಣದಲ್ಲಿ ಮೈಸೂರು ಜಿಲ್ಲೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ಸಭೆಯಲ್ಲಿ ಸಿಇಓ ಎಸ್.ಯುಕೇಶ್‌ಕುಮಾರ್, ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕಿ ನಾಗಮ್ಮ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಶಿಕ್ಷಣ ಕ್ಷೇತ್ರದಲ್ಲಿ ಗಮನ ಸೆಳೆದಿರುವ ಜಿಲ್ಲೆಯಾಗಿದೆ. ಮುಖ್ಯಮಂತ್ರಿಗಳ ತವರು ಜಿಲ್ಲೆಯಾಗಿರುವ ಜತೆಗೆ, ಅನುದಾನ ಸೇರಿದಂತೆ ಇನ್ನಿತರ ಮೂಲ ಸೌಕರ್ಯಗಳನ್ನು ಒದಗಿಸಲು ಹೆಚ್ಚು ಆದ್ಯತೆ ನೀಡಲಾಗುತ್ತಿದೆ. ನಾವು ಅದರಂತೆ ಫಲಿತಾಂಶ ಹೆಚ್ಚು ಬರುವಂತೆ ಮಾಡಬೇಕು. ನಂಜನಗೂಡು ತಾಲೂಕಿನ ಕಾರ್ಯ, ದಾಸನೂರು, ಕೆ.ಆರ್.ನಗರ ತಾಲೂಕಿನ ಗಂಧನಹಳ್ಳಿ ಕಾಲೇಜುಗಳಲ್ಲಿ ಪೂರ್ವ ಪರೀಕ್ಷೆಯಲ್ಲಿ ಇಂಗ್ಲಿಷ್, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ವಿಷಯಗಳಲ್ಲಿ ಕಡಿಮೆ ಅಂಕ ಪಡೆದಿರುವ ವಿದ್ಯಾರ್ಥಿಗಳ ಅಂಕಿ–ಅಂಶಗಳನ್ನು ಪರಿಶೀಲಿಸಿದ ಸಿಇಓ, ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಂದ ವಿವರಣೆ ಪಡೆದರು. ದೇವನೂರು ಸರ್ಕಾರಿ ಕಾಲೇಜಿನಲ್ಲಿ 30 ವಿದ್ಯಾರ್ಥಿಗಳಿದ್ದು, ಫಲಿತಾಂಶ ಸುಧಾರಿಸಲಾಗಿದೆ. ಅದೇ ರೀತಿ ಬೇರೆ ಕಾಲೇಜುಗಳಲ್ಲೂ ಸುಧಾರಣೆಗೆ ಕ್ರಮ ಕೈಗೊಳ್ಳಬೇಕು. ವಿಶೇಷ ತರಗತಿಗಳನ್ನು ನಡೆಸುವ ಜತೆಗೆ, ಪ್ರಗತಿ ಆಶಾದಾಯಕವಾಗಿಲ್ಲದ ವಿದ್ಯಾರ್ಥಿಗಳನ್ನು ಗಮನಿಸಬೇಕು. ಅಂತಹವರ ಪೋಷಕರನ್ನು ಕರೆಯಿಸಿ ಎಚ್ಚರಿಕೆ ನೀಡಬೇಕು ಎಂದು ಸೂಚಿಸಿದರು.

ವಿದ್ಯಾರ್ಥಿಗಳ ಮೇಲೆ ನಿಗಾ ಇರಲಿ: ಹೆಚ್.ಡಿ.ಕೋಟೆ ತಾಲೂಕಿನ ಫಲಿತಾಂಶದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಶೇ.100ರಷ್ಟು ಗುರಿ ಇಟ್ಟುಕೊಳ್ಳುವ ಕೆಲಸ ಮಾಡಿದರೆ ಕನಿಷ್ಠ ಶೇ.80ರಷ್ಟು ಫಲಿತಾಂಶ ಬರಲಿದೆ. ಮಕ್ಕಳಿಗೆ ಸುಮ್ಮನೇ ಪಾಠ ಮಾಡಿ ಹೋದರೆ ಪ್ರಯೋಜನವಾಗದು. ನಮ್ಮ ಗುರಿ ಫಲಿತಾಂಶ ಹೆಚ್ಚು ಮಾಡುವ ಕಡೆಗೆ ಇರಬೇಕು ಎಂದರು. ಪೂರ್ವ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದಿರುವ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ನಡೆಸಬೇಕು. ಇಂಗ್ಲಿಷ್ ಸೇರಿದಂತೆ ಇನ್ನಿತರ ಏಕ ವಿಷಯಗಳಲ್ಲಿ ತೀರಾ ಕಡಿಮೆ ಅಂಕ ಪಡೆದಿರುವ ಮಕ್ಕಳಿಗೆ ವಿಶೇಷ ನಿಗಾ ಇರಿಸಿದರೆ ಉತ್ತಮವಾಗಲಿದೆ ಎಂದರು.

ಡಿಡಿಪಿಯು ನಾಗಮ್ಮ ಮಾತನಾಡಿ, ಕಳೆದ ವರ್ಷಕ್ಕಿಂತ ಈ ಬಾರಿ ಫಲಿತಾಂಶ ಸುಧಾರಿಸಲು ಹಲವಾರು ಕ್ರಮಗಳನ್ನು ಜಾರಿಗೊಳಿಸಲಾಗಿದೆ. ಪ್ರಾಂಶುಪಾಲರು, ಉಪನ್ಯಾಸಕರು ಪೂರ್ವ ಪರೀಕ್ಷೆಯಲ್ಲಿ 20 ಅಂಕ ಪಡೆದಿರುವ ವಿದ್ಯಾರ್ಥಿಗಳನ್ನು ಕರೆದು ಚರ್ಚಿಸಿ, ಅರಿವು ಮೂಡಿಸಲಾಗುತ್ತಿದೆ. ಕೆಲವು ಉಪನ್ಯಾಸಕರು ಇಂತಿಷ್ಟು ಮಕ್ಕಳು ಎನ್ನುವಂತೆ ದತ್ತು ಪಡೆದುಕೊಂಡು ಫಲಿತಾಂಶ ಹೆಚ್ಚು ತರಲು ಒಪ್ಪಿಕೊಂಡಿದ್ದಾರೆ. ಕೆಲವು ಉಪನ್ಯಾಸಕರು ವಿದ್ಯಾರ್ಥಿನಿಲಯಗಳಿಗೆ ತೆರಳಿ ವಿಶೇಷ ತರಗತಿ ನಡೆಸುತ್ತಿದ್ದಾರೆ ಎಂದು ವಿವರಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಅಧಿಕ ಜ್ಞಾನದಿಂದ ಸಾಧನೆ ಸಾಧ್ಯ

ಅಕ್ಕ ಐಎಎಸ್ ಅಕಾಡೆಮಿ ನಿರ್ದೇಶಕ ಡಾ.ಶಿವಕುಮಾರ್ ಸಲಹೆ



ಬೋಗಾದಿಯಲ್ಲಿರುವ ಡಾ.ಅಂಬೇಡ್ಕರ್ ಸರ್ಕಾರಿ ಪಿಯುಸಿ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ನಡೆದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಡಾ.ಶಿವಕುಮಾರ್ ಉದ್ಘಾಟಿಸಿದರು.

ಮೈಸೂರು,ಫೆ19(ಎಂಟಿವೈ)–ವಿದ್ಯಾರ್ಥಿಗಳು ಡಾ.ಅಂಬೇಡ್ಕರ್ ಅವರನ್ನು ಸ್ಫೂರ್ತಿಯಾಗಿಟ್ಟುಕೊಂಡು ಹೆಚ್ಚು ಪುಸ್ತಕಗಳನ್ನು ಓದುವ ಮೂಲಕ ಅಧಿಕ ಜ್ಞಾನ ಸಂಪಾದಿಸಿ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುವತ್ತ ಗಮನ ಹರಿಸಬೇಕು ಎಂದು ಅಕ್ಕ ಐಎಎಸ್ ಅಕಾಡೆಮಿ ನಿರ್ದೇಶಕ ಡಾ.ಶಿವಕುಮಾರ್ ಸಲಹೆ ನೀಡಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಪಿಯುಸಿ ಬಾಲಕರ ವಿದ್ಯಾರ್ಥಿನಿಲಯದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಹಾಗೂ ನಿಲಯದ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಡಾ.ಅಂಬೇಡ್ಕರ್ ಅವರಿಗೆ ಜಗತ್ತಿನಾದ್ಯಂತ ಅಪಾರ ಗೌರವವಿದೆ. ಅವರಿಗಿದ್ದ ಅಪಾರ ಜ್ಞಾನದಿಂದ ಅತ್ಯುನ್ನತ ಗೌರವ ಸಿಗುತ್ತಿದೆ. ವಿದ್ಯಾರ್ಥಿಗಳು ಚೆನ್ನಾಗಿ ಓದಿದರೆ ಗೌರವ ಪಡೆದುಕೊಳ್ಳುವಂತೆ ಸಾಧನೆ ಮಾಡಬೇಕು. ದಡ್ಡರಾಗಿ ಸೋಮಾರಿಗಳಾದರೆ ಮೂರು ಕಾಸಿನ ಬೆಲೆಯೂ ಸಿಗುವುದಿಲ್ಲ. ಅಂಬೇಡ್ಕರ್ ಪರಿಶುದ್ಧವಾದ ವ್ಯಕ್ತಿಯಾಗಿದ್ದರು. ಅವರ ಪ್ರಬುದ್ಧವಾದ ನಡವಳಿಕೆಯಿಂದ ಅವರ ಶತ್ರುಗಳು ಅವರಿಗೆ ಹೆದರುತ್ತಿದ್ದರು. ವಿದ್ಯಾರ್ಥಿಗಳು ದುರಭ್ಯಾಸ, ಕೆಟ್ಟ ಚಟಗಳನ್ನು ಇಟ್ಟುಕೊಳ್ಳದೇ ಪರಿಶುದ್ಧವಾಗಿದ್ದರೆ ಸಮಾಜ ನಿಮ್ಮನ್ನು ಗೌರವಿಸುತ್ತದೆ. ಆದ್ದರಿಂದ ಅಂಬೇಡ್ಕರ್ ಬರೆದಿರುವ ಪುಸ್ತಕಗಳನ್ನು ಓದಿಕೊಂಡು ಅವರ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅಂಬೇಡ್ಕರ್‌ರ ಅನುಯಾಯಿಗಳು ದಿನಕ್ಕೆ 10ರಿಂದ 15 ಗಂಟೆ ಓದಲು ಪ್ರಯತ್ನಿಸಬೇಕು. ಕನಿಷ್ಠ 5 ಗಂಟೆಯಾದರೂ ಓದಬೇಕು ಆಗ ನಿಮ್ಮ ಜೀವನವನ್ನು ನೀವೇ ರೂಪಿಸಿಕೊಳ್ಳಬಹುದು. ಸರ್ಕಾರ ವಿದೇಶದಲ್ಲಿ ಓದುವವರಿಗೆ ಉಚಿತವಾಗಿ 40 ಲಕ್ಷ ನೆರವು ನೀಡುತ್ತದೆ. ಅದನ್ನು ಸದುಪಯೋಗಪಡಿಸಿಕೊಂಡು ಜ್ಞಾನವಂತರಾಗಿ ಎಂದರು. ಸಮಾರಂಭದಲ್ಲಿ ಮೈಸೂರು ತಾಲೂಕು ಸಿಡಿಪಿಓ ಎಂ.ತಿಬ್ಬಯ್ಯ, ಜಿಲ್ಲಾ ವಾರ್ಡನ್ ಸಂಘದ ಅಧ್ಯಕ್ಷ ಶಿವಮಲ್ಲಯ್ಯ, ನಿಲಯಪಾಲಕರಾದ ಚಿಕ್ಕೀರಯ್ಯ, ಚಂದ್ರಮ್ಮ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ನಾಳೆ ಮೈಸೂರಲ್ಲಿ ತಂತ್ರಜ್ಞಾನ ಬೆಳವಣಿಗೆ ಕುರಿತು ಇಲ್ಯುಮಿನೇಟ್ ಕಾರ್ಯಕ್ರಮ

ಮೈಸೂರು,ಫೆ.19(ಜಿಎ)–ಮೈಸೂರಿನ ಎನ್‌ಐಇ ಕಾಲೇಜು ಮತ್ತು ಎಲ್ ಅಂಡ್ ಟಿ ಸಹಯೋಗದೊಂದಿಗೆ ಫೆ.21 ರಂದು ಬೆಳಗ್ಗೆ 9.30ಕ್ಕೆ ನಗರದ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಇತ್ತೀಚಿನ ತಂತ್ರಜ್ಞಾನ ಬೆಳವಣಿಗೆಯ 'ಇಲ್ಯುಮಿನೇಟ್' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಎನ್‌ಐಇ ಶಿಕ್ಷಣ ಸಂಸ್ಥೆಯ ಟ್ರೈನಿಂಗ್ ಮತ್ತು ಪ್ಲೇಸ್‌ಮೆಂಟ್ ಅಧಿಕಾರಿ ಹರ್ಷಿತ್ ದಿವಾಕರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೈಜ್ಞಾನಿಕ ಹಾಗೂ ತಂತ್ರಜ್ಞಾನ ಕ್ಷೇತ್ರದ ದಿಗ್ಗಜರಾದ ಪ್ರೊ.ನವಕಾಂತ ಭಟ್ ಹಾಗೂ ವೈ.ದಿಲೀಪ್ ಪಾಲ್ಗೊಂಡು ಇಂಟಲಿಜೆಂಟ್ ಮೊಬಿಲಿಟಿ, ಆರೋಗ್ಯ, ರಕ್ಷಣಾ ತಂತ್ರಜ್ಞಾನ, ಡಿಜಿಟಲ್ ಮೂಲಸೌಕರ್ಯಗಳಲ್ಲಿ ಅನ್ವಯಿಕ ಪರಿಹಾರ, ಭಾರತವನ್ನು ಎಐ ಚಾಲಿತ ಎಂಜಿನಿಯರಿಂಗ್ ಪರಿಹಾರಗಳ ಜಾಗತಿಕ ಕೇಂದ್ರವನ್ನಾಗಿ ರೂಪಿಸುವ ಕ್ರಮ ಕುರಿತು ಬೆಳಕು ಚೆಲ್ಲಲಿದ್ದಾರೆ ಎಂದರು.

ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವಿಸ್ ಸಿಟಿಓ ಆಶಿಶ್ ಖುಷು ನೇತೃತ್ವ ವಹಿಸಲಿದ್ದಾರೆ. ಅಲ್ಲದೆ, ನ್ಯಾನೋ ವಿಜ್ಞಾನದಿಂದ ಸುಧಾರಿತ ವೈಮಾನಿಕ ಶಾಸ್ತ್ರದವರೆಗೆ ಮುಂಚೂಣಿಯಲ್ಲಿರುವ ತಂತ್ರಜ್ಞಾನ ಕುರಿತ ಉದ್ಯಮ–ಶೈಕ್ಷಣಿಕ ಸಂವಾದವೂ ಇಲ್ಲಿರಲಿದೆ. ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ. ಉದ್ಯಮ ಮತ್ತು ಶಿಕ್ಷಣ ನಡುವಿನ ಕಂದಕ ಹೋಗಲಾಡಿಸುವ ನಿಟ್ಟಿನ ಕಾರ್ಯಕ್ರಮ ಇದಾಗಿದೆ ಎಂದರು. ಗೋಷ್ಠಿಯಲ್ಲಿ ಎಸ್.ಆರ್.ಗಾಯಕ್ವಾಡ್, ಗೌತಮಿ, ಚಂದ್ರಶೇಖರ್, ಋಷಿಕೇಶ್‌ರಾವ್ ಇದ್ದರು.

ರಕ್ತ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಕೆ.ಆರ್.ಪೇಟೆ ವ್ಯಕ್ತಿಗೆ ಯಶಸ್ವಿ ಅಸ್ತಿಮಜ್ಜೆ ಶಸ್ತ್ರ ಚಿಕಿತ್ಸೆ

ಮೈಸೂರು,ಫೆ.19(ಜಿಎ)–ಬಹು ಮೈಲೋಮಾ ರಕ್ತ ಕ್ಯಾನ್ಸರ್ ಸಮಸ್ಯೆಯಿಂದ ಬಳಲುತ್ತಿದ್ದ ಕೆ.ಆರ್.ಪೇಟೆ ಮೂಲದ ಸುಮಾರು 44 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರಿಗೆ ತಮ್ಮ ಟ್ರಸ್ಟ್ ವೆಲ್ ಆಸ್ಪತ್ರೆಯಲ್ಲಿ ಕಡಿಮೆ ಖರ್ಚಿನಲ್ಲಿ ಯಶಸ್ವಿಯಾಗಿ ಅಸ್ತಿಮಜ್ಜೆ ಶಸ್ತ್ರ ಚಿಕಿತ್ಸೆ ನೆರವೇರಿಸಲಾಗಿದೆ ಎಂದು ಆಸ್ಪತ್ರೆಯ ತಜ್ಞ ವೈದ್ಯರಾದ ಡಾ.ಸಚಿನ್ ಜಾಧವ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೋಗಿ ರೈತರಾಗಿದ್ದು, ಕುಟುಂಬದ ಏಕೈಕ ಆಧಾರ ಸ್ತಂಭವಾಗಿದ್ದಾರೆ. ಆದರೆ ಇವರಲ್ಲಿ ರಕ್ತ ಕ್ಯಾನ್ಸರ್ ಕಾಣಿಸಿಕೊಂಡ ಬಳಿಕ ಬಹು ವಿಧದ ಅನಾರೋಗ್ಯ ಸಮಸ್ಯೆ ಕಾಡತೊಡಗಿದ್ದವು. ಈ ವೇಳೆ ಅನೇಕ ಆಸ್ಪತ್ರೆಗಳಿಗೆ ಭೇಟಿ ನೀಡಿ ಕೊನೆಗೆ ತಮ್ಮ ಆಸ್ಪತ್ರೆಗೆ ಬಂದರು. ಸಾಮಾನ್ಯವಾಗಿ ಇತರೆ ಆಸ್ಪತ್ರೆಗಳಲ್ಲಿ ಇವರ ಸಮಸ್ಯೆಗೆ ಚಿಕಿತ್ಸೆ ನೀಡಲು ಸುಮಾರು 15 ಲಕ್ಷ ವೆಚ್ಚ ತಗುಲುತ್ತದೆ. ಆದರೆ ಸೇವೆಯೇ ಪರಮ ಗುರಿಯಾದ ತಮ್ಮ ಆಸ್ಪತ್ರೆಯಲ್ಲಿ ಕೇವಲ ಸುಮಾರು 5 ಲಕ್ಷ ರೂ.,ಗಳಲ್ಲಿ ಯಶಸ್ವಿಯಾಗಿ ಶಸ್ತ್ರ ಚಿಕಿತ್ಸೆ ನೆರವೇರಿಸಲಾಗಿದೆ ಎಂದರು.

ರಕ್ತದ ಕ್ಯಾನ್ಸರ್ ವೇಳೆ ಅಸ್ಥಿಮಜ್ಜೆ ಶಸ್ತ್ರ ಚಿಕಿತ್ಸೆ ಅಗತ್ಯ. ಈ ವೇಳೆ ಸಾಮಾನ್ಯವಾಗಿ ದಾನಿಗಳ ಅಸ್ಥಿಮಜ್ಜೆ ಪಡೆದು ಅಳವಡಿಸಲಾಗುತ್ತದೆ. ಇವರ ಪ್ರಕರಣದಲ್ಲಿ ಇವರದೇ ದೇಹದಲ್ಲಿನ ಆರೋಗ್ಯಕರ ಅಸ್ಥಿಮಜ್ಜೆಗಳನ್ನು ತೆಗೆದು ಕಿಮೋಥೆರಪಿ ನಂತರ ಅಳವಡಿಸಲಾಗಿದೆ. ಈಗ ಆರೋಗ್ಯದಿಂದಿದ್ದು, ಸಾಮಾನ್ಯ ಕೆಲಸ ಕಾರ್ಯಗಳಲ್ಲಿ ತೊಡಗಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ಮಾರುಕಟ್ಟೆ ವಿಭಾಗದ ಗುರುಪ್ರಸಾದ್ ಉಪಸ್ಥಿತರಿದ್ದರು.

ತಿ.ನರಸೀಪುರದ ಕ್ರೀಡಾಂಗಣ ನಿರ್ಮಾಣ ಯೋಜನೆ ಕೈ ಬಿಟ್ಟು; ನೂರಾರು ಮರ, ಜೀವ ಸಂಕುಲ ಸಂರಕ್ಷಿಸಲು ಮನವಿ



ಮೈಸೂರಿನ ಟಿ.ನರಸೀಪುರದ ಕೆಎಸ್‌ಐಸಿ ಫಿಲೇಚರ್ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸುವ ಯೋಜನೆ ಕೈಬಿಡುವಂತೆ ಪರಿಸರ ಕಾರ್ಯಕರ್ತರ ರಾಜ್ಯ ಸಂಘಟನೆ ಅಪರ ಜಿಲ್ಲಾಧಿಕಾರಿ ಡಾ.ಶಿವರಾಜು ಅವರಿಗೆ ಮನವಿ ಸಲ್ಲಿಸಿತು.

ಮೈಸೂರು, ಫೆ.19(ಬಿಎಲ್‌ಯು)–ನೂರಾರು ಮರಗಳ ಮಾರಣ ಹೋಮ ಮಾಡುವ ಮೈಸೂರಿನ ತಿ.ನರಸೀಪುರದ ಕೆಎಸ್‌ಐಸಿ ಫಿಲೇಚರ್ ಕಾರ್ಖಾನೆ ಆವರಣದಲ್ಲಿ ಉದ್ದೇಶಿತ ಕ್ರೀಡಾಂಗಣ ನಿರ್ಮಾಣ ಯೋಜನೆ ಕೈ ಬಿಡಬೇಕೆಂದು ಪರಿಸರ ಕಾರ್ಯಕರ್ತರ ರಾಜ್ಯ ಸಂಘಟನೆ ಆಗ್ರಹಿಸಿದೆ.

ಈ ಸಂಬಂಧ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರಿಗೆ ಮನವಿ ಸಲ್ಲಿಸಿರುವ ಸಂಘಟನೆ, ಕಾರ್ಖಾನೆ ಆವರಣದಲ್ಲಿ 500ಕ್ಕೂ ಹೆಚ್ಚು ಮರಗಳಿದ್ದು, ಈಗ ಕ್ರೀಡಾಂಗಣ ನಿರ್ಮಾಣಕ್ಕೆ ಇವುಗಳಿಗೆ ಕೊಡಲಿ ಪೆಟ್ಟು ನೀಡಿದರೆ ಪರಿಸರಕ್ಕೆ ಧಕ್ಕೆಯಾಗುತ್ತದೆ ಎಂದು ವಸ್ತುಸ್ಥಿತಿ ಮನದಟ್ಟು ಮಾಡಿದೆ.

ಪಕ್ಷಿ ವೀಕ್ಷಕರು ಹಾಗೂ ಪರಿಸರ ಪ್ರೇಮಿಗಳು ಪರಿವೀಕ್ಷಣೆ ಮಾಡಿ 40ಕ್ಕೂ ಹೆಚ್ಚು ಜಾತಿಯ ಪಕ್ಷಿಗಳು ಹಾಗೂ 10ಕ್ಕೂ ಹೆಚ್ಚು ಬಗೆಯ ಚಿಟ್ಟೆಗಳು ಸೇರಿದಂತೆ ಇನ್ನಿತರ ಜೀವ ಸಂಕುಲ ಇಲ್ಲಿವೆ ಎಂದು ತಿಳಿಸಿದ್ದಾರೆ.

ಈಗ ಕ್ರೀಡಾಂಗಣಕ್ಕೆ ನೂರಾರು ಮರಗಳನ್ನು ಕಡಿದರೆ ಮರಗಳು ಮಾತ್ರವಲ್ಲದೆ ಅಮೂಲ್ಯ ಜೀವ ಪರಿಸರ ಕೂಡ ನಾಶವಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಜಾಗತಿಕ ತಾಪಮಾನ ಏರಿಕೆ ಹಾಗೂ ಹವಾಗುಣ ಬದಲಾವಣೆ ಪರಿಣಾಮಗಳು ಈಗಾಗಲೇ ಮನುಷ್ಯ ಹಾಗೂ ಜೀವ ಸಂಕುಲವನ್ನು ಬಾಧಿಸುತ್ತಿವೆ. ಇಂತಹ ಸಂದರ್ಭದಲ್ಲಿ ನೂರಾರು ಮರಗಳನ್ನು ಕಡಿದರೆ ಪರಿಸರಕ್ಕೆ ಮತ್ತಷ್ಟು ಧಕ್ಕೆಯಾಗುತ್ತದೆ ಎಂದು ಹೇಳಿದ್ದಾರೆ.

ಈ ಕಾರ್ಖಾನೆ ಆವರಣದಲ್ಲಿ ಶೇ.33ರಷ್ಟು ಪ್ರದೇಶಗಳಲ್ಲಿ ಮರಗಿಡಗಳಿರುವುದು ಕಡ್ಡಾಯ ಎಂಬ ನಿಯಮವಿದೆ. ಇದನ್ನು ಮನಗಂಡು ಇಲ್ಲಿನ ಮರ ಕಡಿಯಲು ಅವಕಾಶ ನೀಡಬಾರದು. ಅಲ್ಲದೆ ಇಲ್ಲಿ ಕ್ರೀಡಾಂಗಣ ಕೂಡ ನಿರ್ಮಾಣ ಮಾಡಬಾರದು ಎಂದು ಪರಿಸರ ಕಾರ್ಯಕರ್ತರ ಸಂಘಟನೆ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರನ್ನು ಆಗ್ರಹಿಸಿದೆ.

ಛತ್ರಪತಿ ಶಿವಾಜಿ ಮಹಾರಾಜರ ಅದ್ದೂರಿ ಜಯಂತ್ಯೋತ್ಸವ

ಶಿವಾಜಿ ಮಹಾರಾಜರ ರಾಷ್ಟ್ರ ಪ್ರೇಮ ಭಾರತೀಯರಿಗೆ ಆದರ್ಶ: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ





ಮೈಸೂರಿನ ಕಲಾಮಂದಿರದಲ್ಲಿ ನಡೆದ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ 399ನೇ ಜಯಂತ್ಯೋತ್ಸವ ಸಮಾರಂಭವನ್ನು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಉದ್ಘಾಟಿಸಿದರು. ಕಾರ್ಯಕ್ರಮಕ್ಕೂ ಮುನ್ನ ನಡೆದ ಶಿವಾಜಿ ಮಹಾರಾಜರ ಮೆರವಣಿಗೆಗೆ (ಎಡಚಿತ್ರ) ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು.

ಮೈಸೂರು, ಫೆ.19(ಬಿಎಲ್‌ಯು)–ಛತ್ರಪತಿ ಶಿವಾಜಿ ಮಹಾರಾಜರ ರಾಷ್ಟ್ರ ಪ್ರೇಮ, ಧರ್ಮ ರಕ್ಷಣೆ ಹಾಗೂ ಅಪಾರ ಶೌರ್ಯ ಭಾರತೀಯರಿಗೆ ಆದರ್ಶ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರದಲ್ಲಿ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ 399ನೇ ಜಯಂತ್ಯೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಇಂತಹ ಮಹನೀಯರ ಜಯಂತಿಯನ್ನು ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ಆಚರಿಸಿ ಅವರ ಹೆಸರನ್ನು ಉತ್ತುಂಗಕ್ಕೆ ಕೊಂಡೊಯ್ಯಬೇಕು ಎಂದು ಸಲಹೆ ನೀಡಿದರು.

ಅರ್ಥಪೂರ್ಣ, ಅದ್ದೂರಿ ಮೆರವಣಿಗೆ

ಕಾರ್ಯಕ್ರಮಕ್ಕೂ ಮುನ್ನ ಮೈಸೂರು ಅರಮನೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭವಾದ ಶಿವಾಜಿ ಮಹಾರಾಜರ ಪ್ರತಿಮೆಯ ಮೆರವಣಿಗೆಗೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು. ಶಿವಾಜಿ ಮಹಾರಾಜರ ಭಾವಚಿತ್ರವಿರುವ ಸಾರೋಟು ಕೂಡ ಮೆರವಣಿಗೆಯಲ್ಲಿ ಸಾಗಿತು. ಡೊಳ್ಳು ಕುಣಿತ ಸೇರಿದಂತೆ ಇತರೆ ಜಾನಪದ ಕಲಾ ತಂಡಗಳು ಮೆರವಣಿಗೆಗೆ ಮೆರುಗು ನೀಡಿದವು. ಶಿವಾಜಿ ಮಹಾರಾಜರ ವೇಷಧಾರಿ ಕುದುರೆಯಲ್ಲಿ ಸಾಗಿ ಮೆರವಣಿಗೆಗೆ ಮತ್ತಷ್ಟು ಸೊಬಗು ನೀಡಿತು.

ಆಕರ್ಷಕ ಮೆರವಣಿಗೆಯು ಚಾಮರಾಜ ಒಡೆಯರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಕೆ.ಆರ್.ವೃತ್ತ, ದೇವರಾಜ ಅರಸ್ ರಸ್ತೆ, ಜೆಎಲ್ ಬಿ ರಸ್ತೆ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತ, ವಿನೋಬಾ ರಸ್ತೆ ಮೂಲಕ ಕಲಾಮಂದಿರ ತಲುಪಿತು.

ಶಿವಾಜಿ ಮಹಾರಾಜರು ಹಿಂದೂ ಧರ್ಮಕ್ಕೆ ನೀಡಿರುವ ಕೊಡುಗೆಗಳನ್ನು ಮರೆಯಬಾರದು. ಅವರ ಆದರ್ಶವನ್ನು ನಾವು ನೆನೆದು ಅವರ ಹಾದಿಯಲ್ಲಿ ಸಾಗಬೇಕು ಎಂದು ಕಿವಿ ಮಾತು ಹೇಳಿದರು.

ಶಿವಾಜಿ ಮಹಾರಾಜರ ಹೋರಾಟವನ್ನು ತಿಳಿದುಕೊಂಡರೆ ರೋಮಾಂಚನವಾಗುತ್ತದೆ. ಇಂದಿಗೂ ಕೂಡ ಅವರ ಪರಾಕ್ರಮದ ಚಲನಚಿತ್ರಗಳು ಪ್ರದರ್ಶನಗೊಳ್ಳುತ್ತವೆ. ಅದನ್ನು ನೋಡುವ ಮೂಲಕ ಅವರ ರಾಷ್ಟ್ರ ಪ್ರೇಮದ ಆದರ್ಶವನ್ನು ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಪ್ರತಿಯೊಬ್ಬರ ಮನೆಯಲ್ಲಿ ಶಿವಾಜಿ ಮಹಾರಾಜರ ಭಾವಚಿತ್ರವಿರುತ್ತದೆ. ನಾನು ಸೇರಿದಂತೆ ಬಹಳಷ್ಟು ಮಂದಿ ಸೈನ್ಯಕ್ಕೆ ಸೇರಲು ಅವರೇ ಸ್ಫೂರ್ತಿಯಾಗಿದ್ದರು ಎಂದು ಮಂಜೇಗೌಡರು ಹೇಳಿದರು.

ಈ ವೇಳೆ ಮಾತನಾಡಿದ ಭಾರತೀಯ ಭಾಷಾ ಸಂಸ್ಥಾನದ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ ಹಿರಿಯ ಸಂಶೋಧಕ ಡಾ.ಆರ್.ಚಲಪತಿ, ಭಾರತದಲ್ಲಿ ಸಾವಿರಾರು ರಾಜರು ಅಳಿದು ಹೋಗಿದ್ದಾರೆ. ಆದರೆ ಇವರು ಮಾತ್ರ ಚರಿತ್ರೆಯಲ್ಲಿ ಅಜರಾಮರರಾಗಿ ಉಳಿದುಕೊಂಡಿದ್ದಾರೆ. ಇದಕ್ಕೆ ಅವರ ಹೋರಾಟ ಶೌರ್ಯ, ಸಾಹಸವೇ ಮೂಲ ಕಾರಣವಾಗಿದೆ ಎಂದು ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಉಪ ನಿರ್ದೇಶಕ ಡಾ.ಎಂ.ಸುದರ್ಶನ್, ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ನಾಗೇಂದ್ರ ರಾವ್ ಅವತಾಡೆ, ಪ್ರಧಾನ ಕಾರ್ಯದರ್ಶಿ ಎಂ.ಎನ್.ತುಕಾರಾಮ್, ಖಜಾಂಚಿ ಗಣೇಶ್ ರಾವ್ ಸಂಕಪಾಳ್, ಸಂಚಾಲಕ ಜ್ಞಾನ ಪ್ರಕಾಶ್ ಪಲಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿಕ್ರಂ ಮುತ್ತಣ್ಣ ಅವರಿಗೆ ಅಭಿನಂದನೆ....



'ಸ್ಟಾರ್ ಆಫ್ ಮೈಸೂರ್' 49ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾದ ಕೆ.ಜಿ.ವಿಕ್ರಂ ಮುತ್ತಣ್ಣ ಅವರನ್ನು ಮುಡಾ ಮಾಜಿ ಅಧ್ಯಕ್ಷರೂ ಆದ ಕಾಂಗ್ರೆಸ್ ಮುಖಂಡ ಹೆಚ್.ವಿ.ರಾಜೀವ್, ಮಾಜಿ ಕಾರ್ಪೊರೇಟರ್ ಕೆ.ವಿ.ಮಲ್ಲೇಶ್, ಉದ್ಯಮಿ ಜಯಂತ್ ಇತರರು ಆತ್ಮೀಯವಾಗಿ ಅಭಿನಂದಿಸಿದರು.



'ಸ್ಟಾರ್ ಆಫ್ ಮೈಸೂರ್' 49ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾದ ಕೆ.ಜಿ.ವಿಕ್ರಂ ಮುತ್ತಣ್ಣ ಅವರನ್ನು ಜೆಡಿಎಸ್ ನಗರಾಧ್ಯಕ್ಷರೂ ಆದ ಮಾಜಿ ಕಾರ್ಪೊರೇಟರ್ ಎಸ್‌ಬಿಎಂ ಮಂಜು ಅಭಿನಂದಿಸಿದರು. ಈ ವೇಳೆ ಜೆಡಿಎಸ್ ಮುಖಂಡರಾದ ಪ್ರಕಾಶ್, ಹನುಮಗೌಡ, ರಾಮಕೃಷ್ಣ, ಅವಿನಾಶ್, ಅರುಣ್ ಇತರರು ಉಪಸ್ಥಿತರಿದ್ದಾರೆ.

ನಾಳೆ ಅಂತರ ಶಾಲಾ ಭಗವದ್ಗೀತಾ 15ನೇ ಅಧ್ಯಾಯ, ಹನುಮಾನ್ ಚಾಲೀಸ್ ಪಠಣ

ಮೈಸೂರು,ಫೆ.19(ಜಿಎ)–ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಚಿನ್ಮಯ ವಿದ್ಯಾಲಯದಲ್ಲಿ ಚಿನ್ಮಯ ಮಿಶನ್‌ನ ಅಮೃತ ಮಹೋತ್ಸವ ಪ್ರಯುಕ್ತ ಫೆ.21ರಂದು ಬೆಳಿಗ್ಗೆ 11 ಗಂಟೆಗೆ ಅಂತರಶಾಲಾ ಭಗವದ್ಗೀತಾ 15ನೇ ಅಧ್ಯಾಯ ಹಾಗೂ ಹನುಮಾನ್ ಚಾಲೀಸ್ ಪಠಣ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವಿದ್ಯಾಲಯ ಕಾರ್ಯದರ್ಶಿ ಕೆ.ಎಸ್.ಎನ್.ಪ್ರಸಾದ್ ಈ ವಿಷಯ ತಿಳಿಸಿ, ವಿದ್ಯಾರ್ಥಿಗಳಲ್ಲಿ ಏಕಾಗ್ರತೆ ವೃದ್ಧಿ, ಅಧ್ಯಾತ್ಮ ಪರಿಚಯ ಹಾಗೂ ಬರಲಿರುವ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶಕ್ಕೆ ಸ್ಫೂರ್ತಿ ನೀಡುವ ಕಾರ್ಯಕ್ರಮವಾಗಿದೆ. ನಗರ ಸುಮಾರು 15 ಶಾಲೆಗಳ 500 ವಿದ್ಯಾರ್ಥಿಗಳು ಭಾಗವಹಿಸುವರು. ಹೆಚ್ಚಿನ ಮಾಹಿತಿಗಾಗಿ 72049 19003 ಸಂಪರ್ಕಿಸಿ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವಿದ್ಯಾಲಯ ಅಧ್ಯಕ್ಷ ಹೆಚ್.ಕೆ.ಅಶೋಕ್‌ಕುಮಾರ್, ಖಜಾಂಚಿ ಅರ್ಚನಾ ನಾಂಜ್ಕ್, ಕಾರ್ಯಕಾರಿ ಸದಸ್ಯ ಸಿ.ಎ.ರಂಗನಾಥ್, ಪ್ರಾಂಶುಪಾಲೆ ವಿದ್ಯಾ ಉಪಸ್ಥಿತರಿದ್ದರು.

ನಾಳೆ ಹುಬ್ಬಳ್ಳಿಯಲ್ಲಿ ಅಲೆಮಾರಿ ಕಲೋತ್ಸವ

ಮೈಸೂರು,ಫೆ.19(ಜಿಎ)–ರಾಜ್ಯ ಅಲೆಮಾರಿ ಮತ್ತು ಅಲೆಮಾರಿ ಹಿಂದುಳಿದ ಪ್ರವರ್ಗಗಳ 1 ಜನಾಂಗಗಳ ಒಕ್ಕೂಟದ ವತಿಯಿಂದ ಫೆ21ರಂದು ಬೆಳಗ್ಗೆ 9ಕ್ಕೆ ಹುಬ್ಬಳ್ಳಿಯ ಗಂಧರ್ವ ಹಾಲ್‌ನಲ್ಲಿ ಸಾಹಿತ್ಯ, ಸಾಂಸ್ಕೃತಿಕ ಮತ್ತು ಅಲೆಮಾರಿ ಕಲೋತ್ಸವ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ನಾಗೇಶ್ ಯಾದವ್ ಈ ವಿಷಯ ತಿಳಿಸಿ, ಕಾರ್ಯಕ್ರಮಕ್ಕೆ ಮೈಸೂರು ಜಿಲ್ಲೆಯಿಂದ ಸುಮಾರು 200 ಮಂದಿ ಬಸ್ ಹಾಗೂ ಟ್ರೈನ್‌ಗಳಲ್ಲಿ ಪ್ರಯಾಣ ಬೆಳೆಸಲಿದ್ದಾರೆ. ಸೂಕ್ಷ್ಮ ಜನಾಂಗಗಳನ್ನು ಗುರುತಿಸಿ, ಅವರಲ್ಲಿನ ಪ್ರತಿಭೆ ಹೊರ ತರುವ ನಿಟ್ಟಿನಲ್ಲಿ ಈ ಕಲೋತ್ಸವ ಆಯೋಜಿಸಲಾಗಿದೆ ಎಂದರು. ಅಲೆಮಾರಿ ಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲಾಗುವುದು. ಅಲ್ಲದೆ, ತೀರಾ ಹಿಂದುಳಿದಿರುವ ಈ ಸಮುದಾಯದಲ್ಲಿ ಆತ್ಮ ವಿಶ್ವಾಸ ತುಂಬುವ ಯತ್ನವೂ ಇದಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಗೌರವಾಧ್ಯಕ್ಷ ವಾಸುದೇವ್, ಉಪಾಧ್ಯಕ್ಷ ಯೋಗೇಶ್, ಶ್ರೀಕಾಂತ್, ರಾಘವೇಂದ್ರ ಉಪಸ್ಥಿತರಿದ್ದರು.

ಬಿ.ಪಿ.ಬೋರೇಗೌಡರಿಗೆ ಅಭಿನಂದನೆ



ಮೈಸೂರು ಜಿಲ್ಲಾ ಹಾಪ್ ಕಾಮ್ಸ್ ಅಧ್ಯಕ್ಷರಾಗಿ ಆಯ್ಕೆಯಾದ ಬಿ.ಪಿ.ಬೋರೇಗೌಡ ಅವರನ್ನು ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ ರಾಮಕೃಷ್ಣ, ಒಕ್ಕಲಿಗರ ಸಂಘದ ಖಜಾಂಚಿ ಆರ್ ಲೋಕೇಶ್, ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಮಾಜಿ ನಿರ್ದೇಶಕ ವಿ.ಮಧು, ಬಿ.ಪಿ.ನಾಗಣ್ಣ, ವಕೀಲ ಸಿದ್ದಲಿಂಗೇಗೌಡ, ಕಿರಣ್, ಬಿ.ರಾಜೇಂದ್ರ ಅಭಿನಂದಿಸಿದರು.

ಫೆ.22ಕ್ಕೆ 'ಭಾರತೀಯ ಸಂತರ ದರ್ಶನ' ಸಂಗೀತ ನೃತ್ಯ ಮಹೋತ್ಸವ

ಮೈಸೂರು,ಫೆ19–ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ಫೆ.22ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30ರವರೆಗೆ ಕಲೆಮನೆ ಸಭಾಂಗಣದಲ್ಲಿ 69ನೇ ಅಂತರ ರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವದಲ್ಲಿ 'ಭಾರತೀಯ ಸಂತರ ದರ್ಶನ' ಸಂಗೀತ ನೃತ್ಯ ಮಹೋತ್ಸವ ಆಯೋಜಿಸಲಾಗಿದೆ.

ಇದೇ ಸಂದರ್ಭದಲ್ಲಿ ನೃತ್ಯ ಕ್ಷೇತ್ರದಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿರುವ ತಮಿಳುನಾಡಿನ ಚೆನ್ನೈನಲ್ಲಿ ನೆಲೆಸಿರುವ ನೃತ್ಯ ಗುರುಗಳಾದ ಪ್ರೊಫೆಸರ್ ಸಿಕ್ಕಿಲ್ ವಸಂತಕುಮಾರಿ ಆರ್ಟಿಸ್ಟಿಕ್ ಡೈರೆಕ್ಟರ್, ಬಾಲನಾಟ್ಯ ಮಂಜರಿ ಟ್ರಸ್ಟ್, ಚೆನ್ನೈ ಅವರಿಗೆ ಕಲೆಮನೆ ಕಲಾಶ್ರೀ ಜೀವ ಮಾನ ಸಾಧನೆ ಪ್ರಶಸ್ತಿ ನೀಡಿ, ಗೌರವಿಸಲಾಗುವುದು. ಗುರು ಸಂಜಿ ಪಿರಂತಂಪನ್ ಆರ್ಟಿಸ್ಟಿಕ್ ಡೈರೆಕ್ಟರ್, ನಾಟ್ಯಕಲಾ ಮಂಜರಿ, ಟೊರೆಂಟೊ, ಕೆನಡಾ, ಇವರಿಗೆ ಕಲೆಮನೆ ಕಲಾಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಲಲಿತಾರಾವ್, ಡಾ.ವಿ.ರಂಗನಾಥ್ ಮತ್ತು ಶ್ರೀಮತಿ ನಂದಿನಿ, ಡಾ.ಜಮುನಾ ರಾಣಿ ವಿ.ಮಿರ್ಲೆ, ಸೀತಾರಾಮ್, ಬಾಲಕೃಷ್ಣಯ್ಯ, ಆರ್.ಜಿ.ಸಿಂಗ್ ರಾಧಾಕೃಷ್ಣ ಎಸ್ ಭಾಗವಹಿಸಲಿದ್ದಾರೆ.

ಮೈಸೂರಲ್ಲಿ ಶಾಂತಿ, ಸುವ್ಯವಸ್ಥೆ ಕಾಯ್ದುಕೊಳ್ಳಲು ಡ್ರೋನ್‌ಗಳ ಕಣ್ಗಾವಲು





ಮೈಸೂರು, ಫೆ.19– ಮೈಸೂರು ನಗರದಲ್ಲಿ ಶಾಂತಿ, ಸುವ್ಯವಸ್ಥೆ ಹಾಗೂ ಸಾರ್ವಜನಿಕ ಭದ್ರತೆಯನ್ನು ಕಾಪಾಡುವ ಉದ್ದೇಶದಿಂದ ಪೊಲೀಸ್ ಇಲಾಖೆಯು ಡ್ರೋನ್‌ಗಳ ಸಹಾಯದಿಂದ ನಗರದ ಪ್ರಮುಖ ಸ್ಥಳಗಳು ಮತ್ತು ಜನಸಂದಣಿ ಪ್ರದೇಶಗಳ ಮೇಲೆ ಪ್ರತಿದಿನ ನಿಗಾ ವಹಿಸುತ್ತಿದೆ.

ಗುರುವಾರ (ಫೆ.19) ಕೂಡ ಮೈಸೂರು ನಗರ ವ್ಯಾಪ್ತಿಯ ಉದಯಗಿರಿ ಪೊಲೀಸ್ ಠಾಣೆ ಸರಹದ್ದಿನ ಅಲ್–ಬ್ರದರ್ ವೃತ್ತ, ನಿವಾಸ್ರಾ ಮಸೀದಿ ಮತ್ತು ಮಂಡಿ ಪೊಲೀಸ್ ಠಾಣೆ ಸರಹದ್ದಿನ ಕೈಲಾಸಪುರಂ, ಸುನ್ನಿ ಚೌಕ ಸ್ಥಳಗಳಲ್ಲಿ ಡ್ರೋನ್ ಉಪಕರಣಗಳನ್ನು ಬಳಸುವ ಮೂಲಕ ಕಣ್ಗಾವಲು ಕಾರ್ಯಾಚರಣೆ ನಡೆದಿದೆ.

ಡ್ರೋನ್‌ಗಳ ಸಹಾಯದಿಂದ ಮುಂದಿನ ದಿನಗಳಲ್ಲಿ ನಗರದಲ್ಲಿ ನಡೆಯಲಿರುವ ವಿವಿಧ ಬಂದೋಬಸ್ತ್ ಕರ್ತವ್ಯಗಳು, ಸಾರ್ವಜನಿಕ ಸಭೆಗಳು, ವಿಶೇಷ ಕಾರ್ಯಕ್ರಮಗಳು ಹಾಗೂ ಇತರ ಚಟುವಟಿಕೆಗಳ ಸಂದರ್ಭದಲ್ಲಿ ಮುನ್ಸೂಚನೆ ಅಥವಾ ಪೂರ್ವ ಜಾಗೃತಿ ಮಾಹಿತಿ ಸಂಗ್ರಹಣೆಗಾಗಿ ಡ್ರೋನ್‌ಗಳನ್ನು ಪರಿಣಾಮಕಾರಿಯಾಗಿ ಬಳಸಲಾಗುವುದು. ಸಾರ್ವಜನಿಕ ಸುರಕ್ಷತೆ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಾ.23ರಿಂದ ವಿಶ್ವವಿಖ್ಯಾತ ವೈರಮುಡಿ ಉತ್ಸವ

ಬ್ರಹ್ಮೋತ್ಸವಕ್ಕೆ ಆಗಮಿಸುವ ಭಕ್ತರಿಗೆ ಮೂಲಸೌಕರ್ಯ ಒದಗಿಸಿ: ಡಿಸಿ



ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿದರು.

ಮಂಡ್ಯ, ಫೆ.19– ವಿಶ್ವವಿಖ್ಯಾತ ಮೇಲುಕೋಟೆ ವೈರಮುಡಿ ಬ್ರಹ್ಮೋತ್ಸವ ಮಾ.23ರಿಂದ ಏ.5ರವರೆಗೆ ನಡೆಯಲಿದ್ದು, ಮಾ.28ರಂದು ಶ್ರೀಚೆಲುವನಾರಾಯಣಸ್ವಾಮಿಗೆ ವೈರಮುಡಿ ಕಿರೀಟ ಧಾರಣೆ ಮಾಡಿ ಉತ್ಸವ ನಡೆಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ಗುರುವಾರ ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಶ್ರೀವೈರಮುಡಿ ಬ್ರಹ್ಮೋತ್ಸವ–2026ರ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಾರ್ಚ್‌ನಲ್ಲಿ ಬೇಸಿಗೆ ಇರುವುದರಿಂದ ಬ್ರಹ್ಮೋತ್ಸವಕ್ಕೆ ಆಗಮಿಸುವ ಭಕ್ತರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಹಾಲಿ ಇರುವ ನೀರಿನ ಟ್ಯಾಂಕರ್‌ಗಳನ್ನು ಸ್ವಚ್ಛಗೊಳಿಸಿ ನೈರ್ಮಲ್ಯ ಕಾಪಾಡಿ ಜೊತೆಗೆ ಮೂಲಸೌಕರ್ಯಕ್ಕೆ ಆದ್ಯತೆ ನೀಡಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ವೈರಮುಡಿ ಬ್ರಹ್ಮೋತ್ಸವ ನಡೆಯುವ ಸ್ಥಳದಲ್ಲಿ ಸೂಕ್ತ ಬ್ಯಾರಿಕೇಡ್ ವ್ಯವಸ್ಥೆ ಮಾಡಿ. ಈಗಾಗಲೇ ಜನಸಂದಣಿ ಹೊಂದುವ ಕಡೆ ಸಿಸಿಟಿವಿ ಇದ್ದು, ಅಗತ್ಯವಿರುವ ಕಡೆ ಹೆಚ್ಚುವರಿ ಸಿಸಿಟಿವಿ ಕ್ಯಾಮರಾ ಅಳವಡಿಸಿ. ವಾಹನಗಳ ನಿಲುಗಡೆಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿ. ಕೊಳದ ಬಳಿ ನುರಿತ ಈಜುಪಡೆ, ಅಗ್ನಿಶಾಮಕ ಸಿಬ್ಬಂದಿ ನಿಯೋಜಿಸಿ ಎಂದರು.

ಕ್ಷೇತ್ರದಲ್ಲಿ ಸ್ವಚ್ಛತೆ ಕಾಪಾಡಿ. ಆಂಬುಲೆನ್ಸ್, ಮೆಡಿಸಿನ್‌ಗಳ ವ್ಯವಸ್ಥೆ ಮಾಡಿ. ಎಲ್ಲಾ ವರ್ಗದ ವೈದ್ಯರು ಕಡ್ಡಾಯವಾಗಿ ನಿಗದಿತ ಸ್ಥಳದಲ್ಲಿ ಇರಬೇಕು. ಭಕ್ತರಿಗೆ ಯಾವುದೇ ಆರೋಗ್ಯ ಸಮಸ್ಯೆ ಉಂಟಾಗದಂತೆ ಕ್ರಮ ವಹಿಸಬೇಕು ಎಂದರು.

ಮೇಲುಕೋಟೆ ಕಲ್ಯಾಣಿ, ಬಸ್ ನಿಲ್ದಾಣ, ದೇವಾಲಯದ ಬಳಿ ಬಯೋ ಶೌಚಾಲಯಗಳನ್ನು ನಿರ್ಮಿಸಬೇಕು. ರಸ್ತೆಗಳ ದುರಸ್ತಿ ಮಾಡಿಸಿ. ವಿವಿಧ ತಾಲೂಕಿನಿಂದ ಬರುವ ಸಾರ್ವಜನಿಕರಿಗೆ ಸೂಕ್ತ ಬಸ್ ವ್ಯವಸ್ಥೆ ಕಲ್ಪಿಸಿ. ಪಾರ್ಕಿಂಗ್‌ನಿಂದ ದೇವಾಲಯಕ್ಕೆ ಭಕ್ತರು ಸಂಚರಿಸಲು ಉಚಿತ ಬಸ್ ವ್ಯವಸ್ಥೆ ಕಲ್ಪಿಸಬೇಕು. ಮಂಗಳ ವಾದ್ಯ, ನಾದ ಸ್ವರ ಹಾಗೂ ವಿವಿಧ ಕಲಾ ತಂಡಗಳನ್ನು ವೈರಮುಡಿ ಬ್ರಹ್ಮೋತ್ಸವದಲ್ಲಿ ನಿಯೋಜಿಸಿ. ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ವೈರಮುಡಿ ಬ್ರಹ್ಮೋತ್ಸವ ಪ್ರಾರಂಭವಾಗಿ ಮುಗಿಯುವವರೆಗೂ ನಿರಂತರ ವಿದ್ಯುತ್ ಪೂರೈಕೆ ಮಾಡಿ. ಬೀದಿ ದೀಪಗಳ ದುರಸ್ತಿಗೊಳಿಸಿ ಎಂದು ಸೂಚಿಸಿದರು.

ಶ್ರೀಚೆಲುವನಾರಾಯಣಸ್ವಾಮಿ ದೇವಾಲಯ, ಶ್ರೀಯೋಗ ನರಸಿಂಹಸ್ವಾಮಿ ದೇವಾಲಯ ಹಾಗೂ ದೇವಾಲಯದ ವ್ಯಾಪ್ತಿಯ ಪ್ರಮುಖ ಮಂಟಪ ಹಾಗೂ ಕಲ್ಯಾಣಿಯಲ್ಲಿ ವಿಶೇಷ ದೀಪಾಲಂಕಾರ ಮತ್ತು ಹೂವಿನ ಅಲಂಕಾರ ವ್ಯವಸ್ಥೆ ಕಲ್ಪಿಸಿ ಎಂದು ಹೇಳಿದರು.

ಜಿಪಂ ಸಿಇಓ ಕೆ.ಆರ್.ನಂದಿನಿ ಮಾತನಾಡಿ, ವೈರಮುಡಿ ಬ್ರಹ್ಮೋತ್ಸವಕ್ಕೆ ಭೇಟಿ ನೀಡುವ ಗಣ್ಯರು ಮತ್ತು ಅತಿಥಿ ಗಣ್ಯರಿಗೆ ಸೂಕ್ತ ಶಿಷ್ಟಾಚಾರ ವ್ಯವಸ್ಥೆ ಕಲ್ಪಿಸಿ ಎಂದರು.

ಈ ವೇಳೆ ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಉಪ ವಿಭಾಗಾಧಿಕಾರಿ ಶ್ರೀನಿವಾಸ್, ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ಟಿ.ಎನ್.ನರಸಿಂಹಮೂರ್ತಿ, ಮುಜರಾಯಿ ತಹಸೀಲ್ದಾರ್ ತಮ್ಮೇಗೌಡ, ಪಾಂಡವಪುರ ಇಓ ವೀಣಾ ಸೇರಿದಂತೆ ಇತರರಿದ್ದರು.

ಬೇಬಿ ಬೆಟ್ಟದಲ್ಲಿ ಉಚಿತ ಸರಳ ಸಾಮೂಹಿಕ ವಿವಾಹ

ದಾಂಪತ್ಯ ಜೀವನಕ್ಕೆ ಕಾಲಿಟ್ಟ 29 ಜೋಡಿಗಳು

ಶಾಸಕ ದರ್ಶನ್ ಪುಟ್ಟಣ್ಣಯ್ಯ ಗೈರು: ಪತ್ನಿ ಹಾಜರ್



29 ಮಂದಿ ನವ ಜೋಡಿಗಳು ನೂತನ ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಪಾಂಡವಪುರ, ಫೆ.19– ತಾಲೂಕಿನ ಬೇಬಿ ಬೆಟ್ಟದಲ್ಲಿ ನಡೆಯುತ್ತಿರುವ ಭಾರೀ ದನಗಳ ಜಾತ್ರಾ ಮಹೋತ್ಸವದಲ್ಲಿ ಗುರುವಾರ ನಡೆದ ಉಚಿತ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ 29 ಜೋಡಿಗಳು ನೂತನ ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಪ್ರತಿ ವರ್ಷ ಕ್ಷೇತ್ರದ ಶಾಸಕರ ನೇತೃತ್ವದಲ್ಲಿ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯುವುದು ವಾಡಿಕೆ. ಆದರೆ ಇದೇ ಮೊದಲ ಬಾರಿಗೆ ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಗೈರು ಹಾಜರಿಯಲ್ಲಿ ಸರಳ ಸಾಮೂಹಿಕ ವಿವಾಹ ನಡೆಯಿತು. ಆದರೆ ಶಾಸಕರ ಪತ್ನಿ ಶಿಲ್ಪ ಹಾಜರಾಗಿ ನೂತನ ದಂಪತಿಗಳಿಗೆ ಆಶೀರ್ವದಿಸಿದರು.

ಶ್ರೀರಾಮಯೋಗೀಶ್ವರ ಮಠದ ಪೀಠಾಧ್ಯಕ್ಷ ಶ್ರೀಶಿವಬಸವ ಸ್ವಾಮೀಜಿಗಳ ಸಾನಿಧ್ಯದಲ್ಲಿ ನಡೆದ ಸರಳ ಸಾಮೂಹಿಕ ವಿವಾಹದಲ್ಲಿ 29 ನವ ಜೋಡಿಗಳಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಪತ್ನಿ ಶಿಲ್ಪ ಹಾಗೂ ಸೋದರಿ ಸ್ಮಿತಾ ಅವರು ವರನಿಗೆ ವಾಚು ಬಟ್ಟೆ, ವಧುವಿಗೆ ಸೀರೆ, ಮಾಂಗಲ್ಯ ವಿತರಿಸಿದರು. ಬಳಿಕ ಬೆಳಿಗ್ಗೆ 10.10ರ ಶುಭ ಲಗ್ನದಲ್ಲಿ ಮಂತ್ರ ಮಾಂಗಲ್ಯದ ವೇದ ಘೋಷದೊಂದಿಗೆ ಮಾಂಗಲ್ಯ ಧಾರಣೆ ನೆರವೇರಿಸಲಾಯಿತು.

ಶ್ರೀಶಿವಬಸವ ಸ್ವಾಮೀಜಿ ಮಾತನಾಡಿ, ಬೇಬಿ ಬೆಟ್ಟದಲ್ಲಿ ಭಾರೀ ದನಗಳ ಜಾತ್ರೆಯಲ್ಲಿ ದನಗಳ ಜಾತ್ರೆ ಒಂದು ಮೇರುಗಾದರೇ, ಇಲ್ಲಿ ನಡೆಯುವ ಸರಳ ಸಾಮೂಹಿಕ ವಿವಾಹ ಜಾತ್ರೆಗೆ ಮತ್ತೊಂದು ಮೆರುಗಾಗಿದೆ. ಸಾಮೂಹಿಕ ವಿವಾಹದಲ್ಲಿ 29 ನವ ಜೋಡಿಗಳು ಹೊಸ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ ಎಂದರು.

ಜನರು ಅದ್ದೂರಿ ಮದುವೆಗೆ ಬ್ರೇಕ್ ಹಾಕಿ ಸರಳ ವಿವಾಹದ ಕಡೆಗೆ ಮುಂದಾಗಬೇಕಿದೆ. ಬಡವರು ಸಹ ಅದ್ಧೂರಿ ವಿವಾಹ ಮಾಡುವ ಮೂಲಕ ಸಾಲದ ಸುಳಿಗೆ ಸಿಲುಕುತ್ತಿದ್ದಾರೆ. ಇಂತಹ ಸರಳ ವಿವಾಹಗಳು ಹೆಚ್ಚು ನಡೆದರೆ ರೈತರು, ಬಡವರು ಸಾಲದ ಸುಳಿಯಿಂದ ಹೊರಬರಲು ಸಾಧ್ಯವಾಗುತ್ತದೆ. ಹಾಗಾಗಿ ಸರಳ ವಿವಾಹದ ಕಡೆಗೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ಹೊಸ ದಾಂಪತ್ಯಕ್ಕೆ ಕಾಲಿಟ್ಟಿರುವ ನವ ಜೋಡಿಗಳು ಸಂಸಾರದಲ್ಲಿ ಕಷ್ಟ–ಸುಖ ಎರಡನ್ನು ಸಮಾನವಾಗಿ ಸ್ವೀಕರಿಸಿ ಮುನ್ನಡೆಯಬೇಕು. ಸೊಸೆ–ಅತ್ತೆ ಸಂಬಂಧ ತಾಯಿ–ಮಗಳಂತೆ ನಡೆದರೆ ಸಂಸಾರ ಚೆನ್ನಾಗಿರುತ್ತದೆ. ಸರ್ಕಾರಗಳು ಸಹ ಸರಳ ವಿವಾಹಗಳನ್ನು ನಡೆಸುವುದಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು ಎಂದರು.

ಇದೇ ವೇಳೆ ಶಾಸಕ ದರ್ಶನ್ ಪತ್ನಿ ಶಿಲ್ಪ, ಸೋದರಿ ಸ್ಮಿತಾ, ತಾಯಿ ಸುನೀತಾ ಪುಟ್ಟಣ್ಣಯ್ಯ, ನಂದಿನಿ ಜಯರಾಂ ಮಾತನಾಡಿದರು. ಸಮಾರಂಭದಲ್ಲಿ ತುಮಕೂರು ಷಣ್ಮುಗ ಸ್ವಾಮೀಜಿ, ತಹಸೀಲ್ದಾರ್ ಬಸವರೆಡ್ಡಪ್ಪ ರೋಣದ, ಪತ್ನಿ ಜಯಶ್ರೀ, ರೈತ ಮುಖಂಡರಾದ ಕೆ.ಟಿ.ಗೋವಿಂದೇಗೌಡ, ಕೆ.ಎಸ್.ದಯಾನಂದ, ಜಯರಾಮು, ಚಿಕ್ಕೇಗೌಡ, ಜಯರಾಮು, ಇಓ ವೀಣಾ, ಸಿಡಿಪಿಓ ಪೂರ್ಣಿಮಾ, ಎಸ್‌ಐ ಲಿಂಗರಾಜು, ರೈತ ಸಂಘದ ತಾಲೂಕು ಅಧ್ಯಕ್ಷ ವಿಜಯ್ ಕುಮಾರ್, ಕಾರ್ಯದರ್ಶಿ ಮಂಜುನಾಥ್ ಸೇರಿದಂತೆ ಹಲವರಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ರಮೇಶ್‌ಬಾಬು ಚಾಲನೆ ನೀಡಿದರು.

ಶ್ರೀರಂಗಪಟ್ಟಣ: ತಾಲೂಕಿನ ವಿವಿಧೆಡೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ರಮೇಶ್‌ಬಾಬು ಗುರುವಾರ ಗುದ್ದಲಿ ಪೂಜೆ ನೆರವೇರಿಸಿದರು.

ತಾಲೂಕಿನ ಮೊಗರಹಳ್ಳಿ ಗ್ರಾಮದಲ್ಲಿ 34 ಕೋಟಿ ರೂ. ವೆಚ್ಚದಲ್ಲಿ ಕಾವೇರಿ ಬಲದಂಡೆ ಯೋಜನೆಯಡಿ 28 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಕಾಮಗಾರಿ ಹಾಗೂ 2 ಕೋಟಿ ವೆಚ್ಚದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕರು ಚಾಲನೆ ನೀಡಿದರು. ಅಲ್ಲದೇ ಪಂಪ್‌ಹೌಸ್ ವೃತ್ತದಲ್ಲಿ 1.4 ಕೋಟಿ ರೂ. ವೆಚ್ಚದ ನೂತನ ಬಸ್ ನಿಲ್ದಾಣ ಕಾಮಗಾರಿಗೆ ಚಾಲನೆ ನೀಡಿದರು.

ಈ ವೇಳೆ ತಹಸೀಲ್ದಾರ್ ಚೇತನ ಯಾದವ್, ಹೊಸಹಳ್ಳಿ ಗ್ರಾಪಂ ಪಿಡಿಓ ಶಶಿಕಲಾ, ಬೆಳಗೊಳ ಪಿಡಿಓ ಕುಳ್ಳೇಗೌಡ, ಮುಖಂಡರಾದ ಪುಟ್ಟರಾಜಣ್ಣ, ವಿವೇಕ್, ಕೃಷ್ಣಣ್ಣ, ಹೊಸಹಳ್ಳಿ ಗ್ರಾಪಂ ಅಧ್ಯಕ್ಷ ಚಲುವರಾಜು, ಗ್ರಾಪಂ ಸದಸ್ಯರಾದ ಶ್ರೀಕಂಠು, ವಿಶ್ವನಾಥ್, ಕೃಷ್ಣಾನಂದ, ತರುಣ್, ಪಿಎಲ್‌ಡಿ ಬ್ಯಾಂಕ್ ಸದಸ್ಯ ರವೀಶ್, ಬೆಳಗೊಳ ಗ್ರಾಪಂ ಸದಸ್ಯರಾದ ಸುರೇಶ್, ಸರಿತಾ, ಪುಟ್ಟರಾಜು, ನಂಜಪ್ಪ, ಬೆಳಗೊಳ ಸೊಸೈಟಿ ಅಧ್ಯಕ್ಷೆ ಸುಪ್ರಿಯಾ, ಮುಖಂಡರಾದ ಸ್ವಾಮಿಗೌಡ, ಜಗದೀಶ್ ಇದ್ದರು.

ಧರ್ಮ ಎಂಬ ಮರಕ್ಕೆ ವಿಜ್ಞಾನ, ತಂತ್ರಜ್ಞಾನಗಳೇ ಬೇರುಗಳು

ವಿಜ್ಞಾತಂ ಮಹೋತ್ಸವದಲ್ಲಿ ಡಾ.ಶ್ರೀನಿರ್ಮಲಾನಂದನಾಥ ಸ್ವಾಮೀಜಿ



ಕಾರ್ಯಕ್ರಮದಲ್ಲಿ ನಿರ್ಮಲಾನಂದನಾಥಶ್ರೀಗಳು ಮಾತನಾಡಿದರು.

ನಾಗಮಂಗಲ, ಫೆ.19– ಧರ್ಮ ಎಂಬುದು ಮರವಾದರೆ ಅದರ ಬೇರುಗಳು ವಿಜ್ಞಾನ, ತಂತ್ರಜ್ಞಾನಗಳು. ಹೀಗಾಗಿ ಬೇರನ್ನು ಮರೆತ ಕಾಂಡಕ್ಕೆ ಅಸ್ತಿತ್ವ ಇರುವುದಿಲ್ಲ ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಶ್ರೀಕ್ಷೇತ್ರ ಆದಿಚುಂಚನಗಿರಿಯಲ್ಲಿ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಅವರ 13ನೇ ವರ್ಷದ ಪಟ್ಟಾಭಿಷೇಕದ ಅಂಗವಾಗಿ ಆಯೋಜಿಸಿದ್ದ ವಿಜ್ಞಾತಂ ಮಹೋತ್ಸವದಲ್ಲಿ ಆಶೀರ್ವಚನ ನೀಡಿದ ಅವರು, ವಿಜ್ಞಾನದ ನಿಯಮಗಳು ಕೇವಲ ನಿಯಮಗಳಲ್ಲ. ಆಧುನಿಕ ತಂತ್ರಜ್ಞಾನ, ವಿಜ್ಞಾನಗಳೆಲ್ಲವೂ ಒಂದೇ ಶಕ್ತಿಯ ವಿವಿಧ ವಿಭಾಗಗಳಾಗಿವೆ. ಮಕ್ಕಳು ಮೊದಲು ಅಡಿಪಾಯ ಅರಿತು ಮರವಾಗಿ ಬೆಳೆಯಬೇಕೆ ಹೊರತು ಸ್ವಾತಂತ್ರ್ಯದ ಹೆಸರಿನಲ್ಲಿ ಸ್ವೇಚ್ಛಾಚಾರದ ಬದುಕು ನಡೆಸುವುದು ಸರಿಯಲ್ಲ. ಪ್ರತಿಯೊಬ್ಬರ ಮನಸ್ಸಿನಲ್ಲಿ ನೆಲೆಸಿರುವ ಬುದ್ಧನನ್ನು ಬಡಿದೆಬ್ಬಿಸಿ ತಮ್ಮಲ್ಲಿ ಅಂತರ್ಗತವಾಗಿರುವ ದಿವ್ಯ ಚೇತನದ ಪ್ರಭೆಯನ್ನು ಜಗತ್ತಿಗೆ ಪಸರಿಸಿ ಬದುಕನ್ನು ಹಸನುಗೊಳಿಸಿಕೊಳ್ಳಬೇಕೆಂದು ಕರೆ ನೀಡಿದರು.

ತಂತ್ರಜ್ಞಾನದ ಬೆಳವಣಿಗೆ ಜೊತೆಗೆ ಅಂತರಂಗದ ಮತ್ತು ಬಾಹ್ಯದ ಬೆಳಕು ಒಂದಾದರೆ ಬದುಕು ಸುಂದರ ಹಾಗೂ ಸಂತಸದಾಯಕವಾಗುತ್ತದೆ. ಮನುಷ್ಯ ಮನುಷ್ಯನನ್ನೇ ಅಂತ್ಯ ಮಾಡುವುದರ ಮಟ್ಟಿಗೆ ಬೆಳೆಯುವ ಗುಣವನ್ನು ತೊರೆದು ಸದ್ವಿಚಾರ ಸನ್ನಡತೆಯೊಂದಿಗೆ ವಿಕಾಸವಾಗುವುದು ನಿಜವಾದ ಬೆಳವಣಿಗೆ. ಆ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಜೀವನ ನಡೆಸಬೇಕು ಎಂದರು.

ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿ, ಈ ನಾಡಿಗೆ ಹೊಸ ಆಲೋಚನಾ ಲಹರಿಯನ್ನು ಯುವ ಸಮುದಾಯಕ್ಕೆ ವಿಜ್ಞಾನದ ಹೊಸ ಆಯಾಮಗಳನ್ನು ಹುಟ್ಟು ಹಾಕುವ ಕಾರ್ಯವನ್ನು ವಿಜ್ಞಾತಂ ಉತ್ಸವ ಮಾಡುತ್ತಿದೆ. ಲಕ್ಷಾಂತರ ಯುವಕರಿಗೆ ಅನ್ನ, ಅಕ್ಷರ, ಆಧ್ಯಾತ್ಮಿಕ ರುಚಿಯನ್ನು ತೋರಿಸಿ ಕೊಟ್ಟು ಬದುಕಿನ ಸುವರ್ಣ ಮಾರ್ಗವನ್ನು ತೋರಿಸಿದವರು ಬಾಲಗಂಗಾಧರನಾಥ ಸ್ವಾಮೀಜಿ ಅವರು. ಅವರ ನಂತರ ಪ್ರಾರ್ಥನೆ ಪ್ರಯತ್ನದ ಹಾದಿಯಲ್ಲಿ ಆಧುನಿಕ ತಂತ್ರಜ್ಞಾನ, ಆರೋಗ್ಯ ಸೇರಿದಂತೆ ಹಲವು ಮಹೋನ್ನತ ಸಾಧನೆಗೆ ನಿರ್ಮಲಾನಂದನಾಥ ಸ್ವಾಮೀಜಿ ಪ್ರೇರೇಪಿಸುತ್ತಿದ್ದಾರೆ ಎಂದರು.

ಸಾಲೂರು ಬೃಹನ್ಮಠದ ಪೀಠಾಧಿಪತಿ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಡಿಸಿ ಡಾ.ಕುಮಾರ್, ಖ್ಯಾತ ವಿಜ್ಞಾನಿ ಡಾ.ಕೆ.ಮುನಿಯಪ್ಪ, ಮಾಜಿ ಶಾಸಕ ಕೆ.ಸುರೇಶ್‌ಗೌಡ, ಶಿಕ್ಷಣ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ಸಿಇಓ ರಾಮೇಗೌಡ, ಎಸಿಯು ಉಪಕುಲಪತಿ ಡಾ.ಶ್ರೀಧರ ಇತರರಿದ್ದರು.

ನಾಡಬಾಂಬ್ ಸ್ಫೋಟ: ಹಸುಗೆ ತೀವ್ರ ಗಾಯ

ಭಾರತೀನಗರ, ಫೆ.19– ನಾಡಬಾಂಬ್ ಸ್ಫೋಟಗೊಂಡ ಪರಿಣಾಮ ಹಸು ತೀವ್ರವಾಗಿ ಗಾಯಗೊಂಡಿರುವ ಘಟನೆ ಮಾದರಹಳ್ಳಿ ಗ್ರಾಮದ ಹೊರ ವಲಯದಲ್ಲಿ ನಡೆದಿದೆ.

ಹರಳಹಳ್ಳಿ ಗ್ರಾಮದ ರಾಜಮಣಿ ಅವರ ಹಸು ತೀವ್ರವಾಗಿ ಗಾಯಗೊಂಡಿರುವುದು. ರಾಜಮಣಿ ಅವರು ಮಾದರಹಳ್ಳಿ ಎಲ್ಲೆಯಲ್ಲಿ ಪಾಳು ಬಿದ್ದ ಜಮೀನೊಂದರಲ್ಲಿ ಹಸು ಮೇಯಿಸುತ್ತಿದ್ದರು. ಈ ವೇಳೆ ನಾಡಬಾಂಬ್ ಸ್ಫೋಟಗೊಂಡು ಹಸುವಿನ ಬಾಯಿ ಛಿದ್ರಗೊಂಡಿದೆ ಎನ್ನಲಾಗಿದೆ.

ಕಾಡು ಹಂದಿಗಳ ಹಾವಳಿ ತಪ್ಪಿಸಲು ಅಥವಾ ಹಂದಿಗಳನ್ನು ಬೇಟೆಯಾಡಲು ಕಿಡಿಗೇಡಿಗಳು ನಾಡ ಬಾಂಬ್ ಇಟ್ಟಿರಬಹುದೆಂದು ಶಂಕಿಸಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾರಾಣಿ, ಡಿವೈಎಸ್‌ಪಿ ಯಶ್ವಂತ್ ಕುಮಾರ್ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ಈ ಸಂಬಂಧ ಕೆ.ಎಂ.ದೊಡ್ಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ಬಂಡೀಪುರದಲ್ಲಿ ಸಫಾರಿ ಸಮರ

ಪ್ರತಿಭಟನೆಯಲ್ಲಿ ಮೈಸೂರಿನಿಂದಲೂ ಕೆಲ ಮುಖಂಡರು ಪಾಲ್ಗೊಂಡಿದ್ದರು. ಈ ವೇಳೆ ರೈತ ಮುಖಂಡ ಹೊನ್ನೂರು ಪ್ರಕಾಶ್ ಮಾತನಾಡಿ, ಕಾಡಂಚಿನ ಗ್ರಾಮಗಳಲ್ಲಿ ಮಾನವ– ವನ್ಯಜೀವಿ ಸಂಘರ್ಷ ಹೆಚ್ಚಾಗಿದ್ದು, ಹುಲಿ ದಾಳಿಗೆ ಮೂವರು ಬಲಿಯಾಗಿದ್ದಾರೆ. ಈ ಘಟನೆಯಿಂದ ಸಫಾರಿ ಬಂದ್ ಮಾಡಿಸಲಾಗಿತ್ತು. ಆದರೆ, ತಜ್ಞರ ಸಮಿತಿ ವರದಿ ನೀಡಿರುವುದನ್ನು ಮುಂದಿಟ್ಟುಕೊಂಡು ಸಫಾರಿ ಆರಂಭಿಸಲಾಗಿದೆ. ಇದು ಖಂಡನೀಯ. ನಾವು ಸಫಾರಿ ಆರಂಭಿಸಲು ಬಿಡುವುದಿಲ್ಲ. ವೈಜ್ಞಾನಿಕವಾಗಿ ವರದಿ ನೀಡಿದ್ದಾರೆ ಎನ್ನುತ್ತಾರೆ. ಈ ವೈಜ್ಞಾನಿಕ ಚಿಂತನೆಯೇ ಅರಣ್ಯ ನಾಶಕ್ಕೆ ಕಾರಣ ಎಂದು ಕಿಡಿಕಾರಿದರು.

ಇದೇ ವೇಳೆ ಅಹೋರಾತ್ರಿ ಪ್ರತಿಭಟನೆ ನಡೆಸುವುದಾಗಿ ಘೋಷಿಸಿದರು. ಈ ವೇಳೆ ಪೊಲೀಸರು ಮಧ್ಯ ಪ್ರವೇಶಿಸಿ, ಅಹೋರಾತ್ರಿ ಪ್ರತಿಭಟನೆಗೆ ಅವಕಾಶವಿಲ್ಲ ಎಂದರು. ಈ ವೇಳೆ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದವರು ಪೊಲೀಸರೊಂದಿಗೆ ಮಾತಿನ ಚಕಮಕಿ ನಡೆಸಿದರು. ಪೊಲೀಸರು ಈ ವೇಳೆ ಪ್ರತಿಭಟನಾಕಾರರನ್ನು ವಶಕ್ಕೆ ಪಡೆದರು. ಕೆಲ ಸಮಯದ ನಂತರ ಎಲ್ಲರನ್ನು ಬಿಡುಗಡೆ ಮಾಡಲಾಯಿತು.

ಸಫಾರಿ ವಿರೋಧಿಸುವವರ ವಿರುದ್ಧ ತಿರುಗಿ ಬಿದ್ದ ಸ್ಥಳೀಯರು: ಸಫಾರಿ ಪುನರಾರಂಭ ಬೆಂಬಲಿಸಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಮಂಗಲ, ಹಂಗಳ, ಜಕ್ಕಳ್ಳಿ, ಮೇಲುಕಾಮನಹಳ್ಳಿ, ಎಲಚೆಟ್ಟಿ, ಕಣಿಯನಪುರ ಕಾಲೋನಿ ಸೇರಿದಂತೆ ವಿವಿಧ ಗ್ರಾಮಗಳ ರೈತರು, ದಾರಿಯುದ್ದಕ್ಕೂ ಇರುವ ಹೋಟೆಲ್, ಟೀ ಅಂಗಡಿ ಸೇರಿದಂತೆ ವ್ಯಾಪಾರ ಮಾಡುವವರು ಸಫಾರಿ ಪುನರಾರಂಭಕ್ಕೆ ಒತ್ತಾಯಿಸಿ ಪ್ರತಿಭಟನೆ ಮಾಡಿದರು.

ಸಫಾರಿ ಬೇಕೆ ಬೇಕು ಎಂದು ಫಲಕ ಹಿಡಿದುಕೊಂಡು ಬಂದ ಸ್ಥಳೀಯರು, ಸಫಾರಿ ವಿರೋಧಿಸಿ ಪ್ರತಿಭಟನೆ ಮಾಡುವವರ ವಿರುದ್ಧ ತಿರುಗಿ ಬಿದ್ದರು. ನಿಮಗೂ ಬಂಡೀಪುರಕ್ಕೂ ಏನು ಸಂಬಂಧ. ಹತ್ತಾರು ವರ್ಷದಿಂದ ಸಫಾರಿಯೊಂದಿಗೆ ನಾವು ಜೀವನ ಕಟ್ಟಿಕೊಂಡು ಬಂದಿದ್ದೇವೆ. ಕ್ಷುಲಕ ಕಾರಣದಿಂದ ಸಫಾರಿ ಬಂದ್ ಮಾಡಿಸಿ, ಸ್ಥಳೀಯರ ಹೊಟ್ಟೆ ಮೇಲೆ ಹೊಡೆಯಲು ಬಂದಿದ್ದೀರಾ ಎಂದು ಕಿಡಿಕಾರಿದರು. ಈ ವೇಳೆ ಪೊಲೀಸರು ಸ್ಥಳೀಯರನ್ನು ಸಮಾಧಾನಿಸಿದರು. ನಂತರ ಸಫಾರಿ ವಿರೋಧಿಸಿ ನಡೆದ ಪ್ರತಿಭಟನೆಯ ನಂತರ ಸಫಾರಿ ಪರ ಪ್ರತಿಭಟನೆ ಮಾಡಲು ಬಂದಿದ್ದವರಿಗೆ ಅವಕಾಶ ನೀಡಲಾಯಿತು.

ಹೈವೇಗಳಲ್ಲಿ ಸಂಚರಿಸುವ ವಾಹನದಿಂದ ತೊಂದರೆ ಆಗಲ್ವಾ: ಬಂಡೀಪುರ ಅರಣ್ಯದಲ್ಲಿ ಊಟಿ ಮತ್ತು ಕೇರಳದ ವೈಯನಾಡಿಗೆ ಸಂಪರ್ಕ ಕಲ್ಪಿಸುವ ಎರಡು ರಾಷ್ಟ್ರೀಯ ಹೆದ್ದಾರಿ ಹಾದು ಹೋಗುತ್ತವೆ. ಬೆಳಗ್ಗೆ 6 ಗಂಟೆಯಿಂದ ರಾತ್ರಿ 9 ಗಂಟೆವರೆಗೆ ನಿಮಿಷಕ್ಕೆ ಐದಾರು ವಾಹನ ಸಂಚರಿಸುತ್ತವೆ. ಆದರೆ, ಸಫಾರಿ ವಲಯದಲ್ಲಿ ಬೆಳಗ್ಗೆ 6.30ರಿಂದ 8.30ರವರೆಗೆ 10–15 ಟ್ರಿಪ್, ಸಂಜೆ 3ರಿಂದ 5.30ರವರೆಗೆ 10 ಟ್ರಿಪ್ ಸಫಾರಿ ವಾಹನ ಸಂಚರಿಸುತ್ತವೆ. ಸಫಾರಿ ವಾಹನಗಳಿಂದ ಪ್ರಾಣಿಗಳಿಗೆ ತೊಂದರೆಯಾಗುವುದೇ ಆದರೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳಿಂದ ತೊಂದರೆ ಆಗುವುದಿಲ್ಲವೇ? ಸಫಾರಿ ಬಂದ್ ಮಾಡುವಂತೆ ಒತ್ತಾಯಿಸುವವರು ರಸ್ತೆಯನ್ನು ಬಂದ್ ಮಾಡಿಸುವರೇ ಎಂದು ಪ್ರಶ್ನಿಸಿದರು.

ಹೊಟ್ಟೆ ಮೇಲೆ ಹೊಡೆಯಬೇಡಿ: ಇದೇ ವೇಳೆ ಜಕ್ಕಳ್ಳಿ ಕುಮಾರ್ ಮಾತನಾಡಿ, ಸುತ್ತಮುತ್ತಲಿನ ಗ್ರಾಮಗಳ ನೂರಾರು ರೈತರ ಮಕ್ಕಳು ಬಂಡೀಪುರದ ಸಫಾರಿ ಪ್ರವಾಸೋದ್ಯಮವನ್ನು ಅವಲಂಭಿಸಿ ಜೀವನ ನಡೆಸುತ್ತಿದ್ದೇವೆ. ಹುಲಿ ದಾಳಿಯಿಂದ ಮೃತಪಟ್ಟವರು ನಮ್ಮ ಸಹೋದರರೆ ಆಗಿದ್ದು, ಅವರ ಅಗಲಿಕೆ ನೋವು ನಮ್ಮನ್ನು ಕಾಡುತ್ತಿದೆ. ಆದರೆ, ಆ ದಾಳಿಗೂ ಸಫಾರಿಗೂ ಯಾವುದೇ ಸಂಬಂಧವಿಲ್ಲ. ಸ್ಥಳೀಯ ರೈತರ ಹೊಟ್ಟೆ ಮೇಲೆ ಹೊಡೆಯಬೇಡಿ ಎಂದು ಮನವಿ ಮಾಡಿದರು.

ನಿಮಗೆ ಸಂಬಂಧವೇ ಇಲ್ಲ: ಆದಿವಾಸಿ ಮಹಿಳೆ ಪುಟ್ಟಮ್ಮ ಮಾತನಾಡಿ, ನೂರಾರು ವರ್ಷದಿಂದ ಬಂಡೀಪುರ ಅರಣ್ಯವನ್ನು ನಂಬಿಕೊಂಡು ಸ್ಥಳೀಯ ಆದಿವಾಸಿ ಜನ ಬದುಕುತ್ತಾ ಬಂದಿದ್ದೇವೆ. ಇದು ನಮ್ಮ ಕಾಡು. ಹೊರಗಿನಿಂದ ಬಂದು ಪ್ರತಿಭಟನೆ ಮಾಡುವವರಿಗೂ ನಮ್ಮ ಅರಣ್ಯಕ್ಕೂ ಸಂಬಂಧವೇ ಇಲ್ಲ. ಮುಖಂಡರು ಎನಿಸಿಕೊಂಡವರು ಸ್ಥಳೀಯರ ಸಂಕಷ್ಟವನ್ನು ಅರಿತುಕೊಳ್ಳಬೇಕು. ಸಫಾರಿ ನಮ್ಮ ಜೀವನದ ಭಾಗವಾಗಿದೆ. ನೂರಾರು ಕುಟುಂಬ ಸಫಾರಿಯನ್ನೇ ಅವಲಂಭಿಸಿ ಬದುಕುತ್ತಿವೆ. ಹಾಗಾಗಿ ಸಫಾರಿ ಪುನರಾರಂಭಿಸಬೇಕು ಎಂದು ಆಗ್ರಹಿಸಿದರು.

ಗ್ಯಾರಂಟಿಗಳ ಕೈಬಿಡಿ ಉದ್ಯೋಗ ಕೊಡಿ!

ಗ್ಯಾರಂಟಿಗಳಿಗೆ ವಿನಿಯೋಗಿಸಿದರೆ, ಶಾಲೆ, ಆಸ್ಪತ್ರೆ, ರಸ್ತೆ ಸೇರಿದಂತೆ ಮೂಲಸೌಕರ್ಯಗಳಿಗೆ ಸಂಪನ್ಮೂಲ ಇಲ್ಲದಂತಾಗುತ್ತದೆ. ಶ್ರೀಮಂತ, ಬಡವ ಎಂಬ ವ್ಯತ್ಯಾಸವಿಲ್ಲದೆ ಅರ್ಹರಲ್ಲದವರಿಗೆ ನೀಡುವ ಉಚಿತ ಗ್ಯಾರಂಟಿಗಳು ದೇಶದ ಆರ್ಥಿಕ ಅಭಿವೃದ್ಧಿಗೆ ಅಡ್ಡಿಯಾಗುತ್ತವೆ ಎಂದು ನ್ಯಾಯಪೀಠ ಛಾಟಿ ಬೀಸಿದೆ. ಗ್ಯಾರಂಟಿಗಳನ್ನು ನೀಡುತ್ತಿರುವ ಹೆಚ್ಚಿನ ರಾಜ್ಯಗಳು ಈಗಾಗಲೇ ಆರ್ಥಿಕ ನಷ್ಟದಲ್ಲಿವೆ. ಅಭಿವೃದ್ಧಿ ಯೋಜನೆಗಳಿಗೆ ಬದಲಾಗಿ ಉಚಿತ ಸೌಲಭ್ಯಗಳನ್ನು ನೀಡುತ್ತಿವೆ. ಸರ್ಕಾರಿ ಸವಲತ್ತುಗಳಿಗೆ ಪಾವತಿಸಲು ಸಾಧ್ಯವಾಗದ ಬಡವರಿಗೆ ನೆರವು ನೀಡುವುದರಲ್ಲಿ ಅರ್ಥವಿದೆ. ಆದರೆ, ಶ್ರೀಮಂತ ಮತ್ತು ಬಡವ ಎಂಬ ವ್ಯತ್ಯಾಸ ಇಲ್ಲದೆ, ಎಲ್ಲರಿಗೂ ಉಚಿತ ಗ್ಯಾರಂಟಿಗಳನ್ನು ನೀಡುವುದು ತಪ್ಪು ನೀತಿ. ಉಚಿತ ವಸ್ತುಗಳನ್ನು ವಿತರಿಸುವ ಬದಲು ಉದ್ಯೋಗಾವಕಾಶ ಸೃಷ್ಟಿಸುವತ್ತ ರಾಜ್ಯ ಸರ್ಕಾರಗಳು ಗಮನಹರಿಸಬೇಕು, ಉಚಿತ ವಸ್ತುಗಳ ಕೊಡುಗೆಯಿಂದ ಭಾರತದಲ್ಲಿ ಯಾವ ಸಂಸ್ಕೃತಿ ಸೃಷ್ಟಿಸುತ್ತಿದ್ದೇವೆ, ಇದು ಮತ ಗಳಿಸುವ ನೀತಿ ಆಗುವುದಿಲ್ಲವೇ ಎಂದಿದೆ.

ಸಾರಿಗೆ ಮುಷ್ಕರ ಸ್ಥಗಿತ

ಸರ್ಕಾರದ ಭರವಸೆಗಳ ಬಗ್ಗೆ ಮತ್ತೊಮ್ಮೆ ಚರ್ಚಿಸಿ, ಮುಂದಿನ ದಿನಗಳಲ್ಲಿ ಅಂತಿಮ ಹಂತದ ಹೋರಾಟದ ನಿರ್ಧಾರ ಕೈಗೊಳ್ಳಲಾಗುವುದು ಎಂದು ಒಕ್ಕೂಟದ ಮುಖಂಡರು ತಿಳಿಸಿದ್ದಾರೆ. ಕೆಎಸ್ ಆರ್‌ಟಿಸಿ ಎಂಡಿ ಅಕ್ರಂ ಪಾಷಾ ಮಾತನಾಡಿ, ಸಭೆ ಮಾಡಿ ನಿರ್ಧಾರ ತೆಗೆದುಕೊಳ್ಳುತ್ತೇವೆ. ಬಂದ್ ಮಾಡುವುದಿಲ್ಲ ಎಂಬ ನಂಬಿಕೆಯಿದೆ. ಈಗಾಗಲೇ ಸಾರಿಗೆ ಸಚಿವರ ಜೊತೆ ಚರ್ಚೆ ಮಾಡುತ್ತಿದ್ದೇವೆ. ಮತ್ತೆ ಸಾರಿಗೆ ಮುಖಂಡರ ಜೊತೆ ಶೀಘ್ರ ಸಭೆಗೆ ದಿನಾಂಕ ನಿಗದಿ ಮಾಡುತ್ತೇವೆ ಎಂದು ತಿಳಿಸಿದರು.

ಮುಖ್ಯ ಕಾರ್ಯದರ್ಶಿ ಸಮರ್ಥನೆ

ಆಕ್ಷೇಪ ವ್ಯಕ್ತಪಡಿಸಿದ್ದಲ್ಲದೆ, ಮುಖ್ಯಕಾರ್ಯದರ್ಶಿ ವಿರುದ್ಧ ಲಂಚದ ಆರೋಪ ಮಾಡಿದ್ದರು. ಈ ಆರೋಪದಲ್ಲಿ ಯಾವುದೇ ಹುರುಳಿಲ್ಲ, ಇದು ಸುಳ್ಳು ಮತ್ತು ಕ್ಷುಲ್ಲಕದಿಂದ ಕೂಡಿದೆ. ದೂರುದಾರರು ಯಾವುದೇ ಪೂರಕ ಸಾಕ್ಷ್ಯಾಧಾರಗಳನ್ನು ಒದಗಿಸದೆ, ಸರ್ಕಾರದ ಉನ್ನತ ಹಂತದಲ್ಲಿರುವ ಅಧಿಕಾರಿ ವಿರುದ್ಧ ನಿರಾಧಾರ ಆರೋಪ ಮಾಡುತ್ತಿರುವುದು ಮಾನಹಾನಿ ಮಾಡಿದಂತಾಗುತ್ತದೆ ಎಂದಿದ್ದಾರೆ.

ನಟೇಶ್ ಆಯುಕ್ತರಾಗಿದ್ದಾಗ ಮುಡಾದಲ್ಲಿ ಬಿಡಿ ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿ ಭಾರೀ ಭ್ರಷ್ಟಾಚಾರ ಎಸಗಿದ್ದಾರೆಂದು ಬಂದ ದೂರನ್ನು ನ್ಯಾಯಾಲಯದ ಆದೇಶದಂತೆ ಲೋಕಾಯುಕ್ತ ತನಿಖೆಗೆ ವಹಿಸಲಾಗಿದೆ. ನಟೇಶ್ ವಿರುದ್ಧ 17(ಎ) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988ರಡಿ ತನಿಖೆ ನಡೆಸಲು ಅನುಮತಿ ನೀಡಲಾಗಿದೆ. ಸರ್ಕಾರಿ ನೌಕರರನ್ನು ಮುಂಬಡ್ತಿಗೆ ಪರಿಗಣಿಸಬೇಕಾದ ನಿಯಮಗಳನ್ನು ಪಾಲನೆ ಮಾಡಿ ಮುಂಬಡ್ತಿ ನೀಡಲಾಗುತ್ತದೆ. ಸರ್ಕಾರದ ಆಸ್ತಿಯನ್ನು ಅಕ್ರಮವಾಗಿ, ಭ್ರಷ್ಟಾಚಾರದ ಮೂಲಕ ಹಾಗೂ ಅಧಿಕಾರ ದುರ್ಬಳಕೆ ಮಾಡಿಕೊಳ್ಳುವವರ ವಿರುದ್ಧ ಕಾನೂನು ಹಾಗೂ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ. ನಟೇಶ್ ವಿರುದ್ಧ ಗುರುತರ ಆರೋಪಗಳು ಇಲ್ಲದ ಕಾರಣ ಅವರನ್ನು ಅಮಾನತುಗೊಳಿಸಿಲ್ಲ.

ದೂರುದಾರರು ಮಾಡಿರುವ ಆರೋಪವು ನಿರಾಧಾರವಾಗಿದ್ದು, ಅಧಿಕಾರಿಯನ್ನು ರಕ್ಷಿಸುವ ಪ್ರಮೇಯವೂ ಸರ್ಕಾರಕ್ಕಿಲ್ಲ. ಲೋಕಾಯುಕ್ತ ಈಗಾಗಲೇ ಈ ವಿಚಾರವಾಗಿ ತನಿಖೆ ನಡೆಸಿ ವರದಿ ನೀಡಿದೆ. ಅದನ್ನು ಪ್ರಶ್ನಿಸಿ ಉಚ್ಚನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವ ಪ್ರಮೇಯವೇ ಇಲ್ಲ ಎಂದಿದ್ದಾರೆ.

ಸ್ವಂತ ಬಲದ ಮೇಲೆ ಅಧಿಕಾರಕ್ಕೆ ತರೋಣ

ಅನಂತ್ ಸ್ಮರಣೆ: ಅನಂತ್ ಕುಮಾರ್ ಅವರನ್ನು ಸ್ಮರಿಸಿಕೊಂಡ ಯಡಿಯೂರಪ್ಪ ನನ್ನ ಜತೆ ಹಗಲು ರಾತ್ರಿ ಹೋರಾಟದಲ್ಲಿ ಭಾಗಿಯಾಗಿದ್ದರು. ಈ ರಾಜ್ಯದಲ್ಲಿ ಬದಲಾವಣೆ ಬರಲು ಅನಂತ್ ಕುಮಾರ್ ಕಾರಣ ಎಂದು ತಮ್ಮ ಹೋರಾಟದ ದಿನಗಳನ್ನು ನೆನಪಿಸಿಕೊಳ್ಳುತ್ತಾ, ಕಳೆದ 50 ವರ್ಷದಲ್ಲಿ ರಾಜ್ಯಾದ್ಯಂತ ನಿರಂತರವಾಗಿ ಓಡಾಡಿ ಪಕ್ಷ ಅಧಿಕಾರಕ್ಕೆ ತಂದಿದ್ದೇವೆ. ಸಂಘದ ಮಾರ್ಗದರ್ಶನ ನಾನು ನಿಮ್ಮ ಮುಂದೆ ಗಟ್ಟಿಯಾಗಿ ನಿಲ್ಲಲು, ಸಿಎಂ ಆಗಲು, ಅನೇಕ ಸ್ಥಾನ ಹೊಂದಲು ಕಾರಣ. ಪುರಸಭೆ ಸದಸ್ಯ ಸ್ಥಾನದಿಂದ ಈ ಮಟ್ಟಕ್ಕೆ ಬರಲು ಜನರ ಆಶೀರ್ವಾದ ಕಾರಣ. ಭ್ರಷ್ಟ ಸರ್ಕಾರ ಇದು, ಇದನ್ನು ಕಿತ್ತೊಗೆಯಲು ಒಟ್ಟಾಗಿ ಹೋರಾಟ ಮಾಡಬೇಕಿದೆ ಎಂದು ಕರೆ ನೀಡಿದರು. ಇದೇ ವೇಳೆ ಯಡಿಯೂರಪ್ಪ ಅವರು, ತಮ್ಮ ಜತೆ ಬೆಳೆದ, ಹೋರಾಟ ಮಾಡಿದ, ಪಕ್ಷ ಕಟ್ಟಿದ, ಸಹಕಾರ ಕೊಟ್ಟವರ ಹೆಸರು ಹೇಳಿ ನೆನಪಿಸಿಕೊಂಡರು. ಅನಂತ್ ಕುಮಾರ್, ಶಂಕರಮೂರ್ತಿ, ವಸಂತ ಬಂಗೇರ, ಬಿ.ಬಿ.ಶಿವಪ್ಪ, ಎಂ ಆರ್ ತಂಗ, ನರೇಂದ್ರ, ಎ.ಕೆ.ಸುಬ್ಬಯ್ಯ, ಬಸವರಾಜ ಪಾಟೀಲ್ ಸೇಡಂ, ರಾಮಚಂದ್ರೇಗೌಡರನ್ನು ಸ್ಮರಿಸಿಕೊಂಡರು.

ಮಾಜಿ ಸಿಎಂ ಡಿ.ವಿ.ಸದಾನಂದ ಗೌಡ ಮಾತನಾಡಿ, ಯಡಿಯೂರಪ್ಪನವರು ನಮ್ಮ ಪಕ್ಷವನ್ನು ಕರ್ನಾಟಕದಲ್ಲಿ ಉತ್ತುಂಗಕ್ಕೆ ಏರಿಸಿದವರು. ದಕ್ಷಿಣ ಭಾರತದಲ್ಲಿ ಕರ್ನಾಟಕವನ್ನು ಪ್ರಥಮ ರಾಜ್ಯವಾಗಿ ಬಿಜೆಪಿ ಆಡಳಿತಕ್ಕೆ ತಂದವರು. ದೂರದೃಷ್ಟಿ ಚಿಂತನೆಯ ಮನೋಭಾವ, ಸಮರ್ಪಕ ಯೋಚನೆ, ಯೋಜನೆ ಅನುಷ್ಠಾನದ ತಾಕತ್ತು, ಜೀವನದ ಒಳಿತು ಕೆಡುಕುಗಳನ್ನು ಸ್ಥಿತಪ್ರಜ್ಞನಂತೆ ಕರ್ತವ್ಯ ನಿರ್ವಹಿಸಿದ ಸಮರ್ಥ ರಾಜಕೀಯ ನಾಯಕ ಯಡಿಯೂರಪ್ಪನವರು ಎಂದು ವಿಶ್ಲೇಷಿಸಿದರು.


ಮಂಡ್ಯ ಜಿಲ್ಲೆಯ ಬೂಕನಕೆರೆಯಿಂದ ಹೊರಟು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರಕ್ಕೆ ಹೋಗಿ ಅಲ್ಲಿಂದ ಬೆಂಗಳೂರು, ಹೊಸದಿಲ್ಲಿಯ ವರೆಗೆ ತೆರಳುವ ಎಲ್ಲ ಸಂದರ್ಭದಲ್ಲೂ ದೊಡ್ಡ ಸಂಘರ್ಷವನ್ನು ಅವರು ಎದುರಿಸಿದ್ದರು. ಸಂಘಟನೆಯ ಹಾದಿಯಲ್ಲಿ ಅವರು ನಡೆದು ಬಂದಿದ್ದಾರೆ. ಕಾರ್ಯಕರ್ತರು, ಮುಖಂಡರ ಬೆನ್ನು ತಟ್ಟಿ ಅವರು ಸಂಘಟನೆಯಲ್ಲಿ ತೊಡಗಿಸಿಕೊಳ್ಳುವಂತೆ ನೋಡಿಕೊಳ್ಳುತ್ತಿದ್ದರು ಎಂದು ಅವರು ತಿಳಿಸಿದರು.

ಕಾಂಗ್ರೆಸ್ ಶಾಸಕರೇ ದಂಗೆ ಏಳುವ ಪರಿಸ್ಥಿತಿ ಇದೆ: ಇದೇ ವೇಳೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಳ್ಳ ಹಿಡಿದಿದೆ. ಅಹಿಂದ ಹೆಸರಲ್ಲಿ ಸಿದ್ದರಾಮಯ್ಯ ಅಲ್ಪಸಂಖ್ಯಾತರ ಓಲೈಕೆ ಮಾಡ್ತಿದ್ದಾರೆ. ಹಿಂದುಳಿದ ವರ್ಗಗಳು, ದಲಿತ ಸಮುದಾಯಗಳನ್ನು ಕಾಂಗ್ರೆಸ್ ಕೇವಲ ವೋಟ್ ಬ್ಯಾಂಕ್ ಮಾಡಿಕೊಂಡಿದೆ. ಹಿಂದುಳಿದ ಸಮಾಜಗಳ ನಿಗಮ ಮಂಡಳಿಗಳಿಗೆ ಕನಿಷ್ಠ 3 ಸಾವಿರ ಕೋಟಿ ಬಜೆಟ್‌ನಲ್ಲಿ ಘೋಷಿಸಲಿ. ಖಾಲಿ ಹುದ್ದೆಗಳಿದ್ದರೂ ನೇಮಕಾತಿ ಮಾಡುತ್ತಿಲ್ಲ. ಜನ ವಿರೋಧಿ, ರೈತ ವಿರೋಧಿ, ಮಹಿಳಾ ವಿರೋಧಿ, ಯುವ ವಿರೋಧಿ ಸರ್ಕಾರ ಇದು. ರಾಜ್ಯದಲ್ಲಿ ಕಾಂಗ್ರೆಸ್ ಅರಾಜಕತೆ ಸೃಷ್ಟಿಸುತ್ತಿದೆ. ಕೇಂದ್ರದ ಮೇಲೆ ಸುಳ್ಳು ಆರೋಪ ಮೂಲಕ ಕಾಲಹರಣ ಮಾಡುತ್ತಿದ್ದಾರೆ. ಸರ್ಕಾರದ ವಿರುದ್ಧ ಆಡಳಿತ ಪಕ್ಷದ ಶಾಸಕರೇ ದಂಗೆ ಏಳುವ ಪರಿಸ್ಥಿತಿ ಇದೆ. ನಮ್ಮ ಪಾದಯಾತ್ರೆಗೆ ಹೆದರಿ ಸೈಟ್ ವಾಪಸ್ ಕೊಟ್ಟರೂ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಜನಾಕ್ರೋಶ ಇದೆ ಎಂದರು.

ಕಾರ್ಯಕಾರಿಣಿ ಸಭೆಯಲ್ಲಿ ನಾಲ್ಕು ಅಂಶಗಳ ನಿರ್ಣಯ: ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ರಾಜ್ಯ ಸರ್ಕಾರದ ವಿರುದ್ಧ ನಾಲ್ಕು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ಬ್ರಾಂಡ್ ಬೆಂಗಳೂರನ್ನು ಕಸ ಗುಂಡಿ ಬೆಂಗಳೂರಾಗಿ ಮಾಡಿದ ಸರ್ಕಾರದ ವಿರುದ್ಧ ಮೊದಲ ನಿರ್ಣಯ ಕೈಗೊಳ್ಳಲಾಯಿತು. ಎರಡನೆಯ ನಿರ್ಣಯವಾಗಿ ರಾಜ್ಯ ಸರ್ಕಾರದ ವೈಫಲ್ಯದ ವಿರುದ್ಧ ಬಿಜೆಪಿ ಮುಂದಿನ ದಿನಗಳಲ್ಲಿ ಜಿಲ್ಲೆ ಜಿಲ್ಲೆಯಲ್ಲಿ ಬೀದಿಗಿಳಿದು ಹೋರಾಟ ಮಾಡುವ ಹಾಗೂ ಜನರ ಕಷ್ಟ ಸುಖಕ್ಕೆ ಕಿವಿಗೊಡದ ಈ ಸರ್ಕಾರವನ್ನು ಕಿತ್ತೆಸೆಯುವ ಪಣ ತೊಡುವ ನಿರ್ಣಯ ಕೈಗೊಳ್ಳಲಾಯಿತು. ಎಸ್‌ಸಿ, ಎಸ್‌ಟಿ, ಒಬಿಸಿಯ ಆರ್ಥಿಕ ಹಾಗೂ ಔದ್ಯೋಗಿಕ ಅವಕಾಶಗಳನ್ನು ವಂಚಿಸಿರುವ ಸರ್ಕಾರದ ವಿರುದ್ಧ ಮೂರನೇ ಖಂಡನಾ ನಿರ್ಣಯ ಕೈಗೊಳ್ಳಲಾಗಿದೆ. ನಾಲ್ಕನೆಯದಾಗಿ ಸ್ವಾತಂತ್ರ್ಯ ಆಂದೋಲನಕ್ಕೆ ಕಾರಣವಾದ ವಂದೇ ಮಾತರಂ ಗೀತೆಗೆ ರಾಷ್ಟ್ರೀಯ ಗೌರವ ಹಾಗೂ ಗ್ರಾಮಗಳಿಗೆ ಶಕ್ತಿ ತುಂಬಲು ವಿಬಿ ಜಿ ರಾಮ್ ಜಿ ಕಾಯ್ದೆ ಜಾರಿಗೆ ತಂದ ಕೇಂದ್ರ ಸರ್ಕಾರಕ್ಕೆ ಅಭಿನಂದನಾ ನಿರ್ಣಯ ಕೈಗೊಳ್ಳಲಾಯಿತು.

ಕಾರ್ಯಾದೇಶದೊಂದಿಗೆ ಕಾನೂನಾತ್ಮಕ ಅನುಮತಿ ಪತ್ರ ಹಾಜರುಪಡಿಸದ ಹಿನ್ನೆಲೆ

ಮೈಸೂರು ಕಾರಂಜಿ ಕೆರೆಯ ಝಿಪ್‌ಲೈನ್ ಕಾಮಗಾರಿ ಸ್ಥಗಿತ



ಕಾರಂಜಿಕೆರೆ ಆವರಣದಲ್ಲಿ ಝಿಪ್‌ಲೈನ್‌ಗೆ ಪಿಲ್ಲರ್ ಅಳವಡಿಸುವ ಕಾಮಗಾರಿ ಸ್ಥಗಿತಗೊಳಿಸಿರುವುದು.

ಮೈಸೂರು, ಫೆ.19(ಎಂಟಿವೈ)– ಮೈಸೂರಿನ ಕಾರಂಜಿಕೆರೆ ಆವ ರಣದ ಚಿಟ್ಟೆ ಪಾರ್ಕ್ ಬಳಿ ಕೇಂದ್ರ ಸರ್ಕಾರದ ಸ್ವದೇಶಿ ದರ್ಶನ್ ಯೋಜನೆಯಡಿ ಪ್ರವಾಸೋದ್ಯಮ ಇಲಾಖೆ ಆರಂಭಿಸಿದ್ದ ಸಾಹಸ ಕ್ರೀಡೆಗೆ ಸಂಬಂಧಿಸಿದ ಝಿಪ್‌ಲೈನ್ ನಿರ್ಮಾಣ ಕಾಮಗಾರಿಯನ್ನು ಸ್ಥಗಿತ ಗೊಳಿಸುವಂತೆ ಮೃಗಾಲಯದ ಹಿರಿಯ ಅಧಿಕಾರಿಗಳು ಸೂಚನೆ ನೀಡಿದ್ದಾರೆ.

ಕಾರಂಜಿಕೆರೆ ಆವರಣದಲ್ಲಿ ಝಿಪ್‌ಲೈನ್ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಾಗಿ ಕೇಂದ್ರ 14 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆಯ ಮೂಲಸೌಕರ್ಯ ಅಭಿವೃದ್ಧಿ ನಿಗಮವು ಈ ಕಾಮ ಗಾರಿ ಕೈಗೆತ್ತಿಕೊಂಡಿದೆ. ಈಗಾಗಲೇ ಪಿಲ್ಲರ್(ಕಂಬ) ನಿರ್ಮಾಣ ಕಾಮಗಾರಿ ಆರಂಭವಾಗಿದೆ. ಕಾಮಗಾರಿಗೆ ಅನುಮತಿ ಆದೇಶ ಪ್ರತಿ ಬರುವವರೆಗೂ ಕಾಮಗಾರಿ ಕೈಗೊಳ್ಳದಂತೆ ಮೃಗಾಲಯದ ಅಧಿಕಾರಿಗಳು ಗುತ್ತಿಗೆದಾರರಿಗೆ ಸೂಚನೆ ನೀಡಿದ್ದಾರೆ. ಹಾಗಾಗಿ ಝಿಪ್‌ಲೈನ್ ನಿರ್ಮಾಣ ಕಾಮಗಾರಿ ಸ್ಥಗಿತಗೊಂಡಿದೆ.

ಮೃಗಾಲಯ ಪ್ರಾಧಿಕಾರದ ಸಭೆಯಲ್ಲಿ ಅನುಮೋದನೆ: ಇತ್ತೀಚೆಗೆ ನಡೆದ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸಭೆಯಲ್ಲಿ ಝಿಪ್‌ಲೈನ್ ನಿರ್ಮಾಣ ಕಾಮಗಾರಿಗೆ ಅನುಮೋದನೆ ಸಿಕ್ಕಿದೆ. ಪರಿಸರಕ್ಕೆ ಹಾನಿಯಾಗದಂತೆ, ಕೆರೆಗೆ ಧಕ್ಕೆಯಾಗದಂತೆ ಕಾಮಗಾರಿ ನಡೆಸುವ ಷರತ್ತು ವಿಧಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರವಾಸೋದ್ಯಮ ಇಲಾಖೆ ಬೆಂಗಳೂರಿನ ಸಂಸ್ಥೆಯೊಂದಕ್ಕೆ ಟೆಂಡರ್ ನೀಡಿದ್ದು, ಇದೀಗ ಪಿಲ್ಲರ್ ನಿರ್ಮಾಣ ಕಾಮಗಾರಿ ಆರಂಭವಾಗಿತ್ತು.

ಸಭೆಯಲ್ಲಿ ಅನುಮತಿ ದೊರೆತಿದೆ: ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗ ಸ್ವಾಮಿ ಝಿಪ್‌ಲೈನ್ ನಿರ್ಮಾಣ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಕೇಂದ್ರ ಸರ್ಕಾರದ 'ಸ್ವದೇಶಿ ದರ್ಶನ್' ಯೋಜನೆಯಡಿ ಕಾಮಗಾರಿ ನಡೆಸಲು ಪ್ರವಾಸೋದ್ಯಮ ಇಲಾಖೆ ಪ್ರಸ್ತಾವನೆ ಸಲ್ಲಿಸಿತ್ತು. ಇದಕ್ಕೆ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸಭೆಯಲ್ಲಿ ಅನುಮತಿ ನೀಡಲಾಗಿದೆ. ಸಭೆಯಲ್ಲಿ ಯೋಜನೆಯ ಕಾಮಗಾರಿ ಸಂಬಂಧ ಡಿಪಿಆರ್ ಪ್ರಸ್ತುತ ಪಡಿಸಲಾಯಿತು. ಪರಿಸರಕ್ಕೆ ಹಾನಿಯಾಗದಂತೆ ನಿಬಂಧನೆಗಳನ್ನು ಹಾಕಿ ಕಾಮಗಾರಿಗೆ ಅನುಮತಿ ನೀಡಲಾಗಿದೆ. ಆದರೆ, ಅದರ ಕಾಮಗಾರಿ ಆರಂಭವಾಗಿರುವ ಮಾಹಿತಿ ಬಂದಿಲ್ಲ ಎಂದು ತಿಳಿಸಿದರು.

ಅನುಮತಿ ಸಿಕ್ಕಿದೆ: ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳು ಮಾತನಾಡಿ, ಸ್ವದೇಶಿ ದರ್ಶನ್ ಯೋಜನೆ ಕಾಮ ಗಾರಿಗೆ ಕರ್ನಾಟಕ ಪ್ರವಾಸೋದ್ಯಮ ಮೂಲ ಸೌಕರ್ಯ ಅಭಿವೃದ್ಧಿ ನಿಗಮವು ಟೆಂಡರ್ ಕರೆದು ಬೆಂಗಳೂರಿನ ಸಂಸ್ಥೆಯೊಂದಕ್ಕೆ ಕಾಮಗಾರಿಯ ಜವಾಬ್ದಾರಿ ವಹಿಸಿದೆ. ಅದರಂತೆ ಪ್ರವಾಸೋದ್ಯಮ ಇಲಾಖೆಯ ಮೇಲ್ವಿಚಾರಣೆಯಲ್ಲಿ ಪಿಲ್ಲರ್ ಅಳವಡಿಸುವ ಕಾಮಗಾರಿ ಆರಂಭಿಸಲಾಗಿದೆ ಎಂದರು.

ಕಾಮಗಾರಿ ಸ್ಥಗಿತ: ಮೃಗಾಲಯದ ಭದ್ರತಾ ವಿಭಾಗದ ಅಧಿಕಾರಿಗಳು ಇಂದು ಬೆಳಗ್ಗೆ ಪಿಲ್ಲರ್ ಕಾಮಗಾರಿ ಮುಂದುವರೆಸದಂತೆ ಸೂಚನೆ ನೀಡಿದ್ದಾರೆ. ಹಾಗಾಗಿ ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಕಾಮಗಾರಿ ಆದೇಶ ಪ್ರತಿಯೊಂದಿಗೆ ಮೃಗಾಲಯದ ಅಧಿಕಾರಿಗಳೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಿದ್ದಾರೆ. ಪ್ರಸ್ತುತ ಪಿಲ್ಲರ್ ಕಾಮಗಾರಿಗೆ ಕ್ಯೂರಿಂಗ್‌ಗೆ ಅನುಮತಿ ನೀಡಿದ್ದಾರೆ ಎಂದು ತಿಳಿಸಿದರು.

ಮಾಹಿತಿ ನೀಡಲು ಹಿಂದೇಟು ಹಾಕಿದ ಅಧಿಕಾರಿಗಳು: ಕಾರಂಜಿಕೆರೆ ಆವರಣದಲ್ಲಿ ಸ್ವದೇಶಿ ದರ್ಶನ್ ಯೋಜನೆಯಡಿ ನಿರ್ಮಿಸುತ್ತಿರುವ ಜಿಪ್‌ಲೈನ್ ಕಾಮಗಾರಿ ಬಗ್ಗೆ ಮಾಹಿತಿ ನೀಡಲು ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದು, ಕರ್ನಾಟಕ ಪ್ರವಾಸೋದ್ಯಮ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆಟಿಐಎಲ್) ಇಇ ಅವರನ್ನು ಸಂಪರ್ಕಿಸುವಂತೆ ಸಲಹೆ ನೀಡಿದರು. ಆದರೆ, ಇಇ ಅವರು ಕರೆಗೆ ಸ್ಪಂದಿಸಲು ಯೋಜನೆಯ ಮಾಹಿತಿ ನೀಡದೆ ಸುಮ್ಮನಾದರು. ಬಳಿಕ ಎಇಇ ಮತ್ತು ಎಇ ಕೂಡ ಕಾಮಗಾರಿಯ ಬಗ್ಗೆ ಮಾಹಿತಿ ನೀಡದೆ, ತಮಗೆ ಕಾಮಗಾರಿಯ ಬಗ್ಗೆ ಯಾವ ಮಾಹಿತಿಯೂ ಇಲ್ಲ ಎಂದು ಸುಮ್ಮನಾದರು.

ಎಂಡಿಎ ಹೇಳಿಕೆ ನಮ್ಮ ವ್ಯವಹಾರಕ್ಕೆ ಕುತ್ತಾಗಿದೆ!

- ವಸ್ತುಗಳ ಸಾಲ ರೂಪದಲ್ಲಿ ಕೊಡಲು ಹಿಂದೇಟು ಹಾಕುವ ಪರಿಸ್ಥಿತಿ ನಿರ್ಮಾಣ
- ಡೋಪ್ಲಿನ್ ಕಾಂಪ್ಲೆಕ್ಸ್ ಅಸೋಸಿಯೇಷನ್ ಅಧ್ಯಕ್ಷ ಗಿರೀಶ್ ಅಸಹಾಯಕತೆ



ಮೈಸೂರಿನ ಶಿವರಾಂ ಪೇಟೆಯ ಡೋಪ್ಲಿನ್ ಕಾಂಪ್ಲೆಕ್ಸ್ ಮರ್ಚೆಂಟ್ಸ್ ಅಸೋಸಿಯೇಷನ್ ಅಧ್ಯಕ್ಷ ಗಿರೀಶ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಫೆ.19(ಬಿಎಲ್‌ಯು)– ಮೈಸೂರಿನ ಶಿವರಾಂ ಪೇಟೆಯಲ್ಲಿರುವ ಡೋಪ್ಲಿನ್ ಕಾಂಪ್ಲೆಕ್ಸ್ ತೆರವುಗೊಳಿಸುವುದಾಗಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ದ ಆಯುಕ್ತ ಕೆ.ಆರ್.ರಕ್ಷಿತ್ ನೀಡಿರುವ ಹೇಳಿಕೆಯಿಂದ ನಮ್ಮ ಹಣಕಾಸು ವ್ಯವಹಾರಕ್ಕೆ ಭಾರೀ ಧಕ್ಕೆಯಾಗಿದೆ ಎಂದು ಡೋಪ್ಲಿನ್ ಕಾಂಪ್ಲೆಕ್ಸ್ ಮರ್ಚೆಂಟ್ಸ್ ಅಸೋಸಿಯೇಷನ್ ಅಧ್ಯಕ್ಷ ಗಿರೀಶ್ ಅವರು ಬೇಸರ ವ್ಯಕ್ತಪಡಿಸಿದರು.

ಕಾಂಪ್ಲೆಕ್ಸ್ ಆವರಣದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಹಣಕಾಸು ವ್ಯವಹಾರಕ್ಕೆ ತೊಂದರೆ ಮಾತ್ರವಲ್ಲದೆ, ವರ್ತಕರಲ್ಲಿ ಆತಂಕ, ಗೊಂದಲದ ಪರಿಸ್ಥಿತಿ ಉಂಟಾಗಿದೆ. ನಾವೆಲ್ಲಾ ನೆಮ್ಮದಿ ಕಳೆದುಕೊಂಡಿದ್ದೇವೆ ಎಂದು ಗಿರೀಶ್ ಹೇಳಿದರು.

ದಿನಸಿ ಅಂಗಡಿ, ಮೆಡಿಕಲ್ ಸ್ಟೋರ್ ಸೇರಿದಂತೆ ಇತರೆ ಅಂಗಡಿಗಳು ನಮ್ಮ ಕಾಂಪ್ಲೆಕ್ಸ್‌ನಲ್ಲಿವೆ. ಡಿಸ್ಟ್ರಿಬ್ಯೂಟರ್‌ಗಳು ನಮಗೆ ಸಾಲದ ರೂಪದಲ್ಲಿ ವಸ್ತುಗಳನ್ನು ಕೊಡುತ್ತಿದ್ದರು. ಆದರೆ, ಮಾರ್ಚ್ ಮೊದಲ ವಾರದಲ್ಲಿ ಕಾಂಪ್ಲೆಕ್ಸ್‌ನ ಬಾಡಿಗೆದಾರರ ತೆರವುಗೊಳಿಸುವುದಾಗಿ ರಕ್ಷಿತ್ ಹೇಳಿರುವ ಕಾರಣ ನಮಗೆ ಸಾಲ ನೀಡಲು ಹಿಂದೇಟು ಹಾಕುತ್ತಿದ್ದಾರೆ ಎಂದು ದೂರಿದರು.

ಇವರಿಗೆ ಸಾಲ ಕೊಟ್ಟರೆ ಕಾಂಪ್ಲೆಕ್ಸ್ ಮಳಿಗೆ ತೆರವುಗೊಳಿಸಿದಾಗ ಹಣ ಬರುವುದಿಲ್ಲ ಎಂದು ಅನುಮಾನ ವ್ಯಕ್ತಪಡಿಸಿದ್ದಾರೆ. ಇದರಿಂದ ಕಳೆದ ಒಂದು ವಾರದಿಂದ ನಮ್ಮ ಹಣಕಾಸು ವ್ಯವಹಾರಕ್ಕೆ ತುಂಬಾ ತೊಂದರೆಯಾಗಿದೆ ಎಂದರು.

ಎಂಡಿಎ ಹೇಳಿಕೆ ಪ್ರಶ್ನಿಸಿ ನಾವು ಕೋರ್ಟ್ ಮೆಟ್ಟಿಲೇರಿಯಂತೂ ಹೋಗುವುದಿಲ್ಲ. ನಾವೆಲ್ಲಾ ಅಂಗಡಿಗಳ ಮಾಲೀಕತ್ವ ಹೊಂದಿರುವ ಕಾರಣ ಎಂಡಿಎ ಕೈಗೊಳ್ಳುವ ತೀರ್ಮಾನ ನಮಗೆ ಅನ್ವಯ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಈ ವಿಚಾರದ ಬಗ್ಗೆ ಸ್ಪಷ್ಟತೆ ಪಡೆಯಲು ನಿನ್ನೆ ಎಂಡಿಎ ಕಚೇರಿಯಲ್ಲಿ ಆಯುಕ್ತ ರಕ್ಷಿತ್ ಭೇಟಿ ಮಾಡಲು ಮುಂದಾದೆವು. ಆದರೆ ಆಯುಕ್ತರ ಆಪ್ತ ಸಹಾಯಕರು ಕಾರ್ಯದರ್ಶಿ ಅವರನ್ನು ಭೇಟಿ ಮಾಡಲು ಸಲಹೆ ನೀಡಿದರು. ಕಾರ್ಯದರ್ಶಿ ಜಾನ್ಸನ್ ಅವರನ್ನು ಭೇಟಿ ಮಾಡಿದರೆ ಆಯುಕ್ತರ ಕಡೆ ಬೊಟ್ಟು ಮಾಡಿ ತೋರಿಸಿದರು. ಹಾಗಾಗಿ ಕಾಂಪ್ಲೆಕ್ಸ್ ವರ್ತಕರಲ್ಲಿ ಗೊಂದಲ ಎದುರಾಗಿದೆ ಎಂದರು. ಬಾಡಿಗೆದಾರ ವರ್ತಕರ ಹಿತಾಸಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಎಂಡಿಎ ಆಯುಕ್ತರು ಈಗಲಾದರೂ ಸ್ಪಷ್ಟನೆ ನೀಡಬೇಕು. ತಾವು ನೀಡಿರುವ ಹೇಳಿಕೆ ಮಾಲೀಕತ್ವ ಹೊಂದಿರುವವರಿಗೆ ಅನ್ವಯ ಆಗುವುದಿಲ್ಲ ಎಂದು ತಿಳಿಸಬೇಕು. ಇಲ್ಲವೆಂದರೆ ನಮ್ಮ ನೆಮ್ಮದಿ ಮತ್ತಷ್ಟು ಕೆಡುತ್ತದೆ ಎಂದು ಗಿರೀಶ್ ಹೇಳಿದರು.

ಅಸೋಸಿಯೇಷನ್ ಉಪಾಧ್ಯಕ್ಷ ಜಗದೀಶ್, ಕಾರ್ಯದರ್ಶಿ ಶ್ರೀನಿವಾಸ್, ಖಜಾಂಚಿ ಹರ್ಷ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕಸ ವಿಲೇವಾರಿಗೆ ಅಡ್ಡಿಪಡಿಸಿದರೆ ಬಿಜೆಪಿ ಶಾಸಕರ ಕ್ಷೇತ್ರದಲ್ಲಿ ಸ್ವಚ್ಛತೆ ಸ್ಥಗಿತ

- ಬೆಂಗಳೂರು ಅಭಿವೃದ್ಧಿ ಸಚಿವರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಎಚ್ಚರಿಕೆ
- ಸ್ವಚ್ಛತೆ ನಿಲ್ಲಿಸಿದರೆ ಜನರೇ ಅವರಿಗೆ ಉಗಿತಾರೆ...!?

ಬೆಂಗಳೂರು,ಫೆ.19(ಕೆಎಂಶಿ)–ಕಸ ವಿಲೇವಾರಿಗೆ ಅಡ್ಡಿಪಡಿಸುವ ಬಿಜೆಪಿ ನಾಯಕರ ಕ್ಷೇತ್ರದಲ್ಲಿ ಸ್ವಚ್ಛತಾ ಕಾರ್ಯ ಸ್ಥಗಿತಗೊಳಿಸಿದರೆ ಜನರೇ ಅವರಿಗೆ ಉಗಿಯುತ್ತಾರೆ. ಮೈಕ್‌ನಲ್ಲಿ ಪ್ರಚಾರ ಮಾಡಿಸುತ್ತೇನೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಎಚ್ಚರಿಸಿದ್ದಾರೆ.

ಅಸ್ಸಾಂಗೆ ತೆರಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಸ ವಿಲೇವಾರಿಗೆ ಅಡ್ಡಿಪಡಿಸಬೇಡಿ ಎಂದು ಕಾಲು ಹಿಡಿಯಲು ಆಗುತ್ತದೆಯೇ, ಎಲ್ಲಾದರೂ ಒಂದು ಕಡೆ ಕಸ ಹಾಕಲೇಬೇಕಲ್ಲವೇ, ಕಸ ಯಾರದ್ದು, ಜನರ ಕಸ, ಮೊದಲಿನಿಂದಲೂ ಏನು ಸಂಪ್ರದಾಯವಿತ್ತೋ ಅದೇ ರೀತಿ ಮಾಡುತ್ತಿದ್ದೇವೆ. ಬಿಜೆಪಿ ಆಡಳಿತ ಹಾಗೂ ನಮ್ಮ ಸಮಯದಲ್ಲಿ ತೀರ್ಮಾನ ಮಾಡಿದ್ದೂ ಇದೇ ರೀತಿ ಎಂದರು.



ನಾವು ಅಭಿವೃದ್ಧಿಗೆ ಸಾವಿರಾರು ಕೋಟಿ ರೂ. ಹಣ ಕೊಟ್ಟಿದ್ದೇವೆ. ಇನ್ನೂ ಎಷ್ಟು ಕೊಡಲು ಸಾಧ್ಯ, 20, 30 ಕೋಟಿಯಿಂದ 50–100 ಕೋಟಿವರೆಗೆ ಅಭಿವೃದ್ಧಿಗೆ ಹಣ ಕೊಡುತ್ತಾ ಬಂದಿದ್ದೇವೆ. ನಾವೂ ಹಣ ಕೊಡುತ್ತೇವೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮಹದೇವಪುರದಲ್ಲಿ ಕಸ ವಿಲೇವಾರಿ ನಿಲ್ಲಿಸಲಾಗಿದೆ. ನಾವು ಸಹ ಅಲ್ಲಿ 3 ದಿನ ಕಸ ತೆಗೆಯಬೇಡಿ ಅಂದರೆ ಪರಿಸ್ಥಿತಿ ಏನಾಗಬಹುದು.

ಕಸ ವಿಲೇವಾರಿಗೆ ನಾಲ್ಕು ಕಡೆ ಜಮೀನು ನೋಡಿದ್ದೆವು. ಭೂಮಿ ಸಮಸ್ಯೆ ಕಾರಣಕ್ಕೆ ಎರಡು ಜಾಗ ಅಂತಿಮ ಮಾಡಿದ್ದೇವೆ. ಟೆಂಡರ್ ಸಹ ಕರೆಯಲಾಗಿದೆ. ನಮ್ಮ ಕೆಲಸ ನಾವು ಮಾಡುತ್ತಿದ್ದೇವೆ ಎಂದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಬೇಡಿಕೆಗಿಂತ ಕಡಿಮೆ ಹಿಂಬಾಕಿ ನೀಡಿರುವುದಾಗಿ ಹೇಳುತ್ತಾರೆ. ಅಷ್ಟು ಕೊಟ್ಟಿರುವುದಕ್ಕೆ ಸಂತೋಷ ಪಡಬೇಕು. ಸರ್ಕಾರದ ಪರಿಸ್ಥಿತಿ ಅರ್ಥ ಮಾಡಿಕೊಂಡು ಸಹಕರಿಸಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ, ಭೂಪೇಶ್ ಬಘೇಲ್ ಮತ್ತು ನಾನು ಅಸ್ಸಾಂಗೆ ತೆರಳುತ್ತಿದ್ದೇವೆ. ಹಲವು ವಿಚಾರ ಕುರಿತು ಸರಣಿ ಸಭೆ ನಡೆಸುತ್ತೇವೆ. ಅಸ್ಸಾಂ ಚುನಾವಣೆ ವಿಚಾರವಾಗಿ ದೆಹಲಿಯಲ್ಲಿ 3–4 ಸಭೆ ನಡೆಸಿ, ಮಾಹಿತಿ ಪಡೆದುಕೊಂಡಿದ್ದೇವೆ. ಚುನಾವಣಾ ತಂತ್ರಗಾರಿಕೆ ಸೇರಿದಂತೆ ಎಲ್ಲ ವಿಷಯ ಕುರಿತು ಚರ್ಚಿಸಲಾಗಿದೆ. ಈ ಬಾರಿ ಅಸ್ಸಾಂನಲ್ಲಿ ಬದಲಾವಣೆಯ ಭರವಸೆಯಿದೆ. ಕಾಮಾಕ್ಯ ದೇವಿ ದೇವಾಲಯಕ್ಕೂ ಭೇಟಿ ನೀಡುತ್ತೇನೆ. ಎರಡು ದಿನಗಳ ಪ್ರವಾಸ ಇದಾಗಿದೆ ಎಂದರು.

ಪ್ರತಾಪ್‌ಸಿಂಹ ಪರ ವಿಶೇಷ ಪೂಜೆ



ಮಾಜಿ ಸಂಸದ ಪ್ರತಾಪ್ ಸಿಂಹ ಕಟ್ಟಾ ಅಭಿಮಾನಿಗಳು ಮಲೆ ಮಹದೇಶ್ವರ ಬೆಟ್ಟದಲ್ಲಿ ಮಹಾಶಿವರಾತ್ರಿ ಹಬ್ಬದಂದು ಪ್ರತಾಪ್‌ಸಿಂಹ ಅವರು ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕರಾಗಲೆಂದು ಪ್ರಾರ್ಥಿಸಿ, ವಿಶೇಷ ಪೂಜೆ ಸಲ್ಲಿಸಿ, ಈಡುಗಾಯಿ ಒಡೆದರು. ಜೆಡಿಎಸ್ ಎಸ್‌ಸಿ ಘಟಕದ ಅಧ್ಯಕ್ಷ ಭೀಮರಾಜ್, ಪ್ರತಾಪ್‌ಸಿಂಹ ಅವರ ಅಭಿಮಾನಿಗಳಾದ ವಿಜಯ್, ಚರಣ್, ದೇವರಾಜ್, ರಾಜೇಶ್, ಶರತ್, ಕನಕರತ್ನ, ಪುಣ್ಯವತಿ, ಮಂಜುನಾಥ್ ಇನ್ನಿತರರಿದ್ದರು.

ಹೀಲಿಯಂ ಅನಿಲ ಬಳಕೆ ನಿಷೇಧ

ಮೈಸೂರು: ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023ರ ಕಲಂ 152ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಸಾರ್ವಜನಿಕ ಶಾಂತಿ, ಸುರಕ್ಷತೆ ಮತ್ತು ಜೀವ ರಕ್ಷಣೆಯ ಹಿತದೃಷ್ಟಿಯಿಂದ ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿರುವ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ಹೀಲಿಯಂ ಅನಿಲ ಬಳಸಿ ಬಲೂನ್‌ಗಳು ಅಥವಾ ಇತರ ಯಾವುದೇ ವಸ್ತುಗಳನ್ನು ಹೀಲಿಯಂ ಅನಿಲ ಉಪಯೋಗಿಸಿ ತುಂಬುವುದು, ಬಳಸುವುದು, ಮಾರಾಟ ಮಾಡುವುದನ್ನು ಮುಂದಿನ ಆದೇಶದವರೆಗೆ ಸಂಪೂರ್ಣವಾಗಿ ನಿಷೇಧಿಸಿ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ಯೋಗಾನರಸಿಂಹಸ್ವಾಮಿ ದೇವಾಲಯದ ರಾಜ ಗೋಪುರ ನಿರ್ಮಾಣಕ್ಕೆ ಚಾಲನೆ



ಮೈಸೂರಿನ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದ ರಾಜಗೋಪುರ ನಿರ್ಮಾಣಕ್ಕೆ ಚಾಲನೆ ನೀಡಲಾಯಿತು.

ಮೈಸೂರು,ಫೆ.19(ಜಿಎ)–ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾನರಸಿಂಹ ಸ್ವಾಮಿ ದೇವಾಲಯದ ರಾಜಗೋಪುರ ನಿರ್ಮಾಣಕ್ಕೆ ಚಾಲನೆ ನೀಡಲಾಯಿತು. ದೇವಸ್ಥಾನದಲ್ಲಿ ಗುರುವಾರ ಬೆಳಗ್ಗಿನಿಂದಲೇ ಶ್ರೀ ಸ್ವಾಮಿಗೆ ವಿಶೇಷ ಪೂಜಾ–ಕೈಂಕರ್ಯಗಳು ಜರುಗಿತಲ್ಲದೇ, 10.30ರಿಂದ 11.00 ಗಂಟೆಯ ಒಳಗೆ ಸಲ್ಲುವ ಶುಭ ಲಗ್ನದಲ್ಲಿ ವಿಧಿ–ವಿಧಾನಗಳಂತೆ ರಾಜಗೋಪುರ ನಿರ್ಮಾಣ ಕಾರ್ಯಕ್ಕೆ ದೇವಾಲಯದ ಸಂಸ್ಥಾಪಕರಾದ ನಾಡೋಜ ಪ್ರೊ.ಡಾ.ಭಾಷ್ಯಂ ಸ್ವಾಮೀಜಿ ಗುದ್ದಲಿ ಪೂಜೆ ನೆರವೇರಿಸಿದರು.

ಈ ವೇಳೆ ಭಾಷ್ಯಂ ಸ್ವಾಮೀಜಿ ಮಾತನಾಡಿ, ಯೋಗಾನರಸಿಂಹ ದೇವಾಲಯವನ್ನು ಮತ್ತಷ್ಟು ಅಭಿವೃದ್ಧಿಗೊಳಿಸಿ, ಭಕ್ತರಿಗೆ ಸಕಲ–ಸೌಲಭ್ಯಗಳನ್ನು ಕಲ್ಪಿಸಲು ಮುಂದಾಗಿದ್ದು, ಅಂತೆಯೇ ಇಂದು ದೇಗುಲದ ರಾಜಗೋಪುರ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಭಕ್ತಾದಿಗಳು ದೇವಾಲಯಕ್ಕೆ ಆಗಮಿಸಿ ದೇವರ ದರ್ಶನ ಪಡೆದು ಪುನೀತರಾಗಬೇಕೆಂದು ಆಶೀರ್ವದಿಸಿದರು.

ಈ ಸಂದರ್ಭದಲ್ಲಿ ದೇವಸ್ಥಾನಕ್ಕೆ ಆಗಮಿಸಿದ ಎಲ್ಲಾ ಭಕ್ತಾದಿಗಳಿಗೂ ಅನ್ನಸಂತರ್ಪಣೆ ಪ್ರಸಾದ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್, ಪ್ರಧಾನ ಅರ್ಚಕರಾದ ಶೇಷಾದ್ರಿ ಸೇರಿದಂತೆ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

ಫೆ.23ರಂದು ಉಚಿತ ಕಣ್ಣಿನ ತಪಾಸಣೆ, ಶಸ್ತ್ರ ಚಿಕಿತ್ಸಾ ಶಿಬಿರ

ಮೈಸೂರು, ಫೆ.19–ಮೈಸೂರಿನ ಅಮೃತಾಂಶು ಟ್ರಸ್ಟ್, ಮಣಿಪಾಲ್ ಆಸ್ಪತ್ರೆ ಬೃಂದಾವನ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ ಮತ್ತು ಕೆ.ಆರ್.ಆಸ್ಪತ್ರೆ ಸಹಯೋಗದಲ್ಲಿ, ಫೆ.23ರಂದು ಮೈಸೂರಿನ ಚಾಮುಂಡಿಪುರಂನ ಮೇದರಕೇರಿ 5ನೇ ಮುಖ್ಯ ರಸ್ತೆಯ ಪಾಂಚಜನ್ಯ ಕಟ್ಟಡದಲ್ಲಿ ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ ಏರ್ಪಡಿಸಲಾಗಿದೆ.

ಶಿಬಿರದಲ್ಲಿ ಕಣ್ಣಿನ ಪೊರೆ, ಹತ್ತಿರ ಮತ್ತು ದೂರದೃಷ್ಟಿ, ಗ್ಲೋಕೋಮಾ, ವಾರೆಕಣ್ಣು, ನೀರು ಸೋರುವಿಕೆ, ಕಣ್ಣಿನಲ್ಲಿ ಬಿರುಕು, ರಾತ್ರಿ ಕುರುಡುತನ ಸಮಸ್ಯೆಗಳಿಗೆ ಪರೀಕ್ಷೆ ನಡೆಸಲಾಗುತ್ತದೆ. ಮಣಿಪಾಲ್ ಆಸ್ಪತ್ರೆ ವತಿಯಿಂದ ಉಚಿತ ಬಿ.ಪಿ., ಶುಗರ್ ಮತ್ತು ಇಸಿಜಿ ಟೆಸ್ಟ್ ಹಾಗೂ ಬೃಂದಾವನ ಆಸ್ಪತ್ರೆ ವತಿಯಿಂದ ಚರ್ಮರೋಗ ಸಮಸ್ಯೆಗಳಿಗೆ ಉಚಿತ ತಪಾಸಣೆ ನಡೆಸಲಾಗುವುದು. ಶಿಬಿರಕ್ಕೆ ಬರುವವರು ಆಧಾರ್‌ಕಾರ್ಡ್, ಬಿಪಿಎಲ್ ಕಾರ್ಡ್ ತರಬೇಕು. ಹೆಚ್ಚಿನ ಮಾಹಿತಿಗೆ ದೂರವಾಣಿ 9945270 646, 9742634110 ಮೂಲಕ ಸಂಪರ್ಕಿಸಬಹುದು ಎಂದು ಶಿಬಿರದ ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆ.22ರಂದು ಮಹಾರಾಜ ಕಾಲೇಜಿನಲ್ಲಿ ಸಾಹಿತ್ಯೋತ್ಸವ

ಮೈಸೂರು,ಫೆ.19(ಜಿಎ)–ಮೈಸೂರು ಲಿಟರರಿ ಅಸೋಸಿಯೇಷನ್ ವತಿಯಿಂದ ಫೆ.22ರಂದು ಬೆಳಿಗ್ಗೆ 10ಗಂಟೆಗೆ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಸಾಹಿತ್ಯೋತ್ಸವ ಆಯೋಜಿಸಲಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ಪ್ರೊ.ಕೆ.ಸಿ.ಬೆಳ್ಳಿಯಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಶಿಕ್ಷಣ ತಜ್ಞ ಡಾ.ಗುರುರಾಜ ಕರ್ಜಗಿ ಉದ್ಘಾಟಿಸುವರು. ಹಿರಿಯ ಆಂಗ್ಲ ಭಾಷಾ ಪ್ರಾಧ್ಯಾಪಕ ಡಾ.ಬಿ.ಹರಿಹರನ್ ಅವರು 'ಹೊಸ ಭಾಷಾಂತರಗಳಲ್ಲಿ ಡಾನ್ ಕ್ವಿಕ್ಸಾಟನ್ ಜೀವನ್' ಎಂಬ ವಿಷಯ ಕುರಿತು, ಚಿತ್ರಕಾರರಾದ ಪ್ರೀತಿ ಶೆಣೈ ಅವರು ಡಾ. ಗೀತಾ ಕಾರಿಯಪ್ಪ ಅವರೊಡನೆ ಸಂವಾದ ನಡೆಸುವರು, ಚಲನಚಿತ್ರ ವಿಮರ್ಶಕರಾದ ಎಂ.ಕೆ.ರಾಘವೇಂದ್ರ 'ಭಾರತೀಯ ಜನಪ್ರಿಯ ಸಿನಿಮಾಗಳ ನಿರೂಪಣೆ ಮತ್ತು ಅನುಕರಣೆ ಒತ್ತಡ' ಕುರಿತು, ಸ್ಕೂಲ್ ಆಫ್ ಲಿಬರಲ್ ಆರ್ಟ್ಸ್ ಡೀನ್ ಡಾ. ಚಂದನ್ ಗೌಡ ಅವರು 'ಅಭಿವೃದ್ಧಿಯೊಂದಿಗೆ ಸಖ್ಯ: ಮೈಸೂರು ವೃತ್ತಾಂತ' ಕುರಿತು ಮಾತನಾಡಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಗೌರವ ಕಾರ್ಯದರ್ಶಿ ರೆಜಿನಾಲ್ಡ್ ವೆಸ್ಲಿ, ಪ್ರೊ.ಸಿ. ನಾಗಣ್ಣ, ಬಿ.ಚೇತನ್ ಉಪಸ್ಥಿತರಿದ್ದರು.

ನೂತನ ಪರಾಭವ ಸಂವತ್ಸರದ ಪಂಚಾಂಗ ವಿತರಣೆ ಕಾರ್ಯಕ್ರಮ...



ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ರಾಜೀವ್ ಸ್ನೇಹ ಬಳಗದ ವತಿಯಿಂದ ನೂತನ ಪರಾಭವ ಸಂವತ್ಸರದ ಪಂಚಾಂಗ ವಿತರಣೆ ಕಾರ್ಯಕ್ರಮ ರಾಜೀವ್ ನೇತೃತ್ವದಲ್ಲಿ ನಡೆಯಿತು. ಸುಮಾರು 600 ಮಂದಿಗೆ ಪಂಚಾಂಗ ವಿತರಿಸಲಾಯಿತು. ಈ ವೇಳೆ ಸಂಘದ ಉಪಾಧ್ಯಕರಾದ ಎಂ.ವಿ.ನಂದಕುಮಾರ್, ಎಸ್.ಶ್ರೀಧರಮೂರ್ತಿ, ಕಾರ್ಯದರ್ಶಿ ಕೆ.ಆರ್.ಮಂಜುನಾಥ, ಸಹ ಕಾರ್ಯದರ್ಶಿ ರಾವ್ ಸೋಮಶೇಖರ್, ನಿರ್ದೇಶಕ ಎಸ್.ರಾಜರತ್ನಂ ಇನ್ನಿತರರಿದ್ದರು.

ಇಂದು, ನಾಳೆ ಓಪನ್ ಹೌಸ್ ಕಾರ್ಯಕ್ರಮ

ಮೈಸೂರು,ಫೆ.19–ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆಯ (ಸಿಪೆಟ್) ವತಿಯಿಂದ ಫೆ.20 ಮತ್ತು 21ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 6ರವರೆಗೆ 'ಓಪನ್ ಹೌಸ್' ಕಾರ್ಯಕ್ರಮ ಆಯೋಜಿಸಲಾಗಿದೆ.

ವಿದ್ಯಾರ್ಥಿಗಳು ಸಾರ್ವಜನಿಕರು ಸಂಸ್ಥೆಗೆ ಬೇಟಿ ನೀಡಿ ಪ್ಲಾಸ್ಟಿಕ್ ಕೈಗಾರಿಕೆಯಲ್ಲಿ ಬಳಸುವ ಆಧುನಿಕ ತಂತ್ರಜ್ಞಾನ ಮತ್ತು ಸುಧಾರಿತ ಯಂತ್ರೋಪಕರಣಗಳ ನೇರ ಪ್ರತ್ಯಕ್ಷಿಕೆ ವೀಕ್ಷಿಸುವ ಅವಕಾಶ ಮತ್ತು ಪ್ರಯೋಗಾಲಯಗಳು (ಲ್ಯಾಬ್‌ಗಳು), ಟೂಲ್ ರೂಂ ಮತ್ತು ಪ್ಲಾಸ್ಟಿಕ್ ಉತ್ಪನ್ನಗಳ ತಯಾರಿಕಾ ಘಟಕಗಳನ್ನು ವೀಕ್ಷಿಸಬಹುದು. ಅನುಭವಿ ಅಧ್ಯಾಪಕರು, ಕೈಗಾರಿಕಾ ತಜ್ಞರಿಂದ ಉಪನ್ಯಾಸಗಳನ್ನು ಕೇಳಬಹುದು. ವೃತ್ತಿ ಮಾರ್ಗದರ್ಶನ, ವಿದ್ಯಾರ್ಥಿಗಳಿಗೆ ಇಂಟರ್‌ಶಿಪ್ ಸೌಲಭ್ಯ ಮತ್ತು ಉದ್ಯೋಗಾವಕಾಶಗಳ ಕುರಿತು ಮಾಹಿತಿ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ದೂ: 9480253024, 9791431827 ಅನ್ನು ಸಂಪರ್ಕಿಸಬಹುದಾಗಿದೆ.

ಮೈಸೂರು ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷರಾಗಿ ಬಿ.ಪಿ.ಬೋರೇಗೌಡ ಆಯ್ಕೆ

- ವೈ.ಜಿ.ಮಹೇಂದ್ರ ಉಪಾಧ್ಯಕ್ಷ
- ಇರ್ವರೂ ಅವಿರೋಧ ಆಯ್ಕೆ



ಮೈಸೂರು ಜಿಲ್ಲಾ ಹಾಪ್‌ಕಾಮ್ಸ್ ನೂತನ ಅಧ್ಯಕ್ಷ ಬಿ.ಪಿ.ಬೋರೇಗೌಡ, ಉಪಾಧ್ಯಕ್ಷ ವೈ.ಜಿ.ಮಹೇಂದ್ರ ಹಾಗೂ ಆಡಳಿತ ಮಂಡಳಿ ನಿರ್ದೇಶಕರನ್ನು ಜಿಲ್ಲಾ ಹಾಪ್‌ಕಾಮ್ಸ್ ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕ ಇಂಧುಧರ್ ಅಭಿನಂದಿಸಿದರು.

ಮೈಸೂರು, ಫೆ.19– ಮೈಸೂರು ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷರಾಗಿ ಬಿ.ಪಿ.ಬೋರೇಗೌಡ, ಉಪಾಧ್ಯಕ್ಷರಾಗಿ ವೈ.ಜಿ.ಮಹೇಂದ್ರ ಅವಿರೋಧವಾಗಿ ಆಯ್ಕೆಯಾದರು.

ಇಂದು ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಿ.ಪಿ.ಬೋರೇಗೌಡ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ವೈ.ಜಿ.ಮಹೇಂದ್ರ ಮಾತ್ರವೇ ನಾಮಪತ್ರ ಸಲ್ಲಿಸಿದ್ದರಿಂದ ಇಬ್ಬರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಹಕಾರ ಇಲಾಖೆ ಸಹಾಯಕ ನಿಬಂಧಕರಾದ ಜಯಲಕ್ಷ್ಮಿ ಘೋಷಣೆ ಮಾಡಿದರು.

2026–31ನೇ ಸಾಲಿಗೆ ನೂತನ ಆಡಳಿತ ಮಂಡಳಿಯ 14 ನಿರ್ದೇಶಕ ಸ್ಥಾನಗಳಿಗೆ ಇದೇ ಫೆ.5ರಂದು ಚುನಾವಣೆ ನಡೆದಿತ್ತು.

ಚುನಾವಣಾ ಸಭೆಯಲ್ಲಿ ನಿರ್ದೇಶಕರಾದ ಹೊಸಹುಂಡಿ ರಘು, ಚಂದ್ರೇಗೌಡ, ಸೂರ್ಯಕುಮಾರ್, ಆರ್.ಸರ್ವೇಶ್, ಮಿರ್ಲೆ ಸಂಜಯ್, ರಾಮೇಗೌಡ, ಬಿ.ಎನ್. ಪ್ರಭುಸ್ವಾಮಿ, ಜೆ.ಮಹದೇವ, ಡಿ.ಪದ್ಮನಾಭ, ಶಿವಣ್ಣ ನೇತ್ರಾವತಿ, ನಳಿನಿ ಭಾಗವಹಿಸಿದ್ದರು.

ನೂತನ ಆಡಳಿತ ಮಂಡಳಿ ಅಧ್ಯಕ್ಷ ಬಿ.ಪಿ.ಬೋರೇಗೌಡ, ಉಪಾಧ್ಯಕ್ಷ ವೈ.ಜಿ. ಮಹೇಂದ್ರ ಹಾಗೂ ನೂತನ ಆಡಳಿತ ಮಂಡಳಿಯ ನಿರ್ದೇಶಕರನ್ನು ಜಿಲ್ಲಾ ಹಾಪ್‌ಕಾಮ್ಸ್ ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕ ಇಂಧುಧರ್.ಎಸ್.ಎಂ ಹಾಗೂ ಸಿಬ್ಬಂದಿ ಹಾರಹಾಕಿ, ಅಭಿನಂದಿಸಿದರು.

ನೂತನ ಅಧ್ಯಕ್ಷ ಬಿ.ಪಿ.ಬೋರೇಗೌಡ ಮಾತನಾಡಿ, ಜಿಲ್ಲೆಯ ರೈತರ ಹಿತ ಕಾಪಾಡುವುದು ನಮ್ಮೆಲ್ಲರ ಕರ್ತವ್ಯ. ಹಾಗಾಗಿ ಮುಂದಿನ ದಿನಗಳಲ್ಲಿ ರೈತರು ಬೆಳೆದ ತೋಟಗಾರಿಕೆ ಬೆಳೆಗಳಿಗೆ ಸಾಧ್ಯವಾದಷ್ಟು ಪ್ರಾಮಾಣಿಕವಾಗಿ ಉತ್ತಮ ಬೆಲೆ ಕೊಡಿಸುವುದಾಗಿ ತಿಳಿಸಿದರು.

ನಿರ್ದೇಶಕರ ಸಹಕಾರದಿಂದ ಒಮ್ಮತದಿಂದ ಅಧ್ಯಕ್ಷ–ಉಪಾಧ್ಯಕ್ಷರಾಗಿ ಆಯ್ಕೆ ಮಾಡಿದ್ದಾರೆ. ಆದ್ದರಿಂದ ಮುಂದೆಯು ನಾವೆಲ್ಲರೂ ಒಗ್ಗೂಡಿಸಿ ಕೊಂಡು ರಾಜ್ಯದಲ್ಲಿಯೇ ಮೈಸೂರು ಜಿಲ್ಲಾ ಹಾಪ್ ಕಾಮ್ಸ್ ಅನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವುದಾಗಿ ಹೇಳಿದರು.

ಅಭಿನಂದನೆ...



ಸಿದ್ದಾರ್ಥ ಒಕ್ಕಲಿಗರ ಸಂಘ ಪೂರ್ವ ವಲಯ ಸಂಘದ ನಿರ್ದೇಶಕರಾಗಿ ಆಯ್ಕೆಯಾಗಿರುವ ಹೆಚ್.ಎಸ್.ಶಿವಕುಮಾರ್ (ಯರಗನಹಳ್ಳಿ ಕುಮಾರ್) ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷ ಎಂ.ಸುರೇಶ್‌ಗೌಡ, ಶಂಕಿ ಗೌಡ, ಇ.ಎಸ್.ನಾಗರಾಜು ಚಿತ್ರದಲ್ಲಿದ್ದಾರೆ.

ದೇಶ – ವಿದೇಶ

ಕಾಮಾಕ್ಯ ಸನ್ನಿಧಿಯಲ್ಲಿ ಪ್ರಿಯಾಂಕಾ ಗಾಂಧಿ, ಡಿಕೆಶಿ ವಿಶೇಷ ಪೂಜೆ!



ಗುವಾಹಟಿ: ಇದೇ ವರ್ಷ ಚುನಾವಣೆ ನಡೆಯಲಿರುವ ಅಸ್ಸಾಂಗೆ ಕಾಂಗ್ರೆಸ್ ಸಂಸದೆ ಮತ್ತು ಸ್ಕ್ರೀನಿಂಗ್ ಕಮಿಟಿ ಅಧ್ಯಕ್ಷೆ ಪ್ರಿಯಾಂಕಾ ಗಾಂಧಿ ವಾದ್ರಾ ಇಂದಿನಿಂದ ಎರಡು ದಿನಗಳ ಭೇಟಿ ನೀಡಿದ್ದಾರೆ. ಈ ಭೇಟಿ ವೇಳೆಯಲ್ಲಿ ಕಾಮಾಕ್ಯ ದೇವಾಲಯಕ್ಕೆ ಭೇಟಿ ನೀಡಿದ್ದು, ದೇವರ ಆಶೀರ್ವಾದ ಪಡೆದಿದ್ದಾರೆ.

ಈ ವೇಳೆ ಅಲ್ಲಿದ್ದ ಬಾಬಾ, ಪ್ರಧಾನಿಯಾಗಿ ಆಶೀರ್ವಾದ ನೀಡಿರುವ ವಿಡಿಯೋ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಸಖತ್ ವೈರಲ್ ಆಗುತ್ತಿದೆ. ಇನ್ನೂ ಕರ್ನಾಟಕದಲ್ಲಿ ಮುಖ್ಯಮಂತ್ರಿ ಸ್ಥಾನದ ಮಹತ್ವಕಾಂಕ್ಷೆಯಲ್ಲಿರುವ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಕೂಡ ಕಾಮಾಕ್ಯ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಬೆಳಗ್ಗೆ 10 ಗಂಟೆ ಸುಮಾರಿಗೆ ಗುವಾಹಟಿ ಲೋಕಪ್ರಿಯಾ ಗೋಪಿನಾಥ್ ಬೊರ್ಡೋಲೊಯ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಿಯಾಂಕಾ ಗಾಂಧಿ ನೇರವಾಗಿ ನಗರದ ಕಾಮಾಕ್ಯ ದೇವಸ್ಥಾನಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು. ದೇಗುಲದ ಭೇಟಿ ವೇಳೆ ಪ್ರಿಯಾಂಕಾ ಗಾಂಧಿ, ನಾಗಾ ಸಾಧುವಿನ ಜೊತೆ ಕಿರು ಸಂವಾದ ನಡೆಸಿದ್ದಾರೆ. ಆಗ ಅಘೋರಿ ಬಾಬಾ, ಪ್ರಿಯಾಂಕಾ ಗಾಂಧಿ ತಲೆ ಮೇಲೆ ಕೈಯಿಟ್ಟು "ಹಮಾರಾ ಬೇಟಿ ಪ್ರಧಾನ ಮಂತ್ರಿ ಬನೇಗಾ (ನಮ್ಮ ಮಗಳು ಪ್ರಧಾನಿಯಾಗುತ್ತಾಳೆ) ಎಂದು ಆಶೀರ್ವಾದ ನೀಡಿದ್ದಾರೆ.

ಎಪ್ಸ್ಟೀನ್ ಆರೋಪದ ನಡುವೆ ಬ್ರಿಟನ್‌ನ ಪ್ರಿನ್ಸ್ ಆಂಡ್ರ್ಯೂ ಬಂಧನ



ಲಂಡನ್: ಸಾರ್ವಜನಿಕ ಕಚೇರಿಯಲ್ಲಿ ದುಷ್ಕೃತ್ಯ ನಡೆಸಿದ ಶಂಕೆಯ ಮೇಲೆ ಬ್ರಿಟನ್‌ನ ಆಂಡ್ರ್ಯೂ ಮೌಂಟ್‌ಬ್ಯಾಟನ್–ವಿಂಡ್ಸರ್ ಅವರನ್ನು ಬಂಧಿಸಲಾಗಿದೆ ಎಂದು ಬಿಬಿಸಿ ವರದಿ ಮಾಡಿದೆ. ಬಂಧನದ ಕುರಿತ ಪೊಲೀಸ್ ಹೇಳಿಕೆಯಲ್ಲಿ, ತನಿಖೆಯ ಭಾಗವಾಗಿ, ನಾವು ಇಂದು (19/2) ಸಾರ್ವಜನಿಕ ಕಚೇರಿಯಲ್ಲಿ ದುಷ್ಕೃತ್ಯ ನಡೆಸಿದ ಶಂಕೆಯ ಮೇಲೆ ನಾರ್ಫೋಕ್‌ನಿಂದ ಅರವತ್ತರ ಹರೆಯದ ವ್ಯಕ್ತಿಯನ್ನು ಬಂಧಿಸಿದ್ದೇವೆ ಮತ್ತು ಬರ್ಕ್‌ಷೈರ್ ಮತ್ತು ನಾರ್ಫೋಕ್‌ನಲ್ಲಿರುವ ವಿಳಾಸಗಳಲ್ಲಿ ಶೋಧ ನಡೆಸುತ್ತಿದ್ದೇವೆ. ಈ ಸಮಯದಲ್ಲಿ ಆ ವ್ಯಕ್ತಿ ಪೊಲೀಸ್ ಕಸ್ಟಡಿಯಲ್ಲಿದ್ದಾರೆ. ರಾಷ್ಟ್ರೀಯ ಮಾರ್ಗದರ್ಶನದ ಪ್ರಕಾರ ನಾವು ಬಂಧಿತ ವ್ಯಕ್ತಿಯ ಹೆಸರನ್ನು ಹೇಳುವುದಿಲ್ಲ. ಈ ಪ್ರಕರಣವು ಈಗ ಸಕ್ರಿಯವಾಗಿದೆ ಎಂಬುದನ್ನು ದಯವಿಟ್ಟು ನೆನಪಿಡಿ, ಆದ್ದರಿಂದ ನ್ಯಾಯಾಲಯದ ತಿರಸ್ಕಾರಕ್ಕೆ ಒಳಗಾಗುವುದನ್ನು ತಪ್ಪಿಸಲು ಯಾವುದೇ ಪ್ರಕಟಣೆಯೊಂದಿಗೆ ಜಾಗರೂಕರಾಗಿರಬೇಕು ಎಂದು ಹೇಳಲಾಗಿದೆ.

ಇತ್ತೀಚೆಗೆ ಬಿಡುಗಡೆಯಾದ ಎಪ್ಸ್ಟೀನ್ ಫೈಲ್‌ಗಳ ಬ್ಯಾಚ್‌ನ ಇಮೇಲ್‌ಗಳು ಮಾಜಿ ರಾಜಕುಮಾರ ಸಿಂಗಾಪುರ, ಹಾಂಗ್ ಕಾಂಗ್ ಮತ್ತು ವಿಯೆಟ್ನಾಂಗೆ ಭೇಟಿ ನೀಡಿದ ವರದಿಗಳು ಮತ್ತು ಹೂಡಿಕೆ ಅವಕಾಶಗಳ ಗೌಪ್ಯ ವಿವರಗಳನ್ನು ರವಾನಿಸುವುದನ್ನು ತೋರಿಸುತ್ತವೆ.


ಮರು ಮದುವೆಯಾದರೂ ಬಿಡಲಿಲ್ಲ, ಮಾಜಿ ಪತ್ನಿಯ ಇರಿದು ಕೊಂದ ಟೆಕ್ಕಿ



ಹೈದರಾಬಾದ್: ಟೆಕ್ಕಿಯೊಬ್ಬ ಮಾಜಿ ಪತ್ನಿಯ ಮನೆಗೆ ನುಗ್ಗಿ ಆಕೆಯನ್ನು ಇರಿದು ಕೊಂದಿರುವ ಘಟನೆ ಹೈದರಾಬಾದಿನಲ್ಲಿ ನಡೆದಿದೆ. ಅವರಿಬ್ಬರು ಸತಿ ಪತಿಗಳಾಗಿದ್ದಾಗ ಪತಿ ಮೇಲೆ ಆಕೆ ಕೌಟುಂಬಿಕ ಹಿಂಸಾಚಾರದ ದೂರು ದಾಖಲಿಸಿದ್ದಳು. ಆತ ಕೆನಡಾದಲ್ಲಿ ಐಟಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಈ ದೂರಿನಿಂದಾಗಿ ಆತ ಕೆನಡಾಗೆ ಹಿಂದಿರುಗಲು ಸಾಧ್ಯವಾಗಿಲ್ಲ, ಅದಕ್ಕೆ ಹತಾಶಗೊಂಡ ವ್ಯಕ್ತಿ ಮಾಜಿ ಪತ್ನಿಯ ಮನೆಗೆ ನುಗ್ಗಿ ಆಕೆಯ ತಲೆಗೆ ಚಾಕುವಿನಿಂದ ಪದೇ ಪದೇ ಇರಿದು ಹತ್ಯೆ ಮಾಡಿದ್ದಾನೆ. ತನ್ನ ತಾಯಿಯ ಸಾವಿಗೂ ಮಾಜಿ ಪತ್ನಿಯೇ ಕಾರಣ ಎಂದು ಆರೋಪಿಸಿದ್ದಾನೆ.

ಮಹಿಳೆಯ ಎರಡನೇ ಪತಿ ತನ್ನ ದೂರಿನಲ್ಲಿ ಆಕೆ 3 ತಿಂಗಳ ಗರ್ಭಿಣಿಯಾಗಿದ್ದಳು ಎಂದು ಹೇಳಿದ್ದಾರೆ. ಪೊಲೀಸರು ಇದನ್ನು ಇಲ್ಲಿಯವರೆಗೆ ದೃಢಪಡಿಸಲಾಗಿಲ್ಲ ಮತ್ತು ಮರಣೋತ್ತರ ಪರೀಕ್ಷೆಯ ವರದಿಗಾಗಿ ಕಾಯುತ್ತಿದ್ದೇವೆ ಎಂದು ಹೇಳಿದ್ದಾರೆ. ಆ ವ್ಯಕ್ತಿ 2022ರಲ್ಲಿ ಮಹಿಳೆಯನ್ನು ವಿವಾಹವಾಗಿದ್ದ. ಮದುವೆ ಭಾರತದಲ್ಲಿ ನಡೆಯಿತು. ಆ ವ್ಯಕ್ತಿ ನಂತರ ಕೆನಡಾಕ್ಕೆ ತೆರಳಿದ್ದರು, ಅಲ್ಲಿಗೆ ಪತ್ನಿ ಕೂಡ ಕರೆದುಕೊಂಡು ಹೋಗಿದ್ದ. ಇಬ್ಬರ ನಡುವೆ ಭಿನ್ನಾಭಿಪ್ರಾಯಗಳು ಶುರುವಾಗಿದ್ದವು ಈ ಕಾರಣದಿಂದ ಆಕೆ ಭಾರತಕ್ಕೆ ವಾಪಸಾಗಿದ್ದಳು, ಬಳಿಕ ಮಹಾರಾಷ್ಟ್ರದಲ್ಲಿ ಕೌಟುಂಬಿಕ ದೌರ್ಜನ್ಯ ಪ್ರಕರಣವನ್ನು ಆಕೆ ದಾಖಲಿಸಿದ್ದಳು. ದಂಪತಿ 2024ರಲ್ಲಿ ವಿಚ್ಛೇದನ ಪಡೆದಿದ್ದರು.


ಮಗನ ಸಾವಿನ ನೋವಿನಲ್ಲಿ 6 ಕೋಟಿಯ ಕಾರನ್ನ ಸಮಾಧಿ ಮಾಡಿದ ತಂದೆ



ಮಾಸ್ಕೋ: ಪುತ್ರನ ಸಾವಿನ ಶೋಕದಲ್ಲಿದ್ದ ತಂದೆ ಆತನಿಗೆ ಬರ್ತ್‌ಡೇ ಗಿಫ್ಟ್ ಆಗಿ ನೀಡಿದ್ದ 6 ಕೋಟಿ ರೂ. ಮೌಲ್ಯದ ಬಿಎಂಡಬ್ಲ್ಯೂ ಕಾರನ್ನು ಸಮಾಧಿ ಮಾಡಿರುವ ಘಟನೆ ಮಾಸ್ಕೋದಲ್ಲಿ ನಡೆದಿದೆ. ತಂದೆ ತನ್ನ ಮಗನಿಗೆ ಬರ್ತ್‌ಡೇ ಗಿಫ್ಟ್ ಆಗಿ ಬಿಎಂಡಬ್ಲ್ಯೂ ಕಾರು ನೀಡಿದ್ದರು. ಆದರೆ, ಕೆಲವೇ ದಿನಗಳ ನಂತರ ಮಗ ಮೃತಪಟ್ಟಿದ್ದಾನೆ. ಆ ಕಾರು ನೋಡಿದಾಗಲೆಲ್ಲ ಪುತ್ರನ ನೆನೆದು ತಂದೆ ಶೋಕಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಕಾರನ್ನು ಸಮಾಧಿ ಮಾಡಿದ್ದಾರೆ. ವ್ಯಕ್ತಿಯ ನಡೆಗೆ ಅನೇಕ ನೆಟ್ಟಿಗರು ವಿರೋಧ ವ್ಯಕ್ತ ಪಡಿಸಿದ್ದಾರೆ. ಆ ಕಾರನ್ನು ಮಾರಿ ಬಂದ ಹಣವನ್ನು ಯಾವುದಾದರು ದತ್ತಿ ಸಂಸ್ಥೆಗಳಿಗೆ ನೀಡಬಹುದಿತ್ತು? ಎಂದು ಕೆಲವರು ಹೇಳಿದ್ದಾರೆ. ಕಾರನ್ನು ಮಾರಾಟ ಮಾಡಿ ಆ ಹಣವನ್ನು ನಿರ್ಗತಿಕರಿಗೆ ದಾನ ಮಾಡಬಹುದಿತ್ತು ಎಂದು ಇನ್ನೂ ಕೆಲವರು ಕಾಮೆಂಟ್ ಮಾಡಿದ್ದಾರೆ.

ಈ ನಿರ್ಧಾರ ಸರಿಯೋ ತಪ್ಪೋ ಎಂಬುದನ್ನು ಚರ್ಚಿಸಬಹುದು? ಆದರೆ, ದುಃಖ ಆ ತಂದೆಗೆ ಮಾತ್ರ ಗೊತ್ತು. ಅದನ್ನು ಅಳೆಯಲು ಅಥವಾ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ? ಎಂದು ಇನ್ನೂ ಕೆಲವರು ವ್ಯಕ್ತಿಯ ನಡೆ ತಪ್ಪಲ್ಲ ಎಂದು ಕಾಮೆಂಟ್ ಮಾಡಿದ್ದಾರೆ.

ನವಜಾತ ಶಿಶುವಿನೊಂದಿಗೆ PUC ಪರೀಕ್ಷೆ ಬರೆದ ತಾಯಿ



ನಾಂದೇಡ್: ಮಹಿಳೆಯರಿಗೆ ಶಿಕ್ಷಣ ಮೊದಲ ಆದ್ಯತೆಯಾಗಬೇಕು ಎಂದು ನವಜಾತ ಶಿಶುವಿನೊಂದಿಗೆ ಬಂದು ದ್ವಿತೀಯ ಪಿಯುಸಿ (12ನೇ ತರಗತಿ) ಪರೀಕ್ಷೆ ಬರೆದ ತಾಯಿಯೊಬ್ಬರು ಹೇಳಿದ್ದಾರೆ. 21 ವರ್ಷದ ಶೀತಲ್ ಚಂದ್ರಕಾಂತ್ ಚಿಟ್ಟೆ ಪರೀಕ್ಷೆ ಬರೆದ ತಾಯಿ. ಶೀತಲ್ ಅವರಿಗಿರುವ ಶಿಕ್ಷಣದ ಮೇಲಿನ ಆಸಕ್ತಿ ಮತ್ತು ದೃಢಸಂಕಲ್ಪಕ್ಕೆ ಸಾಮಾಜಿಕ ಮಾಧ್ಯಮಗಳಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.

ಶೀತಲ್ ಅವರು ಫೆ.10ರಂದು ಜನಿಸಿದ ಶಿಶುವಿನೊಂದಿಗೆ ಬಂದು ಇಂಗ್ಲಿಷ್ ಪರೀಕ್ಷೆ ಬರೆದರು. ಈ ವೇಳೆ ಮಗುವನ್ನು ನೋಡಿಕೊಳ್ಳಲು ಶೀತಲ್ ಸಹೋದರಿ ನೆರವಾದರು. ಬಾಣಂತಿಯೊಬ್ಬರು ಪರೀಕ್ಷೆಗೆ ಹಾಜರಾಗುತ್ತಿರುವುದನ್ನು ತಿಳಿದು ಕಾಲೇಜಿನ ಆಡಳಿತ ಮಂಡಳಿ ವಿಶೇಷ ಸೌಕರ್ಯ ಕಲ್ಪಿಸಿದ್ದು ವಿಶೇಷವಾಗಿತ್ತು. ಶೀತಲ್ ಅವರಿಗಿರುವ ಶಿಕ್ಷಣದ ಮೇಲಿನ ಆಸಕ್ತಿಯನ್ನು ಮೆಚ್ಚಿದ ಪೀಪಲ್ಸ್ ಕಾಲೇಜಿನ ಆಡಳಿತ ಮಂಡಳಿ ತಾಯಿ ಮಿತ್ರ ಕೊಠಡಿ ಎಂಬ ವಿಶೇಷ ಕೊಠಡಿ ವ್ಯವಸ್ಥೆ ಮಾಡಿತ್ತು. ಮಗುವಿಗಾಗಿ ತೊಟ್ಟಿಲನ್ನೂ ಒದಗಿಸಿತು. ಇದರಿಂದ ಶೀತಲ್, ಮಗು ವಿಶ್ರಾಂತಿ ಪಡೆಯುತ್ತಿರುವ ವೇಳೆ ಸುಗಮವಾಗಿ ಪರೀಕ್ಷೆ ಬರೆಯಲು ಸಾಧ್ಯವಾಯಿತು. ಪರೀಕ್ಷೆ ವೇಳೆ ವಿದ್ಯಾರ್ಥಿನಿಗೆ ಪ್ರತ್ಯೇಕ ಸೌಲಭ್ಯ ಒದಗಿಸಿದ ಕಾಲೇಜಿನ ಕ್ರಮವನ್ನು ಶಿಕ್ಷಣಾಧಿಕಾರಿ ಮಾಧವ್ ಸಲ್ಗಾರ್ ಪ್ರಶಂಸಿಸಿದ್ದಾರೆ. ಮುಂದಿನ ದಿನಗಳಲ್ಲಿ ಇಂತಹ ವಿದ್ಯಾರ್ಥಿನಿಯರಿಗೆ ಉತ್ತೇಜನ ನೀಡುವ ಉದ್ದೇಶದಿಂದ ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಆನ್‌ಲೈನ್ ಔಷಧ ವ್ಯಾಪಾರಕ್ಕೆ ಕಡಿವಾಣ ಹಾಕದಿದ್ದರೆ ಮಾದಕ ವಸ್ತುಗಳ ಸಾಗಾಣಿಕೆ ತಡೆಯಲಾಗದು

ಕರ್ನಾಟಕ ಔಷಧ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಆರ್.ರಘುನಾಥ್ ರೆಡ್ಡಿ ಆತಂಕ



ಔಷಧ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಆರ್.ರಘುನಾಥ ರೆಡ್ಡಿ ಫಾರ್ಮಾ ಭವನ ಉದ್ಘಾಟಿಸಿದರು.

ಮಡಿಕೇರಿ, ಫೆ19– ಆನ್‌ಲೈನ್‌ನಲ್ಲಿ ಔಷಧ ವ್ಯಾಪಾರಕ್ಕೆ ಕಡಿವಾಣ ಹಾಕದೇ ಹೋದರೆ ಮಾದಕ ವಸ್ತುಗಳ ಸಾಗಾಟ ತಡೆ ಸಾಧ್ಯವಾಗದು ಎಂದು ಆತಂಕ ವ್ಯಕ್ತಪಡಿಸಿದ ಕರ್ನಾಟಕ ಔಷಧ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಆರ್.ರಘುನಾಥ ರೆಡ್ಡಿ ಆನ್‌ಲೈನ ಮೂಲಕ ಮಾದಕ ವಸ್ತುಗಳ ಸಾಗಾಣಿಕೆ ಊಹೆಗೂ ಮೀರಿ ಬೆಳೆಯುವ ಅಪಾಯವಿದೆ ಎಂದು ಎಚ್ಚರಿಸಿದ್ದಾರೆ.

ನಗರದಲ್ಲಿ ಕೊಡಗು ಔಷಧ ವ್ಯಾಪಾರಸ್ಥರ ಸಂಘದ ವತಿಯಿಂದ ನೂತನವಾಗಿ ನಿರ್ಮಿಸಲಾದ ಸಂಘದ ಕಛೇರಿ, ಸಭಾಂಗಣವನ್ನು ಹೊಂದಿರುವ ಎರಡು ಅಂತಸ್ತಿನ ಫಾರ್ಮಾ ಭವನ ಉದ್ಘಾಟಿಸಿದ ಬಳಿಕ ಅವರು ಮಾತನಾಡಿದರು.

ಸಂಘದ ಅಧೀನದಲ್ಲಿರುವ ಔಷಧ ವ್ಯಾಪಾರಿಗಳು ಯಾವುದೇ ಕಾರಣಕ್ಕೂ ಮಾದಕ ಪದಾರ್ಥಗಳು, ಮಾದಕ ದ್ರವ್ಯಗಳ ಮಾರಾಟಕ್ಕೆ ಅವಕಾಶ ನೀಡಬಾರದು ಎಂದೂ ಈಗಾಗಲೇ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ ಎಂದೂ ರಘುನಾಥ ರೆಡ್ಡಿ ಹೇಳಿದರು. ಸರ್ಕಾರಗಳು ವಿವಿಧ ನಿಯಮಗಳ ಮೂಲಕ ಔಷಧ ವ್ಯಾಪಾರಿಗಳಿಗೆ ಸಮಸ್ಯೆ ಉಂಟು ಮಾಡುತ್ತಿದೆ ಎಂದೂ ಅಸಮಾಧಾನ ವ್ಯಕ್ತಪಡಿಸಿದರು.

ಕೊಡಗು ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದಿಂದ ಮುಂದಿನ ದಿನಗಳಲ್ಲಿ ಸಂಘದ ಸದಸ್ಯರ ಆರ್ಥಿಕತೆಗೆ ನೆರವಾಗುವ ನಿಟ್ಟಿನಲ್ಲಿ ಬ್ಯಾಂಕ್ ಪ್ರಾರಂಭಿಸುವಂತೆ ಅವರು ಸಲಹೆ ನೀಡಿದರು. ಫಾರ್ಮಾ ಭವನ ಕೊಡಗಿನ ಔಷಧ ವ್ಯಾಪಾರಸ್ಥರ ಒಗ್ಗಟ್ಟಿನ ಪ್ರತೀಕದ ಭವನವಾಗಲಿ ಎಂದೂ ಅವರು ಹಾರೈಸಿದರು.

ಕೊಡಗು ಜಿಲ್ಲೆಯ ಸಹಾಯಕ ಔಷಧ ನಿಯಂತ್ರಕ ಅಜಯ್ ರಾಜ್ ಮಾತನಾಡಿ, ಭೂಮಿಯಲ್ಲಿ ಜನಿಸಿದವರೆಲ್ಲರೂ ಪ್ರವಾಸಿಗರಂತೆ ಆಗಿದ್ದೇವೆ. ಆ ದೇವರು ಪ್ರವಾಸಿ ಮಾರ್ಗದರ್ಶಕನಂತೆ ನಮಗೆ ದಾರಿ ದೀಪವಾಗಿದ್ದಾನೆ. ಹೀಗಿರುವಾಗ ಜೀವಿಸುವ ಅಲ್ಪಾವಧಿಯಲ್ಲಿ ಸ್ವಾರ್ಥಿಗಳಾಗದೇ ಪರರ ಹಿತ ಚಿಂತನೆಯನ್ನೂ ಮಾಡುವಂತೆ ಸಲಹೆ ನೀಡಿದರು.

ಸಂಘದ ರಾಜ್ಯ ಕಾನೂನು ಸಲಹೆಗಾರ ಕೆ.ಹರೀಶ್ ಮಾತನಾಡಿ, ಸರ್ಕಾರಗಳು ಒಂದೊಂದು ನಿಯಮಗಳ ಮೂಲಕ ಔಷಧ ವ್ಯಾಪಾರಿಗಳ ನೆಮ್ಮದಿ ಕಸಿಯುತ್ತಿವೆ. ಅವೈಜ್ಞಾನಿಕವಾದ ಕಾನೂನುಗಳು ವ್ಯಾಪಾರಸ್ಥರನ್ನು ಅತಂತ್ರಗೊಳಿಸುತ್ತಿವೆ. ಹೀಗಿದ್ದರೂ,

> ಇತ್ತೀಚಿನ ದಿನಗಳಲ್ಲಿ ಮಾದಕ ದ್ರವ್ಯ ಸಾಗಾಣಿಕೆ ದೇಶವ್ಯಾಪಿ ವಿಸ್ತಾರಗೊಳ್ಳುತ್ತಿದೆ. ಆನ್‌ಲೈನ್‌ನಲ್ಲಿ ಔಷಧ ವಹಿವಾಟು ನೆಪದಲ್ಲಿ ಮಾದಕ ವಸ್ತುಗಳ ಸಾಗಾಣಿಕೆಯೂ ಹೆಚ್ಚಾಗುತ್ತಿದೆ. ಇಂತಹ ಸಂದರ್ಭ ಅನಗತ್ಯವಾಗಿ ಔಷಧ ವ್ಯಾಪಾರಿಗಳನ್ನು ತನಿಖಾ ಸಂಸ್ಥೆಗಳು ವಿಚಾರಣೆ ಒಳಪಡಿಸುತ್ತಿವೆ. ಆನ್‌ಲೈನ್ ಮೂಲಕ ಮಾದಕ ವಸ್ತುಗಳನ್ನು ಸಲೀಸಾಗಿ ಸಾಗಾಣಿಕೆ ಮಾಡುವ ದಂಧೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಆನ್ ಲೈನ್ ಔಷಧ ವಹಿವಾಟಿಗೆ ತಡೆಯೊಡ್ಡುವ ನಿಟ್ಟಿನಲ್ಲಿ ಸರ್ಕಾರ ಮುಂದಾಗಬೇಕು. – ಆರ್.ರಘುನಾಥ ರೆಡ್ಡಿ

ಇಂತಹ ಕಾನೂನುಗಳ ವಿರುದ್ದ ರಾಜ್ಯ ಸಂಘ ನಿರಂತರ ಹೋರಾಟ ಮಾಡುತ್ತಾ ಔಷಧ ವ್ಯಾಪಾರಿಗಳ ಹಿತ ಚಿಂತನೆ ಕಾಯಲು ಬದ್ದವಾಗಿದೆ ಎಂದು ಹೇಳಿದರು.

ಕೊಡಗು ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ಅಧ್ಯಕ್ಷ ಅಂಬೇಕಲ್ ಜೀವನ್ ಕುಶಾಲಪ್ಪ ಮಾತನಾಡಿ, ಔಷಧ ವ್ಯಾಪಾರಿಗಳು ಸಮಾಜದ ಆರೋಗ್ಯ ರಕ್ಷಕರಂತೆ ಇದ್ದಾರೆ. ವೈದ್ಯರು ಸೂಚಿಸುವ ಔಷಧವನ್ನು ರೋಗಿಗೆ ಸುರಕ್ಷಿತವಾಗಿ ತಲುಪಿಸುವ ಸೇತುವೆಯಂತೆ ಔಷಧ ವ್ಯಾಪಾರಸ್ಥರಿದ್ದಾರೆ. ಔಷಧ ವ್ಯಾಪಾರಸ್ಥರದ್ದು ಖಂಡಿತಾ ಕೇವಲ ವಹಿವಾಟಲ್ಲ ಎಂದು ಹೇಳಿದರು. ಹೊಸ ಫಾರ್ಮಾ ಭವನ ಕೊಡಗಿನ ಔಷಧ ವ್ಯಾಪಾರಿಗಳ ಪಾಲಿಗೆ ನವನವೀನ ಚಿಂತನೆಯ ಸ್ವರೂಪವಾಗಿದೆ. ಇಲ್ಲಿ ಕೈಗೊಳ್ಳುವ ನಿರ್ಧಾರಗಳು ವ್ಯಾಪಾರಸ್ಥರ ರಕ್ಷಣೆಗೋಸ್ಕರ ಇರಲಿದೆ. ಫಾರ್ಮಾ ಭವನ ಜಿಲ್ಲೆಯ ಔಷಧ ವ್ಯಾಪಾರಸ್ಥರ ಒಗ್ಗಟ್ಟಿನ ಮನೆಯಂತಿರಲಿದೆ ಎಂದರು.

ಫಾರ್ಮಾ ಭವನದ ಉದ್ಘಾಟನೆ ಸಂದರ್ಭದಲ್ಲಿ ಹಿರಿಯ ಔಷಧ ವ್ಯಾಪಾರಸ್ಥರನ್ನು ಸನ್ಮಾನಿಸಿ ಗೌರವಿಸಲಾಯಿತು. ಕರ್ನಾಟಕ ಔಷಧ ವ್ಯಾಪಾರಿಗಳ ಸಂಘದ ಖಜಾಂಜಿ ಬಿ.ಉಮೇಶ್, ಕೊಡಗು ಜಿಲ್ಲಾ ಔಷಧವ್ಯಾಪಾರಿಗಳ ಸಂಘದ ಗೌರವ ಕಾರ್ಯದರ್ಶಿ ಡಿ.ಐ. ಪುರುಷೋತ್ತಮ್, ಉಪಾಧ್ಯಕ್ಷರುಗಳಾದ ಅಂಬೆಕಲ್ ವಿನೋದ್, ಮೇರ್ವಿನ್ ಫರ್ನಾಂಡೀಸ್, ಜಂಟಿ ಕಾರ್ಯದರ್ಶಿ ಕೆ.ವಸಂತ್ ಕುಮಾರ್, ಖಜಾಂಚಿ ಪ್ರಸಾದ್ ಗೌಡ, ನಿರ್ದೇಶಕ ಜಗನ್ನಾಥ್, ಡಾ.ಸುಧಾಕರ್ ಶೆಟ್ಟಿ ವೇದಿಕೆಯಲ್ಲಿದ್ದರು.

ಚಲಿಸುತ್ತಿದ್ದ ಕಾರಿನ ಮೇಲೆ ಕಾಡಾನೆಗಳ ದಾಳಿ

ಕಾರಿನಲ್ಲೇ ಬಚ್ಚಿಟ್ಟುಕೊಂಡು ಜೀವ ಉಳಿಸಿಕೊಂಡ ಚಾಲಕ



ಸಿದ್ದಾಪುರ, ಫೆ.19– ಚಲಿಸುತ್ತಿದ್ದ ಕಾರಿನ ಮೇಲೆ ದಾಳಿ ನಡೆಸಿದ ಕಾಡಾನೆಗಳ ಹಿಂಡು ಕಾರನ್ನು ಜಖಂಗೊಳಿಸಿದ್ದು, ಕಾರಿನ ಚಾಲಕ ಕಾರಿನಲ್ಲೇ ಬಚ್ಚಿಟ್ಟುಕೊಂಡು ಜೀವ ಉಳಿಸಿಕೊಂಡ ಘಟನೆ ವಿರಾಜಪೇಟೆ ತಾಲೂಕಿನ ಸಿದ್ದಾಪುರ ಸಮೀಪದ ಘಟ್ಟದಳ ಬಳಿ ನಡೆದಿದೆ.

ಕಾಡಾನೆ ದಾಳಿಯಿಂದ ಕಾರು ಚಾಲಕ ಪ್ರಜೀತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ.

ಸಿದ್ದಾಪುರ ಸಮೀಪದ ಪುಲಿಯೇರಿ ಗ್ರಾಮದ ಪ್ರಜಿತ್ ಕೆಲಸದ ನಿಮಿತ್ತ ಮೈಸೂರಿಗೆ ತೆರಳಿ ರಾತ್ರಿ ಹಿಂತಿರುಗುತ್ತಿದ್ದಾಗ ಸಿದ್ದಾ ಪುರ ಕಡೆ ಬರುತ್ತಿದ್ದ ಸಂದರ್ಭ ಸಿದ್ದಾಪುರ–ಮೈಸೂರು ರಸ್ತೆ ಟೀಕ್ ವುಡ್ ಕಾಫಿ ತೋಟದ ಸಮೀಪದಲ್ಲಿ ಮೊದಲಿಗೆ ರಸ್ತೆ ಮೂಲಕ ಕಾಡಾನೆಯೊಂದು ಬರುತ್ತಿರು ವುದನ್ನು ಗಮನಿಸಿ ಕಾರನ್ನು ನಿಧಾನವಾಗಿ ಚಲಾಯಿಸಿದ್ದಾರೆ. ಈ ಸಂದರ್ಭ ಏಕಾಏಕಿ 4 ಕಾಡಾನೆಗಳಿದ್ದ ಗುಂಪು ಕಾರಿನ ಮೇಲೆ ದಾಳಿ ನಡೆಸಿವೆ.

ಇದರಿಂದ ಭಯ ಭೀತರಾಗಿ ಕಾರು ಚಾಲನೆ ಮಾಡುತ್ತಿದ್ದ ಪ್ರಜಿತ್ ಕಾರಿನಲ್ಲೇ ಬಚ್ಚಿಟ್ಟುಕೊಂಡು ಜೀವ ಉಳಿಸಿಕೊಂಡಿದ್ದಾರೆ. ಕಾಡಾನೆಗಳು ದಂತದಿಂದ ಕಾರಿನ ಮೇಲೆ ದಾಳಿ ನಡೆಸಿದ ಪರಿಣಾಮ ಕಾರಿಗೆ ಹಾನಿಯಾಗಿದೆ. ಕಾರಿನ ಮೇಲೆ ದಾಳಿ ನಡೆಸಿದ ಶಬ್ದ ಕೇಳಿ ರಾತ್ರಿ ಸಮಯದಲ್ಲಿ ಟೀಕ್‌ವುಡ್ ಕಾಫಿ ತೋಟದ ವ್ಯವಸ್ಥಾಪಕ ಅನಿಲ್ ಅವರು ಕೂಡಲೇ ಬಂದು ನೋಡಿದಾಗ ಕಾಡಾನೆಗಳು ಕಾರಿನ ಮೇಲೆ ದಾಳಿ ನಡೆಸಿರು ವುದನ್ನು ಕಂಡಿದ್ದಾರೆ. ನಂತರ ಕಾಡಾನೆಗಳು ಜಾಗ ಖಾಲಿ ಮಾಡಿವೆ. ಬಳಿಕ ಆತಂಕಕ್ಕೆ ಸಿಲುಕಿದ್ದ ಚಾಲಕನನ್ನು ವಿಚಾರಿಸಿ ಧೈರ್ಯ ತುಂಬಿದ್ದಾರೆ.

ಕಾಡಾನೆಗಳು ಕಾಫಿ ತೋಟಕ್ಕೆ ತೆರಳಿದ ನಂತರ ಕಾರು ಚಾಲಕ ಪ್ರಜಿತ್ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ವಲಯ ಅರಣ್ಯ ಅಧಿಕಾರಿ ಶಿವರಾಮ್ ಹಾಗೂ ಸಿದ್ದಾಪುರ ಠಾಣಾಧಿಕಾರಿ ಮಂಜುನಾಥ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಾಡಾನೆ ದಾಳಿಯಿಂದ ಕಾರಿಗೆ ಅಂದಾಜು 1.50 ಲಕ್ಷ ರೂ. ನಷ್ಟ ಉಂಟಾಗಿದ್ದು ಪರಿಹಾರ ನೀಡಬೇಕೆಂದು ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.

ಗ್ರಾಮ ವ್ಯಾಪ್ತಿಯ ಕಾಫಿ ತೋಟಗಳಲ್ಲಿ ಕಾಡಾನೆ ಹಾವಳಿ ಮಿತಿಮೀರಿದ್ದು ವಾಹನ ಸವಾರರು ಸಾರ್ವಜನಿಕರು ನಡೆದಾಡಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕಾಡಾನೆ ಹಾವಳಿಯನ್ನು ತಡೆಗಟ್ಟಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಟ್ರಾಕ್ಟರ್ ಹಳ್ಳಕ್ಕೆ ಬಿದ್ದು ಕಾರ್ಮಿಕ ಸಾವು



ಸಿದ್ದಾಪುರ, ಫೆ.19– ಚಾಲಕನಿಲ್ಲದ ವೇಳೆ ಕಾರ್ಮಿಕ ಟ್ರಾಕ್ಟರ್ ಚಲಾಯಿಸಿದ ಪರಿಣಾಮ ನಿಯಂತ್ರಣ ಕಳೆದುಕೊಂಡ ಟ್ರಾಕ್ಟರ್ ತಪ್ಪಿ ಹಳ್ಳಕ್ಕೆ ಬಿದ್ದ ಪರಿಣಾಮ ಕಾರ್ಮಿಕ ಸ್ಥಳದಲ್ಲೆ ಮೃತಪಟ್ಟ ಘಟನೆ ಸಿದ್ದಾಪುರ ಸಮೀಪದ ಹಿಲ್ ಕಿಲ್ ಎಸ್ಟೇಟ್‌ನಲ್ಲಿ ಸಂಭವಿಸಿದೆ.

ಬಾಗಲಕೋಟೆಯ ನಿವಾಸಿ ಪ್ರವೀಣ್(35) ಮೃತ ದುರ್ದೈವಿ.

ಎಸ್ಟೇಟ್‌ನಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಸಾಮಗ್ರಿಗಳನ್ನು ಟ್ರಾಕ್ಟರ್‌ನಲ್ಲಿ ಸಾಗಿಸಲು ಚಾಲಕ ಇಲ್ಲದ ಸಂದರ್ಭದಲ್ಲಿ ವಾಹನ ಚಲಾಯಿಸುವ ಆಸೆಯಿಂದ ಪ್ರವೀಣ್ ಟ್ರಾಕ್ಟರ್ ಖುದ್ದಾಗಿ ಚಲಾಯಿಸಿದ್ದಾನೆ. ಈ ವೇಳೆ ಟ್ರಾಕ್ಟರ್ ಹಳ್ಳಕ್ಕೆ ಬಿದ್ದಿದ್ದು ಈ ದುರ್ಘಟನೆಗೆ ಕಾರಣವಾಗಿದೆ. ಘಟನಾ ಸ್ಥಳಕ್ಕೆ ಸಿದ್ದಾಪುರ ಪೊಲೀಸ್ ಠಾಣಾಧಿಕಾರಿ ಮಂಜುನಾಥ್ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಮಹಜರು ನಡೆಸಿದರು. ಸಂಬಂಧಿಕರು ಆಗಮಿಸಿದ ನಂತರ ಮರಣೋತ್ತರ ಪರೀಕ್ಷೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಮೃತದೇಹವನ್ನು ಮಡಿಕೇರಿ ಜಿಲ್ಲಾಸ್ಪತ್ರೆ ಶವಗಾರದಲ್ಲಿ ಇರಿಸಲಾಗಿದೆ.

ಮಾತೃ ಭಾಷೆ ದಿನಾಚರಣೆ ಅಂಗವಾಗಿ ನಾಳೆ ಕೊಡವ ಸತ್ಯಾಗ್ರಹ

ಮಡಿಕೇರಿ, ಫೆ.19– ವಿಶ್ವ ಸಂಸ್ಥೆಯ ಅಂತರರಾಷ್ಟ್ರೀಯ ಮಾತೃಭಾಷಾ ದಿನಾಚರಣೆ ಅಂಗವಾಗಿ ಫೆ.21ರಂದು ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ಮಡಿಕೇರಿಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಎದುರಿನಲ್ಲಿ 'ಕೊಡವ ಸತ್ಯಾಗ್ರಹ' ನಡೆಯಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಬೆಳಿಗ್ಗೆ 10.30ಕ್ಕೆ ಶಾಂತಿಯುತವಾಗಿ ಸತ್ಯಾಗ್ರಹ ನಡೆಸಿ ಪ್ರಖ್ಯಾತ ಭಾಷಾ ತಜ್ಞ ಪಂಡಿತ್ ಡಾ.ಸೀತಕಾಂತ್ ಮಹಾಪಾತ್ರ ಆಯೋಗದ ವರದಿಯ ಶಿಫಾರಸ್ಸಿನಂತೆ ಕೊಡವ ಭಾಷೆಯನ್ನು ಸಂವಿಧಾನದ 8ನೇ ಶೆಡ್ಯೂಲ್‌ಗೆ ಸೇರಿಸಬೇಕು ಎಂಬ ಬೇಡಿಕೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಮಂಡಿಸಲಾಗುವುದು ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಈಗಾಗಲೇ ಪರಿಗಣಿಸಲ್ಪಟ್ಟ ಕೊಂಕಣಿ ಮತ್ತು ಪರಿಗಣನೆಯ ಹಂತದಲ್ಲಿರುವ ತುಳು ಪ್ರಸ್ತಾವನೆಯಂತೆಯೇ, ಸಂವಿಧಾನದ 345ನೇ ವಿಧಿಯಡಿ ಕೊಡವ ಭಾಷೆಯನ್ನು ರಾಜ್ಯದ ಅಧಿಕೃತ ಭಾಷೆಯಾಗಿ ಗುರುತಿಸಬೇಕು. ಕೊಡವರ ಕುರಿತಾದ ನೈಜ ಚರಿತ್ರೆಯನ್ನು ತಿರುಚಿ ಸುಳ್ಳು ಚರಿತ್ರೆಯನ್ನು ಸೃಷ್ಟಿಸಿದವರ ವಿರುದ್ಧ ಕ್ರಮ ಜರುಗಿಸಬೇಕು. ಕೊಡವ ಜನಾಂಗೀಯ ಗುರುತು, ಕೊಡವ ಜಾನಪದ ಹಿನ್ನೆಲೆ, ಭಾಷಾಲೋಕ ಹಾಗೂ ಪ್ರಕೃತಿ ಆರಾಧಕ ಕೊಡವರ ಸ್ವಾಭಿಮಾನ ಮತ್ತು ಅಸ್ತಿತ್ವವು ಬರುವ 2027ರ ರಾಷ್ಟ್ರೀಯ ಜನಗಣತಿಯಲ್ಲಿ ಪ್ರತ್ಯೇಕ 'ಕೋಡ್ ಮತ್ತು ಕಲಂ' ಮೂಲಕ ಸಾಂವಿಧಾನಿಕವಾಗಿ ದಾಖಲಾದಾಗ ಮಾತ್ರ ನಿರ್ಧರಿಸಲ್ಪಡುವುದರಿಂದ 2027ರ ರಾಷ್ಟ್ರೀಯ ಜನಗಣತಿಯಲ್ಲಿ ಕೊಡವರಿಗಾಗಿ' ಪ್ರತ್ಯೇಕ ಕೋಡ್ ಮತ್ತು ಕಾಲಂ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಕುಸಿದು ಬಿದ್ದು ಕಾರ್ಮಿಕ ಸಾವು

ವಿರಾಜಪೇಟೆ: ಕಾಫಿ ತೋಟವೊಂದರಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭ ಕುಸಿದು ಬಿದ್ದು ಕಾರ್ಮಿಕನೋರ್ವ ಮೃತಪಟ್ಟ ಘಟನೆ ಸಮೀಪದ ಚೋಕಂಡಳ್ಳಿ ನಲ್ವತೊಕ್ಲು ಗ್ರಾಮದಲ್ಲಿ ಗುರುವಾರ ನಡೆದಿದೆ.

ಪೊನ್ನಂಪೇಟೆ ತಾಲೂಕಿನ ಜೋಡುಪಟ್ಟಿ ನಿವಾಸಿ ಜೇನುಕುರುಬರ ಮಧು ಎಂಬುವವರ ಪುತ್ರ ಜೆ.ಎಂ.ರವಿ (32) ಮೃತ ವ್ಯಕ್ತಿ. ಸಮೀಪದ ಚೋಕಂಡಳ್ಳಿ ನಲ್ವತೊಕ್ಲು ಗ್ರಾಮದ ಕಾಫಿ ತೋಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂದರ್ಭ ಕುಸಿದು ಬಿದ್ದು ತೀವ್ರ ಅಸ್ವಸ್ಥಗೊಂಡ ರವಿಯನ್ನು ವಿರಾಜಪೇಟೆಯ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದರೂ, ಅದಾಗಲೇ ಆತ ಮೃತಪಟ್ಟಿದ್ದಾನೆ ಎಂದು ವೈದ್ಯರು ತಿಳಿಸಿದ್ದಾರೆ. ಮೃತ ರವಿ ಅವರಿಗೆ ಮೂರ್ಛೆ ರೋಗ ಇತ್ತೆಂದು ಪೊಲೀಸರು ತಿಳಿಸಿದ್ದಾರೆ.

ಮೃತನ ಪತ್ನಿ ನೀಡಿರುವ ದೂರಿನ ಮೇರೆಗೆ ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಇಂದಿನಿಂದ ರಿಂಕ್ 5 ಎಸ್ಸೈಡ್ ರಾಜ್ಯ ಮಟ್ಟದ ಹಾಕಿ ಪಂದ್ಯಾವಳಿ

ವಿರಾಜಪೇಟೆ, ಫೆ.19– ಕಾವೇರಿ ಕಾಲೇಜು ವಿರಾಜಪೇಟೆ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಕೊಡಗಿನಲ್ಲಿ ಮೊದಲ ಬಾರಿಗೆ ರಿಂಕ್ 5 ಎಸ್ಸೈಡ್ ರಾಜ್ಯ ಮಟ್ಟದ ಅಂತರ ಕಾಲೇಜು ಹಾಕಿ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ಕಾವೇರಿ ಕಾಲೇಜಿನ ಪ್ರಾಂಶುಪಾಲರಾದ ಬೆನೆಡಿಕ್ಟ್ ಆರ್.ಸಲ್ಡಾನ ಮಾಹಿತಿ ನೀಡಿದರು.

ಕಾವೇರಿ ಕಾಲೇಜಿನ ಸಭಾಂಗಣದಲ್ಲಿ ಗೋಷ್ಠಿಯಲ್ಲಿ ಮಾತನಾಡಿದ ಅವರು ಪದವಿ ಮಟ್ಟದ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದಲ್ಲಿ ಮೊದಲ ಬಾರಿಗೆ ಅಂತರ ಕಾಲೇಜು 5 ಎಸ್ಸೈಡ್ ರಿಂಕ್ ಹಾಕಿ ಪಂದ್ಯಾವಳಿಯನ್ನು ಫೆ.20 ಮತ್ತು 21 ರಂದು ಎರಡು ದಿನಗಳ ಕಾಲ ಪೊನ್ನಂಪೇಟೆ ಟರ್ಫ್ ಮೈದಾನದಲ್ಲಿ ಆಯೋಜಿಸಲಾಗಿದೆ. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ತಮ್ಮಯ್ಯ ಮಾತನಾಡಿ ಕ್ರೀಡಾಕೂಟದಲ್ಲಿ ಸುಮಾರು 20 ರಿಂದ 25 ತಂಡಗಳು ಭಾಗವಹಿಸಲಿದ್ದು ರಾಜ್ಯಮಟ್ಟದಲ್ಲಿ ಪದವಿ ವಿದ್ಯಾರ್ಥಿಗಳಿಗೆ ಇದೇ ಮೊದಲ ಬಾರಿ ರಿಂಗ್ ಹಾಕಿ ಪಂದ್ಯಾಟ ನಡೆಸಲಾಗುತ್ತಿದೆ, ಪ್ರಥಮ ದ್ವಿತೀಯ ಮತ್ತು ತೃತಿಯ ಸ್ಥಾನದಲ್ಲಿ ಗೆಲ್ಲುವ ತಂಡಗಳಿಗೆ ಆಕರ್ಷಕವಾದ ಪಾರಿತೋಷಕ ಮತ್ತು ನಗದು ಬಹುಮಾನ ನೀಡಲಾಗುತ್ತದೆ. ಶಿಸ್ತು ಬದ್ಧ ತಂಡ, ವಿವಿಧ ವೈಯುಕ್ತಿಕ ಬಹುಮಾನಗಳನ್ನು ನೀಡಲಾಗುವುದು ಎಂದು ಹೇಳಿದರು. ಗೋಷ್ಠಿಯಲ್ಲಿ ಕಾಲೇಜಿನ ವಿದ್ಯಾರ್ಥಿ ಪರಿಷತ್ತಿನ ಉಪಾಧ್ಯಕ್ಷ ನಿರೂಪ್ ನಾಣಯ್ಯ, ಕಾರ್ಯದರ್ಶಿ ನಾಚಪ್ಪ ಉಪಸ್ಥಿತರಿದ್ದರು.

ಒಳ ಮೀಸಲಾತಿಯಿಂದ ಅನ್ಯಾಯದ ಆರೋಪ

ಬಲಗೈ ಸಮುದಾಯದಿಂದ ಪ್ರತಿಭಟನೆ

ಕೊಳ್ಳೇಗಾಲ, ಫೆ19– ತಾಲೂಕು ಬಲಗೈ ಸಮುದಾಯಗಳ ಒಕ್ಕೂಟದ ವತಿಯಿಂದ ಒಳ ಮೀಸಲಾತಿಯಲ್ಲಿ ಸಮಾಜಕ್ಕೆ ಆಗುತ್ತಿರುವ ಅನ್ಯಾಯವನ್ನು ಖಂಡಿಸಿ ಪಟ್ಟಣದಲ್ಲಿ ಗುರುವಾರ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಪಟ್ಟಣದ ಎಂಜಿಎಸ್‌ವಿ ಜೂನಿಯರ್ ಮೈದಾನದಲ್ಲಿ ಜಮಾಯಿಸಿದ್ದ ನೂರಾರು ಪ್ರತಿ ಭಟನಾಕಾರರು ಸರ್ಕಾರದ ವಿರುದ್ಧ ಧಿಕ್ಕಾರ ಘೋಷಣೆ ಕೂಗಿದರು. ಒಳ ಮೀಸಲಾತಿಯಿಂದಾಗಿ ನಮ್ಮ ಸಮಾಜಕ್ಕೆ ಅನ್ಯಾಯವಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಾಗಮೋಹನ್ ದಾಸ್ ವರದಿಯಿಂದ ನಮ್ಮೆಲ್ಲರಿಗೂ ಭಾರೀ ಅನ್ಯಾಯವಾಗುತ್ತಿದೆ ಎಂದು ಸರ್ಕಾರದ ವಿರುದ್ದ ದಿಕ್ಕಾರದ ಘೋಷಣೆ ಕೂಗುತ್ತ ಹೊಸ ಬಸ್ ನಿಲ್ದಾಣದ ರಸ್ತೆ, ಡಾ.ವಿಷ್ಣು ರಸ್ತೆ, ಡಾ. ರಾಜ್ ರಸ್ತೆ ಡಾ.ಅಂಬೇಡ್ಕರ್ ರಸ್ತೆ ಮೂಲಕ ಪ್ರತಿಭಟನಾಕಾರರು ಸಾಗಿ ನಾಗಪ್ಪ ವೃತ್ತದ ಬಳಿ ಸಮಾವೇಶಗೊಂಡು ಸರ್ಕಾರ ನಡೆ ಖಂಡಿಸಿದರಲ್ಲದೆ ಮಾನವ ಸರಪಳಿ ನಿರ್ಮಿಸಿ ಮುಖಂಡರುಗಳ ಭಾವಚಿತ್ರಕ್ಕೆ ಚಪ್ಪಲಿ ತೋರಿಸಿ, ಹೊಡೆಯುವ ಮೂಲಕ ಆಕ್ರೋಶ ಹೊರಹಾಕಿದರು.

ಈ ವೇಳೆ ನಿವೃತ್ತ ಪೊಲೀಸ್ ಅಧಿಕಾರಿ, ಜೆಡಿಎಸ್ ನಾಯಕ ಪುಟ್ಟಸ್ವಾಮಿ, ಶೇಖರ್ ಬುದ್ಧ, ಅಂಬೇಡ್ಕರ್ ಸಂಘದ ಅಧ್ಯಕ್ಷ ಆನಂದ ಮೂರ್ತಿ ಸೇರಿದಂತೆ ಹಲವರು ಮಾತನಾಡಿ ದೇಶದ ಬಹುಸಂಖ್ಯಾತ ಪರಿಶಿಷ್ಟ ಜಾತಿಯ ಬಲಗೈಸಂಬಂಧಿತ ಜಾತಿಗಳು ಶತಮಾನಗಳಿಂದ ಶಿಕ್ಷಣ, ಉದ್ಯೋಗ ಮತ್ತು ಅಧಿಕಾರದಿಂದ ವಂಚಿತರಾಗಿದ್ದವು. ಬಿ.ಆರ್.ಅಂಬೇಡ್ಕರ್ ಅವರ ನಿರಂತರ ಹೋರಾಟದ ಫಲವಾಗಿ ದೊರೆತ ಮೀಸಲಾತಿಯಿಂದ ಈಗಷ್ಟೇ ಒಂದು–ಎರಡು ತಲೆಮಾರುಗಳಿಂದ ಶಿಕ್ಷಣ ಮತ್ತು ಉದ್ಯೋಗದಲ್ಲಿ ಸೀಮಿತ ಪ್ರಗತಿ ಸಾಧ್ಯವಾಗಿದೆ, ಆದರೆ ಇದನ್ನು ಸಹಿಸದ ಸರ್ಕಾರಗಳು ಬಲಗೈ ಸಮಾಜಕ್ಕೆ ಅನ್ಯಾಯ ಮಾಡುತ್ತಿವೆ, ಈಕ್ರಮ ಸರಿಯಲ್ಲ ಎಂದರು.

ಜಾತಿವಾದ ಮತ್ತು ಕೋಮುವಾದ ಮನೋಭಾವದವರು ಒಳಮೀಸಲಾತಿಯ ಹೆಸರಿನಲ್ಲಿ ಬಲಗೈ ಸಂಬಂಧಿತ ಜಾತಿಗಳನ್ನು ಮೀಸಲಾತಿಯಿಂದ ಹೊರಗಿಡಲು ಪ್ರಯತ್ನಿಸುತ್ತಿದ್ದಾರೆ. ಇಂತಹ ಬೆಳವಣಿಗೆ ನಿಲ್ಲಬೇಕು. ಬಲಗೈ ಜನಾಂಗ ಇದನ್ನು ಸಹಿಸುವುದಿಲ್ಲ ಎಂದು ಎಚ್ಚರಿಸಿದರು.

ಇದೆ ವೇಳೆ ಪ್ರತಿಭಟನಾಕಾರರು ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ ರವರಿಗೆ ತಮ್ಮ ಹಕ್ಕೊತ್ತಾಯಗಳುಳ್ಳ ಮನವಿ ಪತ್ರ ನೀಡಿದರು.

ಈ ಸಂಧರ್ಭದಲ್ಲಿ ಹೆಚ್.ಕೆ ಟ್ರಸ್ಟ್ ಕಾರ್ಯದರ್ಶಿ ಪ್ರೇಮಲತಾ, ಡಾ.ಬಿ.ಆರ್. ಅಂಬೇಡ್ಕರ್ ಸ್ಮಾರಕ ಸಂಘದ ಅಧ್ಯಕ್ಷ ಆನಂದಮೂರ್ತಿ, ಉಪಾಧ್ಯಕ್ಷ ಕಿರಣ್, ಕಾರ್ಯದರ್ಶಿ ಪಾಪಣ್ಣ, ಸಹಕಾರ್ಯದರ್ಶಿ ಶಶಿಧರ್, ಖಜಾಂಚಿ ರಾಜೇಶ್, ಛಲವಾದಿ ಮಹಾಸಭೆಯ ರಾಜ್ಯ ಉಪಾಧ್ಯಕ್ಷ ಅಣಗಳ್ಳಿ ಬಸವರಾಜು, ಕೂಡ್ಲೂರು ಶ್ರೀಧರ್ ಮೂರ್ತಿ, ಜಿಪಂನ ಮಾಜಿ ಸದಸ್ಯ ಕಮಲ್, ನಾಗರೀಕ ಸಮಿತಿಯ ಎಂ.ನಟರಾಜು ಮಾಳಿಗೆ, ಸಿದ್ದಪ್ಪಾಜಿ, ಶಂಕರ್ ಚೇತನ್, ದಿಲೀಪ್ ಸಿದ್ದಪ್ಪಾಜಿ, ವಕೀಲರ ಸಂಘದ ಅಧ್ಯಕ್ಷ ಬಸವರಾಜು, ಮುಳ್ಳೂರು ಶಿವಮಲ್ಲು, ಚೇತನ್ ದೊರೆ, ವರದ ರಾಜು, ಡಾ. ಗುರುಮೂರ್ತಿ, ಮಹಿಳಾ ಸಂಘಟನೆಯ ಶಿವಮ್ಮ, ಸಿದ್ದಯ್ಯನಪುರ ಗ್ರಾ.ಪಂ ಮಾಜಿ ಅಧ್ಯಕ್ಷ ಶಶಿಕುಮಾರಿ, ಕನ್ನಡ ಸಂರಕ್ಷಣಾ ಪಡೆ ಜಿಲ್ಲಾಧ್ಯಕ್ಷ ಮಾಂಬಳ್ಳಿ ರಾಜೇಶ್ ಮಹಾಜನ್, ಜಗದೀಶ್ ಶಂಕನಪುರ, ಮಹದೇವ ಶಂಕನಪುರ, ಚಿನ್ನಸ್ವಾಮಿ ಮಾಳಿಗೆ, ರಾಜೇಂದ್ರ ಇನ್ನಿತರಿದ್ದರು



ಕೊಳ್ಳೇಗಾಲದಲ್ಲಿ ಗುರುವಾರ ಬಲಗೈ ಸಮಾಜದ ವತಿಯಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ವಿದ್ಯುತ್ ಚಿತಾಗಾರ ನಿರ್ಮಾಣಕ್ಕೆ ಒತ್ತಾಯಿಸಿ ಪೌರಾಯುಕ್ತರಿಗೆ ಮನವಿ



ಚಾಮರಾಜನಗರ: ಜಿಲ್ಲಾ ಕೇಂದ್ರದಲ್ಲಿ ವಿದ್ಯುತ್ ಚಿತಾಗಾರ ನಿರ್ಮಾಣ ಮಾಡುವಂತೆ ಒತ್ತಾಯಿಸಿ ವಿಜಯಕುಮಾರ್ ಜಟ್ಟಪ್ಪ ಅವರ ನೇತೃತ್ವದಲ್ಲಿ ನಗರದ ನಗರಸಭೆ ಕಚೇರಿಯಲ್ಲಿ ಪೌರಾಯುಕ್ತ ಪರಶುರಾಮ ಛಲವಾದಿ ಅವರಿಗೆ ಮನವಿ ಸಲ್ಲಿಸಲಾಯಿತು.

2020–21ರಿಂದಲೂ ಸಹ ಚಾಮರಾಜನಗರದಲ್ಲಿ ಒಂದು ಸುಸಜ್ಜಿತ ವಿದ್ಯುತ್ ಚಾಲಿತ ಚಿತಾಗಾರ ನಿರ್ಮಾಣ ಮಾಡಲು ಹೋರಾಟ ಮಾಡುತ್ತಾ ಜಿಲ್ಲೆಯ ಶಾಸಕರು, ಸಂಸದರು, ಉಸ್ತುವಾರಿ ಮಂತ್ರಿಗಳು, ಮುಖ್ಯ ಮಂತ್ರಿಗಳು, ಜಿಲ್ಲಾಧಿಕಾರಿಗಳು ಎಲ್ಲರಿಗೂ ಅರ್ಜಿ ಸಲ್ಲಿಸಿ ಒತ್ತಾಯ ಮಾಡಿ ಸಂಬಂಧಿಸಿದ ಸಂಸದರು, ಉಸ್ತುವಾರಿ ಮಂತ್ರಿಗಳು, ಮುಖ್ಯಮಂತ್ರಿಗಳ ಕಚೇರಿಯಿಂದ ಪತ್ರ ವ್ಯವಹಾರ ನಡೆದು ತಮ್ಮ ಕಚೇರಿಗೆ ಕ್ರಮ ವಹಿಸುವಂತೆ ನಿರ್ದೇಶನ ನೀಡಿದ್ದು ಸರಿಯಷ್ಟೆ 2024–25ನೇ ಸಾಲಿನ ಆಯವ್ಯಯ ಮಂಡಿಸಿದ ಅಂದಿನ ಆಡಳಿತಾಧಿಕಾರಿಗಳು ವಿದ್ಯುತ್ ಚಾಲಿತ ಚಿತಾಗಾರಕ್ಕೆ 2.50 ಕೋಟಿ ರೂ.ಗಳನ್ನು ಮೀಸಲು ಇಟ್ಟಿರುತ್ತಾರೆ. ಈವರೆವಿಗೂ ಸಹ ಕ್ರಮ ಕೈಗೊಂಡಿಲ್ಲ. ಆದ್ದರಿಂದ 2026–27ನೇ ಆಯವ್ಯಯದಲ್ಲಿ ವಿದ್ಯುತ್ ಚಾಲಿತ ಚಿತಾಗಾರದ ಕಾಮಗಾರಿಯನ್ನು ಆರಂಭಿಸಿ ಕೂಡಲೇ ಚಿತಾಗಾರ ನಿರ್ಮಿಸಿ ಶವ ಸಂಸ್ಕಾರಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಪೌರಾಯುಕ್ತರಿಗೆ ಸಲ್ಲಿಸಿರುವ ಮನವಿಯಲ್ಲಿ ವಿಜಯಕುಮಾರ್ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಮುಖಂಡರಾದ ವೇಲುಮಣಿ, ಮಹದೇವಪ್ಪ, ರಂಗಸ್ವಾಮಿ ನಾಯಕ, ಅಮಚವಾಡಿ ಶಿವಣ್ಣ ಹಾಜರಿದ್ದರು.

ನಾಳೆ ಕಥೆ, ನಾಟಕ, ವಿಚಾರ ಸಂಕಿರಣ

ಚಾಮರಾಜನಗರ, ಫೆ.19– ಮೈಸೂರಿನ ಚೇತನ ಕಲಾವಾಹಿನಿ, ಮೈಸೂರಿನ ನೆಲೆ ಹಿನ್ನೆಲೆ, ಚಾಮರಾಜನಗರದ ಜೋಳಿಗೆ ಪ್ರಕಾಶನ ಸಹಯೋಗದಲ್ಲಿ ಫೆ. 21ರಂದು ನಗರದಲ್ಲಿ ಹನೂರು ಚನ್ನಪ್ಪ ಕಥೆ, ನಾಟಕ, ಕಾದಂಬರಿ ಕುರಿತು ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 10 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ಕಲಾಮಂದಿರದಲ್ಲಿ ವಿಚಾರ ಸಂಕಿರಣವನ್ನು ಚಲನಚಿತ್ರ ಸಂಗೀತ ನಿರ್ದೇಶಕ ವಿ.ಮನೋಹರ್ ಉದ್ಘಾಟಿಸುವರು. ಸಂಸ್ಕೃತಿ ಚಿಂತಕ ಎಚ್.ಗೋವಿಂದಯ್ಯ ಅಧ್ಯಕ್ಷತೆ ವಹಿಸುವರು.

ಶಿವಾಜಿಯವರ ಶ್ರೇಷ್ಠ ವ್ಯಕ್ತಿತ್ವ, ಸ್ವಾಭಿಮಾನಿ ರಾಷ್ಟ್ರ ಕಲ್ಪನೆ ಇಂದಿಗೂ ಸ್ಮರಣೀಯ

ಚಾ.ನಗರದಲ್ಲಿ ಛತ್ರಪತಿ ಶಿವಾಜಿ ಜಯಂತಿ ಆಚರಣೆ



ಶಿವಾಜಿಯವರ ಜಯಂತಿ ಕಾರ್ಯಕ್ರಮವನ್ನು ಎಡಿಸಿ ಜವರೇಗೌಡ ಉದ್ಘಾಟಿಸಿದರು.

ಚಾಮರಾಜನಗರ, ಫೆ19– ಭಾರತೀಯ ಇತಿಹಾಸದಲ್ಲಿ ಶಿವಾಜಿ ಮಹಾರಾಜರ ಶ್ರೇಷ್ಠ ಆದರ್ಶ ವ್ಯಕ್ತಿತ್ವ, ನಾಯಕತ್ವ ಗುಣ, ಸ್ವರಾಜ್ಯ ಕಲ್ಪನೆ, ಸ್ವಾಭಿಮಾನಿ ರಾಷ್ಟ್ರ ಕಲ್ಪನೆ ಹಾಗೂ ಧಾರ್ಮಿಕ ಸಹಿಷ್ಣುತೆ ಇಂದಿಗೂ ಸ್ಮರಣೀಯವಾಗಿವೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ ತಿಳಿಸಿದರು.

ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಛತ್ರಪತಿ ಶಿವಾಜಿಯವರ 399ನೇ ಜಯಂತಿ ಕಾರ್ಯಕ್ರಮದಲ್ಲಿ ಶಿವಾಜಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಹಾರಾಷ್ಟ್ರದ ಶಿವನೇರಿ ದುರ್ಗದಲ್ಲಿ 1627ರಲ್ಲಿ ಜನಿಸಿದ ಶಿವಾಜಿ ಅವರು ಬಾಲ್ಯದಲ್ಲಿ ತಾಯಿ ಜೀಜಾ ಬಾಯಿ ಅವರಿಂದ ಸಾಕಷ್ಟು ಪ್ರಭಾವಿತರಾಗಿದ್ದರು. ತಾಯಿಯವರು ಹೇಳುತ್ತಿದ್ದ ರಾಮಾಯಣ, ಮಹಾಭಾರತ ಪರಂಪರೆಯ ಇತಿಹಾಸವನ್ನು ಅರ್ಥೈಸಿಕೊಂಡು ಸದೃಢ ಸ್ವರಾಜ್ಯ ಕಟ್ಟಲು ಮುಂದಾದರು. ಅವರ ಧೈರ್ಯ, ಸಾಹಸ, ಹೋರಾಟ ಗುಣ ನಮ್ಮೆಲ್ಲರಿಗೂ ಸ್ಫೂರ್ತಿಯಾಗಿದೆ ಎಂದರು.

ಗೆರಿಲ್ಲಾ ಯುದ್ಧತಂತ್ರದ ಮೂಲಕ ಮೊಘಲರು ಮತ್ತು ಬಿಜಾಪುರದ ಆದಿಲ್ ಶಾಹಿಗಳಿಗೆ ಸಿಂಹಸ್ವಪ್ನರಾಗಿದ್ದ ಶಿವಾಜಿಯವರು ಆಡಳಿತದಲ್ಲಿ ಎಲ್ಲಾ ವರ್ಗದ ಜನರನ್ನು ಸಮಾನತೆಯಿಂದ ಕಾಣುತ್ತಿದ್ದರು. ದೇಶ ಸಂರಕ್ಷಣೆಗೆ ಸೈನ್ಯವನ್ನು ಸಜ್ಜುಗೊಳಿಸುವುದರಲ್ಲಿ ಇತರೆ ರಾಜರಿಗೂ ಶಿವಾಜಿ ಮಾದರಿಯಾಗಿದ್ದರು. ಸ್ವಾಭಿಮಾನಿ ರಾಷ್ಟ್ರ ನಿರ್ಮಾಣಕ್ಕೆ ಹೋರಾಡಿದ ಶಿವಾಜಿಯವರು ಸದಾಕಾಲ ಸ್ಮರಣೀಯರಾಗಿದ್ದಾರೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಅವರು ತಿಳಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುನ್ನಾ ಅವರು ಮಾತನಾಡಿ ಬಾಲ್ಯದಲ್ಲಿಯೇ ಹೋರಾಟ ಗುಣಗಳನ್ನು ಮೈಗೂಡಿಸಿಕೊಂಡಿದ್ದ ಶಿವಾಜಿ ಮಹಾರಾಜರು ಒಬ್ಬ ಆದರ್ಶ ರಾಜ ಹೇಗಿರಬೇಕು ಎಂಬುದಕ್ಕೆ ಮಾದರಿಯಾಗಿದ್ದಾರೆ. ಅವರ ಧೈರ್ಯ, ಶೌರ್ಯ, ವೀರತ್ವ ಹಾಗೂ ಮುಂಚೂಣಿ ನಾಯಕತ್ವ ಗುಣಗಳು ಚಿರಸ್ಥಾಯಿಯಾಗಿವೆ. ಈ ದೇಶಕ್ಕೆ, ನಾಡಿಗೆ ಅಪಾರ ಕೊಡುಗೆ ನೀಡಿರುವ ಶಿವಾಜಿ ಮಹಾರಾಜರ ಆದರ್ಶಗಳನ್ನು ಎಲ್ಲರು ಅಳವಡಿಸಿಕೊಳ್ಳಬೇಕಾಗಿದೆ ಎಂದು ಹೇಳಿದರು.

ಕ್ಷತ್ರಿಯ ಮರಾಠ ಪರಿಷತ್ ಜಿಲ್ಲಾಧ್ಯಕ್ಷರಾದ ವೆಂಕಟರಾವ್ ಸಾಠೆ ಅವರು ಮಾತನಾಡಿ ದೇಶಾದ್ಯಂತ ಇಂದು ಶಿವಾಜಿ ಮಹಾರಾಜರ ಜಯಂತಿ ಆಚರಿಸಲಾಗುತ್ತಿದೆ. ಉತ್ತಮ ಚಾಣಾಕ್ಷರು ಹಾಗೂ ಧರ್ಮ ಸಹಿಷ್ಣುವಾಗಿದ್ದ ಶಿವಾಜಿ ಮಹಾರಾಜರು ತನ್ನ ರಾಜ್ಯದಲ್ಲಿ ಎಲ್ಲಾ ಪ್ರಜೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆಡಳಿತ ನಡೆಸಿದ್ದರು. ಎಲ್ಲರನ್ನು ಸರ್ವ ಸಮಾನತೆಯಿಂದ ನೋಡಿಕೊಂಡಿದ್ದರು. ಅವರ ಮಾರ್ಗದರ್ಶನದಲ್ಲಿ ನಾವೆಲ್ಲರೂ ಮುನ್ನೆಡೆಯಬೇಕಾಗಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ರಾಜು, ನಗರದ ಪೊಲೀಸ್ ವೃತ್ತ ನಿರೀಕ್ಷಕರಾದ ಜಗದೀಶ್, ಸಮುದಾಯದ ಮುಖಂಡರಾದ ಚಂದ್ರಾವ್, ಶ್ರೀನಿವಾಸ್, ಮಮತಾ ಬಾಯಿ, ಲೋಕೇಶ್ ರಾವ್, ಬಾಬು ರಾವ್, ಅಭಿರಾಮ್, ಶಿವಕುಮಾರ್, ಅನಿತಾ ಬಾಯಿ, ಎಲ್. ಸುರೇಶ್, ಇತರರು ಇದೇ ಸಂದರ್ಭದಲ್ಲಿ ಇದ್ದರು.

ಹೊರೆಯಾಲದಲ್ಲಿ ಶ್ರೀ ವೀರಭದ್ರೇಶ್ವರಸ್ವಾಮಿ ದೇವಾಲಯದಲ್ಲಿ ವಾರ್ಷಿಕೋತ್ಸವ ಆಚರಣೆ



ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಾಲಯದ ವಾರ್ಷಿಕೋತ್ಸವ ನಡೆಯಿತು.

ಬೇಗೂರು(ಗುಂಡ್ಲುಪೇಟೆ): ಸಮೀಪದ ಹೊರೆಯಾಲ ಗ್ರಾಮದ ಶ್ರೀವೀರಭದ್ರೇಶ್ವರ ಸ್ವಾಮಿ ದೇವಾಲಯದ 12ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ ವಿಜೃಂಭಣೆಯಿಂದ ನಡೆಯಿತು.

ಬೆಳಿಗ್ಗೆ ದೇವಾಲಯದಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಕ್ಷೀರಾಭಿಷೇಕ, ಬಿಲ್ವಾರ್ಚನೆ, ವೀರಭದ್ರಾಷ್ಟೋತ್ತರ, ವಿಶೇಷ ಹೂವಿನ ಅಲಂಕಾರ ಕುರುಬರಹುಂಡಿ (ಶಿವಕುಮಾರ್‌ಪುರ) ವಿರಕ್ತ ಮಠಾಧ್ಯಕ್ಷ ಶ್ರೀ ಇಮ್ಮಡಿ ಮಹಾಂತ ಸ್ವಾಮಿಗಳವರ ನೇತೃತ್ವದಲ್ಲಿ ನಡೆಯಿತು.

ನಂತರ ವೀರಭದ್ರೇಶ್ವರ ಸ್ವಾಮಿಯ ಭಾವಚಿತ್ರವನ್ನು ಅಡ್ಡ ಪಲ್ಲಕ್ಕಿಯಲ್ಲಿರಿಸಿ ವೀರಗಾಸೆ, ಮಂಗಳವಾದ್ಯ ಹಾಗೂ ವಿವಿಧ ಕಲಾತಂಡಗಳ ನಡುವೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಗ್ರಾಮದ ಪ್ರತಿಮನೆಯವರು ಪೂಜೆ ಸಲ್ಲಿಸಿದರು. ದೇವಾಲಯವನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು.

ಬೇಗೂರು, ಕುರುಬರಹುಂಡಿ, ಕೋಟೆಕೆರೆ, ಕಮರಹಳ್ಳಿ, ಬೆಳಚಲವಾಡಿ, ತೊಂಡವಾಡಿ, ರಂಗೂಪುರ ಸಿರಿದಂತೆ ಸುತ್ತಮುತ್ತಲ ಗ್ರಾಮಗಳ ಸಾವಿರಾರು ಜನ ಭಕ್ತಾದಿಗಳು ಆಗಮಿಸಿ ದೇವರ ಕೃಪೆಗೆ ಪಾತ್ರರಾದರು ಭಕ್ತಾದಿಗಳಿಗೆ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿತ್ತು. ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನ ಅಭಿವೃದ್ಧಿ ಟ್ರಸ್ಟ್ ವತಿಯಿಂದ ವಾರ್ಷಿಕೋತ್ಸವ ಸಮಾರಂಭ ವಿಜೃಂಭಣೆಯಿಂದ ನಡೆಯಿತು.

ಫೆ.22ರಂದು ಛಲವಾದಿ ಮಹಾಸಭಾದ ಅಧ್ಯಕ್ಷರ ಆಯ್ಕೆ

ಚಾಮರಾಜನಗರ: ಛಲವಾದಿ ಮಹಾಸಭಾದ ನೂತನ ಜಿಲ್ಲಾಧ್ಯಕ್ಷರನ್ನು ಫೆ.22ರಂದು ಅಧಿಕೃತವಾಗಿ ಆಯ್ಕೆಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ನಗರದ ಪ್ರವಾಸಿಮಂದಿರದಲ್ಲಿ ಛಲವಾದಿ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಅಣಗಳ್ಳಿ ಬಸವರಾಜು ಅವರ ಅಧ್ಯಕ್ಷತೆಯಲ್ಲಿ ನೂತನ ಜಿಲ್ಲಾಧ್ಯಕ್ಷರ ಆಯ್ಕೆಗಾಗಿ ನಡೆದ ಪೂರ್ವಭಾವಿಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು. ನೂತನ ಅಧ್ಯಕ್ಷರ ಆಯ್ಕೆಗಾಗಿ ನಗರದ ಪ್ರವಾಸಿಮಂದಿರದಲ್ಲಿ ಇಂದು ಸಭೆ ಕರೆದು ಚರ್ಚಿಸಿ ನೂತನ ಅಧ್ಯಕ್ಷರ ಆಯ್ಕೆಗಾಗಿ ಫೆ.22 ಅಂಬೇಡ್ಕರ್ ಭವನದಲ್ಲಿ 11 ಗಂಟೆ ಸಭೆ ಕರೆಯಲಾಗಿದೆ.



ಮಹೇಶ್‌ಬಾಬು

ನಾಗಬಂಧಂ

ಟೀಸರ್ ಬಿಡುಗಡೆ

ಸಾಕಷ್ಟು ಕುತೂಹಲ ಮೂಡಿಸಿರುವ ಪ್ಯಾನ್ ಇಂಡಿಯಾ ಚಿತ್ರ ನಾಗಬಂಧಂ'. ಈ ಚಿತ್ರದ ಟೀಸರನ್ನು ನಟ ಮಹೇಶ್‌ಬಾಬು ಅವರು ಮಹಾ ಶಿವರಾತ್ರಿಯ ಸಂದರ್ಭದಲ್ಲಿ ಬಿಡುಗಡೆ ಮಾಡಿದರು. ಅಭಿಷೇಕ್ ನಾಮಾ ಅವರ ಕಥೆ ಚಿತ್ರಕಥೆ ಹಾಗೂ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರವನ್ನು ಕಿಶೋರ್ ಅನ್ನಪುರೆಡ್ಡಿ ಮತ್ತು ನಿಶಿತಾ ನಾಗಿರೆಡ್ಡಿ ನಿರ್ಮಿಸಿದ್ದಾರೆ. ಆಧ್ಯಾತ್ಮಿಕ ಆಳ ಮತ್ತು ದೃಶ್ಯವೈಭವದ ಸಂಗಮವಾಗಿ ಮೂಡಿಬಂದಿರುವ ಈ ಚಿತ್ರದ ಪ್ರತಿ ಫ್ರೇಮ್ ಪ್ರೇಕ್ಷಕರನ್ನು ಸೆಳೆಯಲಿದೆ.

ಕಥೆಯ ಕೇಂದ್ರಬಿಂದು 'ನಾಗಬಂಧಂ ದೇವಾಲಯ'. ದೈವಿಕ ಶಕ್ತಿಗಳಿಂದ ರಕ್ಷಿಸಲ್ಪಟ್ಟಿರುವ ಈ ರಹಸ್ಯ ದೇವಾಲಯವು ಬ್ರಹ್ಮಾಂಡದ ಪ್ರಚಂಡ ಶಕ್ತಿಯನ್ನು ತನ್ನ ಒಡಲಲ್ಲಿಟ್ಟು ಕೊಂಡಿರುತ್ತದೆ. ಈ ಶಕ್ತಿಯು ದುರುಳರ ಕೈ ಸೇರಿದರೆ ಸಂಭವಿಸಬಹುದಾದ ವಿನಾಶವನ್ನು ತಡೆಯಲು ವಿಧಿ ಒಬ್ಬ ಯೋಧನನ್ನು ಹೇಗೆ ಹುಟ್ಟು ಹಾಕುತ್ತದೆ ಎನ್ನುವುದೇ ನಾಗಬಂಧಂ ಚಿತ್ರದ ಕಥಾಹಂದರ. ನಿರ್ದೇಶಕರು ಕೇವಲ ದೃಶ್ಯಗಳ ಮೂಲಕವೇ ಈ ಚಿತ್ರದ ಟೀಸರನ್ನು ನಿರೂಪಿಸಿದ್ದಾರೆ. ಯಾವುದೇ ಒಂದು ಸಂಭಾಷಣೆ ಇಲ್ಲದಿದ್ದರೂ, ಟೀಸರ್ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುತ್ತದೆ.

ನಾಯಕ ವಿರಾಟ್‌ಕರ್ಣ ಅವರು ತಮ್ಮ ಪಾತ್ರಕ್ಕಾಗಿ ಮಾಡಿಕೊಂಡಿರುವ ಶಾರೀರಿಕ ಬದಲಾವಣೆ ಬೆರಗುಗೊಳಿಸುವಂತಿದೆ. ವಿಶೇಷವಾಗಿ ಮೊಸಳೆಯ ಜೊತೆಗಿನ ಹೋರಾಟ ಮತ್ತು ಶಿವನ ಅವತಾರದಲ್ಲಿ ವಿರಾಟ್ ಅವರ ಅಭಿನಯ ಟೀಸರ್‌ನ ಹೈಲೈಟ್.

ಸೌಂದರರಾಜನ್ ಅವರ ಸಿನಿಮಾಟೋಗ್ರಫಿ, ಜುನೈದ್‌ಕುಮಾರ್ ಅವರ ಹಿನ್ನೆಲೆ ಸಂಗೀತ ಮತ್ತು ಅತ್ಯುನ್ನತ ಮಟ್ಟದ ವಿಎಫ್‌ಎಕ್ಸ್ ಚಿತ್ರದ ಗಾಂಭೀರ್ಯ ಹೆಚ್ಚಿಸಿವೆ. ನಭಾ ನಟೇಶ್ ಮತ್ತು ಐಶ್ವರ್ಯ ಮೆನನ್ ಚಿತ್ರದ ನಾಯಕಿಯರು. ಮಹೇಶ್ ಮಂಜ್ರೇಕರ್, ಜಗಪತಿಬಾಬು, ರಿಷಬ್ ಸಾಹ್ನಿ, ಗರುಡರಾಮ್, ಮುರಳಿ ಶರ್ಮ ಮತ್ತು ಅನಸೂಯ ಭಾರದ್ವಾಜ್ ಹಾಗೂ ಇತರರು ಚಿತ್ರದಲ್ಲಿ ನಟಿಸಿದ್ದಾರೆ.



ಮಾರ್ಕೆಟ್‌ನಲ್ಲಿ 'ಚೀತಾ' ರೊಮ್ಯಾಂಟಿಕ್ ಹಾಡು



ಪ್ರಜ್ವಲ್ ದೇವರಾಜ್, ಮೇಘಾ ಶೆಟ್ಟಿ ನಟಿಸಿರುವ 'ಚೀತಾ' ಚಿತ್ರದ ಡ್ಯುಯಟ್ ಹಾಡಿನ ಚಿತ್ರೀಕರಣ ರಾಕ್‌ಲೈನ್ ಸ್ಟುಡಿಯೋದಲ್ಲಿ ನಡೆಯಿತು, ಈ ಸಂದರ್ಭದಲ್ಲಿ ನಿರ್ದೇಶಕ ಕಲ್ಯೆಕುಮಾರ್, ನಿರ್ಮಾಪಕಿ ಪ್ರತಿಭಾ ಹಾಗೂ ನಾಯಕ, ನಾಯಕಿ ಶೂಟಿಂಗ್ ಅನುಭವಗಳನ್ನು ಹಂಚಿಕೊಂಡರು,

ನಿರ್ದೇಶಕ ಕಲ್ಯೆ ಮಾತನಾಡುತ್ತ ಮಾರ್ಕೆಟ್‌ನಲ್ಲಿ ಹುಟ್ಟಿ ಬೆಳೆದ ಹುಡುಗನೊಬ್ಬ ಅಲ್ಲಿ ನಡೆಯುವ ಅನ್ಯಾಯ ಅಕ್ರಮಗಳ ವಿರುದ್ಧ ಹೋರಾಟ ಮಾಡಿ ಜನರಿಗೆ ಹೇಗೆ ನ್ಯಾಯ ಕೊಡಿಸುತ್ತಾನೆ ಎಂದು ಚಿತ್ರದಲ್ಲಿ ಹೇಳಿದ್ದೇನೆ. ರಂಗಾಯಣ ರಘು, ಶೃತಿ ಹರಿಹರನ್, ಚಿನ್ನಿಪ್ರಕಾಶ್(ನೃತ್ಯ ನಿರ್ದೇಶಕ), ಗುರುರಾಜ್ ಜಗ್ಗೇಶ್, ಶಿವರಾಜ ಕೆ.ಆರ್. ಪೇಟೆ ಬಲರಾಜ್‌ವಾಡಿ, ಟೆನ್ನಿಸ್ ಕೃಷ್ಣ ಇತರೆ ತಾರಾಗಣದಲ್ಲಿದ್ದಾರೆ. ಚಿತ್ರಕ್ಕೆ ನಾವಂದುಕೊಂಡದ್ದಕ್ಕಿಂತ ನಾಲ್ಕರಷ್ಟು ಖರ್ಚಾಗಿದೆ ಎಂದು ಹೇಳಿದರು.

ನಾಯಕ ಪ್ರಜ್ವಲ್ ಮಾತನಾಡುತ್ತ ನಿರ್ದೇಶಕರು ಹೇಳಿದ ಹಾಗೆ ನನ್ನದು ಮಾರ್ಕೆಟ್‌ನಲ್ಲೇ ಬೆಳೆಯುವ ಅನಾಥ ಹುಡುಗನ ಪಾತ್ರ ಅಲ್ಲಿರುವ ಪ್ರತಿಯೊಬ್ಬರೂ ಜಾತಿ, ಮತ ಎಂಬ ಭೇದವಿಲ್ಲದೆ ನನ್ನನ್ನು ಪ್ರೀತಿಸುತ್ತಿರುತ್ತಾರೆ. ಅಲ್ಲಿ ನಡೆಯುವ ಕೆಮಿಕಲ್ ಮಾಫಿಯಾ ಸೇರಿದಂತೆ ಅನೇಕ ಅವ್ಯವಹಾರಗಳ ವಿರುದ್ಧ ನಿಂತು ನಾನು ಹೋರಾಡುತ್ತೇನೆ. ಒಂದೊಳ್ಳೆ ಚಿತ್ರದಲ್ಲಿ ಅಭಿನಯಿಸಿರುವ ತೃಪ್ತಿ ನನಗಿದ್ದು, ಸಿನಿಮಾ ಎಲ್ಲರಿಗೂ ಇಷ್ಟವಾಗಲಿದೆ ಎಂದರು. ಇದುವರೆಗೂ ಮಾಡಿರದಂಥ ಪಾತ್ರ ನನಗೆ ಈ ಚಿತ್ರದಲ್ಲಿ ಸಿಕ್ಕಿತ್ತು ಎಂದು ಮೇಘಾಶೆಟ್ಟಿ ಹೇಳಿದರು.



ನಿರ್ದೇಶಕನೊಬ್ಬನ 'ಡೈರೆಕ್ಟರ್ಸ್ ಕಟ್' ಕಥೆ!

ಇದು ಸಿನಿಮಾದೊಳಗೊಂದು ಸಿನಿಮಾ ಕಥೆ. ಕನ್ನಡದ ನಿರ್ದೇಶಕನೊಬ್ಬ ಉತ್ತರಾಖಂಡಕ್ಕೆ ಹೋದಾಗ ಅಲ್ಲಿ ಏನೆಲ್ಲಾ ಘಟನೆಗಳು ಸಂಭವಿಸುತ್ತವೆ. ಅದು ಏನೆಲ್ಲಾ ತಿರುವುಗಳನ್ನು ತೆಗೆದುಕೊಳ್ಳುತ್ತದೆ ಎನ್ನುವುದೇ 'ಡೈರೆಕ್ಟರ್ಸ್ ಕಟ್' ಚಿತ್ರದ ಕಥಾಹಂದರ ಎಂದು ನಿರ್ದೇಶಕ ಭರತ್ ವಿಜೆ ಹೇಳಿದರು, ಹೇಮಲತಾ ಬಿ.ಎಸ್. ಅವರ ನಿರ್ಮಾಣದ ಡೈರೆಕ್ಟರ್ಸ್ ಕಟ್ ಚಿತ್ರದ ಮುಹೂರ್ತ ಕಾರ್ಯಕ್ರಮದಲ್ಲಿ ನಿರ್ದೇಶಕ ಭರತ್ ಚಿತ್ರದ ಕುರಿತು ಮಾತನಾಡುತ್ತ ಈ ಹಿಂದೆ ಖೇಲಾ ಚಿತ್ರ ನಿರ್ದೇಶಿಸಿದ್ದೆ. ಇದು 2ನೇ ಚಿತ್ರ, ನಮ್ಮ ತಾಯಿ ಹೇಮಲತಾ ಅವರೇ ನಿರ್ಮಾಪಕರು. ಸೂರಜ್‌ಗೌಡ, ರಾಧಾ ಎಸ್. ಭಾಗಿ ಮತ್ತು ದಿವ್ಯ ಜೈನ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ಇದೇ ತಿಂಗಳ 25ರಿಂದ ಡೈರೆಕ್ಟರ್ಸ್ ಕಟ್ ಚಿತ್ರದ ಚಿತ್ರೀಕರಣ ಆರಂಭವಾಗಲಿದ್ದು, ಬಹುತೇಕ ಚಿತ್ರೀಕರಣ ಉತ್ತರಾಖಂಡದಲ್ಲೇ ನಡೆಯಲಿದೆ ಎಂದರು.

ಈ ಚಿತ್ರದಲ್ಲಿ ಸೂರಜ್‌ಗೌಡ ಒಬ್ಬ ನಿರ್ದೇಶಕನಾಗಿ ಮತ್ತು ರಾಧಾ ಎಸ್. ಭಾಗಿ ಅವರು ದಕ್ಷಿಣ ಭಾರತದ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಅಲ್ಲದೆ ದಿವ್ಯಜೈನ್ ಅವರು ಉತ್ತರ ಭಾರತದ ನಾಯಕಿಯ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಪಿ.ಡಿ.ಸತೀಶ್, ಸ್ವಾತಿ ಉಳಿದ ಪಾತ್ರಗಳಲ್ಲಿದ್ದಾರೆ. ಪ್ರಮೋದ್‌ಗೌಡ ಅವರ ಛಾಯಾಗ್ರಹಣ ಹಾಗೂ ಕಲ್ಯಾಣ್ ಮಂಜುನಾಥ್ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ.


ಸೂರಜ್‌ಗೌಡ ಮಾತನಾಡುತ್ತ ನಿರ್ದೇಶಕರು ಹೇಳಿದ ಹಾಗೆ ಇದು ಸಿನಿಮಾದೊಳಗೆ ನಡೆಯುವ ಮತ್ತೊಂದು ಸಿನಿಮಾದ ಕಥೆ. ಈ ಕಥೆಯಲ್ಲಿ ನಾನು ನಿರ್ದೇಶಕನ ಪಾತ್ರ ನಿರ್ವಹಿಸುತ್ತಿದ್ದೇನೆ. ಕನ್ನಡದ ನಿರ್ದೇಶಕನೊಬ್ಬ ಉತ್ತರಾಖಂಡಕ್ಕೆ ತನ್ನ ಸಿನಿಮಾದ ಚಿತ್ರೀಕರಣಕ್ಕೆಂದು ಹೋದಾಗ ಅಲ್ಲಿ ಏನೇನೆಲ್ಲಾ ಆಗುತ್ತದೆ ಎಂಬುದನ್ನು ಕುತೂಹಲಕಾರಿಯಾಗಿ ನಿರ್ದೇಶಕರು ತೆಗೆದುಕೊಂಡು ಹೋಗಿದ್ದಾರೆ. ಇದೇ ವರ್ಷ ನನ್ನ ಮೂರು ಚಿತ್ರಗಳು ತೆರೆಗೆ ಬರಲಿದ್ದು, ಅದರಲ್ಲಿ ಒಂದು ಚಿತ್ರವನ್ನು ನಾನೇ ನಿರ್ದೇಶನ ಮಾಡುತ್ತಿದ್ದೇನೆ ಎಂದರು.



ಸಿನಿಪದಬಂಧ-615



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು

ವಿಳಾಸ

ದೂರವಾಣಿ ಸಂಖ್ಯೆ

ಎಡದಿಂದ ಬಲಕ್ಕೆ

1. ಮೇಲೋಗರದ ಪರಿಮಳ ತೆರೆಯ ಮೇಲೂ ಘಮ ಘಮಿಸಿದೆ 4
2. ಕೌರವ – ಪಾಂಡವರ ಇತಿಹಾಸ 5
5. ಅಂಬರೀಷ್ ಗೆಲುವಿನ ಕಠಾರಿ ಹಿಡಿದಿದ್ದಾನೆ 5
7. ವಿಷ್ಣುವರ್ಧನ್ ಪ್ರಜಾ ಪ್ರತಿನಿಧಿ 5
9. ಕುವೆಂಪು ಅವರ ನೇಗಿಲ ಹಿಡಿದ ರೈತ 5
13. ಭಾರತಿ ಮಾಂಗಲ್ಯ ಮುಟ್ಟಿ ಮಾಡಿದ ಶಪಥ 5
14. ಕಲ್ಪನಾಳ ಬಿರುದು ಇಲ್ಲಿ ತಿರುಗಿದೆ 5
16. ವಿಷ್ಣುವರ್ಧನ್, ರಾಜೇಶ್, ಭಾರತಿ ಅಭಿನಯದ ಚಿತ್ರ 5
18. ರವಿಚಂದ್ರನ್ ಶ್ರೇಷ್ಠವಾದ ವ್ಯಕ್ತಿ 5
19. ಸಿಹಿ ನುಡಿ 4

ಮೇಲಿನಿಂದ ಕೆಳಕ್ಕೆ

1. 'ಕಣ್ಣಿಗೆ ಕಾಣದ ನಾಟಕಕಾರ ನಿನಗೆ ನನ್ನ ನಮಸ್ಕಾರ....', ಗೀತೆಯ ಚಿತ್ರ 8
2. ಸುದೀಪ್ 'ಚಕ್ರವರ್ತಿ' 4
3. ಶಂಕರ್ ನಾಗ್ ಅಭಿನಯದ ಸಸ್ಪೆನ್ಸ್ ಚಿತ್ರ 2
4. ಸಾಯಿಕುಮಾರ್ ಹಿಡಿದ ಆಯುಧ 2
6. ಈ ನಟ ಪ್ರಣಯ ರಾಜ 3
8. ತ. ಪು. ವೆಂಕಟರಾಮ್ ಕಥೆಯಲ್ಲಿ ಶಿಲೆ ನಾದ ಹೊಮ್ಮಿಸಿದೆ 8
10. ಪಂಜರದ ಪಕ್ಷಿ 2
11. ಮರೆಯದ ಮಾಣಿಕ್ಯ ಚಿತ್ರದ ನಾಯಕಿ 2
12. ನೀರಿನಲ್ಲಿ ಅಲೆಯ _ _ _ 3
15. ಹೆಂಡತಿಯ ಅಪ್ಪ ಸೇನೆಯವನು 4
16. ವಿಷ್ಣುವರ್ಧನ್ – ರೂಪಿಣಿ ಅಭಿನಯಕ್ಕೆ ವಿಜಯ್ ನಿರ್ದೇಶಕ 2
17. ರಮೇಶ್, ಬಿ. ಸಿ. ಪಾಟೀಲ್, ಅನುಪ್ರಭಾಕರ್ ಅಭಿನಯದ ಚಿತ್ರ 2

ಸಿನಿ ಪದಬಂಧ 614ರ ಉತ್ತರ

	ಸಂ	ಗ	ಮ		ಪ್ರೇ	ಮ	ಸಿಂ	ಹಾ	ಸ	ನ
ಪ		ಟ್ಟಿ		ಸು		ಹಾ		ಲು		ವ
ರ		ಮೇ		ಕ		ಪ್ರ				ನೀ
ಮ	ಕ್ಕ	ಳ	ಸೈ	ನ್ಯ		ಚಂ	ಡ	ಮಾ	ರು	ತ
ಶಿ						ಡ				
ವ	ಸಿ	ಷ್ಠ	ಸಿಂ	ಹ		ರು	ದ್ರ	ತಾಂ	ಡ	ವ
				ತ್ತೂ						ಸಂ
ಅ	ಜ	ರಾ	ಮ	ರ		ಭ	ವ್ಯ	ಭಾ	ರ	ತ
ಸಂ				ಒ		ರಾ		ಗ್ಯ		ಕಾ
ಭ		ವೇ		ಡೆ		ಟೆ		ವಂ		ವ್ಯ
ವ	ರ	ದ	ನಾ	ಯ	ಕ		ಹಂ	ತ	ಕ	

ವಿಜೇತರು: ಬಿ.ಹೆಚ್. ಶ್ರೀನಿವಾಸಮೂರ್ತಿ, #3070/ಬಿ, ನಿಸರ್ಗ ಬಡಾವಣೆ, 1ನೇ ಹಂತ, ಲಕ್ಷ್ಮೀಕಾಂತನಗರ, ಹೆಬ್ಬಾಳ್, ಮೈಸೂರು-16



ಗುಣಮಟ್ಟ, ದೀರ್ಘ ಬಾಳಿಕೆಯ ಎಲ್ಲಾ ವಿಧದ ಟಾರ್ಪಾಲಿನ್ಸ್ ಬ್ಯಾಗ್‌ಗಳಿಗೆ ಸಂಪರ್ಕಿಸಿ

ನಂ.87, ಡಿ.ದೇವರಾಜ ಅರಸ್ ರಸ್ತೆ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಗಣೇಶ್ ಹೊಸ ಚಿತ್ರ 'ತಮ್ಮ ಸುಖಾಗಮನ ಬಯಸುವ'



ಗೋಲ್ಡನ್‌ಸ್ಟಾರ್ ಗಣೇಶ್ ಹಾಗೂ ತೀರ್ಥರೂಪ ತಂದೆಯವರಿಗೆ ಖ್ಯಾತಿಯ ರಾಮೇನಹಳ್ಳಿ ಜಗನ್ನಾಥ ಕಾಂಬಿನೇಶನ್‌ನ ಹೊಸಚಿತ್ರ 'ತಮ್ಮ ಸುಖಾಗಮನ ಬಯಸುವ'. ವಿಜಯ್ ಲೋಹಿತ್ ನಿರ್ಮಿಸುತ್ತಿರುವ ಈ ಚಿತ್ರದ ಮುಹೂರ್ತ ಇತ್ತೀಚೆಗೆ ನೆರವೇರಿತು. ನಂತರ ಮಾತನಾಡಿದ ನಿರ್ದೇಶಕರು ಇದು ಕೌಟುಂಬಿಕ ಕಥಾಹಂದರ ಒಳಗೊಂಡ ಎಮೋಷನಲ್ ಡ್ರಾಮಾ. ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ನೀಡಲಿದ್ದಾರೆ. ಶೀರ್ಷಿಕೆಯ ಬಗ್ಗೆ ಹೇಳುವುದಾದರೆ, ಶೀರ್ಷಿಕೆ ಜನರಿಗೆ ಆಪ್ತವಾಗಬೇಕು. ನನ್ನ ಹಿಂದಿನ ಎರಡೂ ಚಿತ್ರಗಳ ಶೀರ್ಷಿಕೆಗಳು ಹಾಗೇ ಇತ್ತು. ಇದು ಕೂಡ ಜನರಿಗೆ ಆಪ್ತವಾಗುತ್ತದೆ, ಜೊತೆಗೆ ಕಥೆ ಹಾಗೂ ಪಾತ್ರಗಳಿಗೂ ಪೂರಕವಾಗಿದೆ ಎಂದರು.

ನಾಯಕ ಗಣೇಶ್ ಮಾತನಾಡುತ್ತ ಮುಂಗಾರು ಮಳೆ 2006ರಲ್ಲಿ ಬಿಡುಗಡೆಯಾಗಿತ್ತು. ಈ ಇಪ್ಪತ್ತು ವರ್ಷಗಳು ಹೇಗೆ ಕಳೆಯಿತು ಅಂತಾ ಗೊತ್ತಾಗಲಿಲ್ಲ. ದೇವರು ನನಗೆ ಒಳ್ಳೆಯ ನಿರ್ಮಾಪಕರು, ನಿರ್ದೇಶಕರು, ಬರಹಗಾರರು ಹಾಗೂ ನಿಮ್ಮೆಲ್ಲರ ಪ್ರೀತಿ ಕೊಟ್ಟಿದ್ದಾನೆ. ಒಂದು ದಿನ ಸ್ನೇಹಿತರೊಬ್ಬರು ಕಾಲ್‌ಮಾಡಿ ನನ್ನ ಸ್ನೇಹಿತ ಒಂದು ಸ್ಕ್ರಿಪ್ಟ್ ಮಾಡಿದ್ದಾನೆ. ಅದು ನಿಮಗಾಗಿಯೇ ಮಾಡಿರುವ ಕಥೆಯಂತೆ ಎಂದರು. ನಾನು ಯಾರು ಅಂತ ಕೇಳಿದೆ. ರಾಮೇನಹಳ್ಳಿ ಜಗನ್ನಾಥ್, ಹೊಂದಿಸಿ ಬರೆಯಿರಿ ನಿರ್ದೇಶಕರು ಎಂದರು. ಹೌದಾ. ನಾನು ಆ ಸಿನಿಮಾ ನೋಡಿದ್ದೇನೆ ಬಹಳ ಚೆನ್ನಾಗಿದೆ ಅವರೊಬ್ಬ ಸೆನ್ಸಿಬಲ್ ರೈಟರ್. ಮನುಷ್ಯನ ಭಾವನೆಗಳನ್ನು ಚಿತ್ರದಲ್ಲಿ ತುಂಬಾ ಚೆನ್ನಾಗಿ ಹೇಳಿದ್ದಾರೆ ಅಂದೆ. ಆನಂತರ ಜಗನ್ನಾಥ ಅವರು ಬಂದು ಈ ಕಥೆ ಹೇಳಿದರು. ಕಥೆ ಕೇಳುವಾಗಲೇ ಸಂತೋಷದಲ್ಲಿ ಅಳು ಬಂತು. ಅಂತಹ ಅಪರೂಪದ ಕಥೆಯಿದು. ಕೌಟುಂಬಿಕ ಕಥಾಹಂದರ ಹೊಂದಿರುವ ಚಿತ್ರವಾದರೂ, ನೋಡುಗರಿಗೆ ಬೇಕಾದ ಎಲ್ಲಾ ಮನರಂಜನಾತ್ಮಕ ಅಂಶಗಳೂ ಚಿತ್ರದಲ್ಲಿವೆ. ನಿರ್ದೇಶಕರ ಹಿಂದಿನ ಎರಡು ಚಿತ್ರಗಳ ಶೀರ್ಷಿಕೆಗಳು ಬಹಳ ಚೆನ್ನಾಗಿತ್ತು. ನಮ್ಮ ಚಿತ್ರಕ್ಕೂ ಇಂತಹ ಶೀರ್ಷಿಕೆಯನ್ನೇ ಆಯ್ಕೆ ಮಾಡಿ ಎಂದು ಹೇಳಿದ್ದೆ. 'ತಮ್ಮ ಸುಖಾಗಮನ ಬಯಸುವ' ಎಂಬ ಎಲ್ಲರಿಗೂ ಪ್ರಿಯವಾಗುವ ಶೀರ್ಷಿಕೆ ಇಟ್ಟಿದ್ದಾರೆ. ಅರ್ಜುನ್ ಜನ್ಯ ಹಾಗೂ ನನ್ನ ಕಾಂಬಿನೇಶನ್‌ನಲ್ಲಿ ಸಾಕಷ್ಟು ಜನಪ್ರಿಯ ಹಾಡುಗಳು ಬಂದಿವೆ. ಈ ಚಿತ್ರದಲ್ಲೂ ಅದೇ ಥರದ ಹಾಡುಗಳಿರಲಿವೆ ಎಂದು ಹೇಳಿದರು.

ಎರಡು ಕಾಲಘಟ್ಟದ 'ಮತ್ತೆ ಮಳೆ ಹೊಯ್ಯುತ್ತಿದೆ' ಪ್ರೇಮಕಥೆ



ಮತ್ತೆ ಮಳೆ ಹೊಯ್ಯುತ್ತಿದೆ'. ಪರಮ್‌ಗುಬ್ಬಿ ಅವರ ನಿರ್ದೇಶನದ ಚಿತ್ರ. ಇತ್ತೀಚೆಗೆ ಈ ಚಿತ್ರದ 2 ಹಾಡುಗಳ ಬಿಡುಗಡೆ ಕಾರ್ಯಕ್ರಮ ನಡೆಯಿತು, 3 ದಶಕಗಳಿಂದ ಸಹಾಯಕ ಕಲಾನಿರ್ದೇಶಕರಾಗಿರುವ ಗಂಗಾಧರ್ ಈ ಚಿತ್ರದ ನಿರ್ಮಾಪಕರು, ಶೃತಿ ಅನಿಲ್ ಕುಮಾರ್ ಸಹ ನಿರ್ಮಾಪಕರು ಅಲ್ಲದೆ ಪ್ರಾಧ್ಯಾಪಕರ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅತಿಶಯ ಜೈನ್ ಅವರ ಸಂಗೀತ, ಶಾಂತಾರಾವ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಶಾಸಕ ಸಿ.ಎನ್.ಬಾಲಕೃಷ್ಣ ಹಾಗೂ ನಿರ್ದೇಶಕ ನಾಗಣ್ಣ ಸೇರಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಿರ್ಮಾಪಕರ ಮಗ ಜಿ.ಲಿಖಿತ್ ಮತ್ತು ರಂಗಭೂಮಿ ಹಿನ್ನಲೆಯ ಜಯವರ್ಧನ್ 'ಮತ್ತೆ ಮಳೆ ಹೊಯ್ಯುತ್ತಿದೆ'ಚಿತ್ರದ ಇಬ್ಬರು ನಾಯಕರಾಗಿ ನಟಿಸಿದ್ದು, ಸುಲಕ್ಷ್ಮ ಖೈರ, ಭೂಮಿಕ ಗೌಡ ನಾಯಕಿಯರಾಗಿ ಬಣ್ಣ ಹಚ್ಚಿದ್ದಾರೆ.

ಈ ಸಂದರ್ಭದಲ್ಲಿ ಪರಮ್ ಗುಬ್ಬಿ ಮಾತನಾಡುತ್ತ ಕೆ.ಸದಾಶಿವ ಅವರ 'ಮತ್ತೆ ಮಳೆ ಹೊಯ್ಯುತಿದೆ' ಎಂಬ ಕೃತಿಯನ್ನಾಧರಿಸಿ ಈ ಚಿತ್ರ ಮಾಡಿದ್ದೇವೆ, ಅವರಿಗೆ ನೀಡಬೇಕಾದ ಸಂಭಾವನೆಯನ್ನು ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ದತ್ತಿಯಾಗಿ ನೀಡಿ, ಪ್ರತಿವರ್ಷ ಸದಾಶಿವ ಅವರ ಹೆಸರಿನಲ್ಲಿ ಯುವಬರಹಗಾರರಿಗೆ ಪ್ರಶಸ್ತಿ ನೀಡಬೇಕೆಂದು ನಿರ್ಮಾಪಕರ ಜತೆ ಚರ್ಚಿಸಿ ತೀರ್ಮಾನಿಸಿದ್ದೇವೆ. ನಮ್ಮ ಚಿತ್ರದಲ್ಲಿ 1980 ಹಾಗೂ 2000ರ ಕಾಲಘಟ್ಟದಲ್ಲಿ ನಡೆಯುವ ಎರಡು ಪ್ರೇಮ ಕಥೆಗಳನ್ನು ಹೇಳಲಾಗಿದೆ, ಮೊದಲನೇ ಜೋಡಿಯ ಪ್ರೇಮಕತೆ ವಿಫಲವಾಗುತ್ತದೆ. ನಂತರ ಎರಡನೇ ಜೋಡಿಯ ಲವ್‌ಸ್ಟೋರಿ ಯಶಸ್ಸು ಕಾಣುತ್ತದೆ. ಇವೆರಡರ ನಡುವೆ ನಡೆಯುವ ಸನ್ನಿವೇಶಗಳು ವೀಕ್ಷಕರ ಮನವನ್ನು ಕದಡುತ್ತದೆ. ಮತ್ತೆ ಮಳೆ ಹೊಯ್ಯುತ್ತಿದೆ ಚಿತ್ರದಲ್ಲಿ ಮಳೆ ಕೂಡ ಮಹತ್ವದ ಪಾತ್ರವನ್ನು ನಿರ್ವಹಿಸಿದೆ. ಜತೆಗೆ ಅರ್ಥಪೂರ್ಣ ಸಂದೇಶ ಈ ಚಿತ್ರದಲ್ಲಿವೆ, ಶೃಂಗೇರಿ, ಹೊರನಾಡು, ಕೊಪ್ಪ, ಹರಿಹರಪುರ, ಆಗುಂಬೆಯಂಥ ಸುಂದರ ತಾಣಗಳಲ್ಲಿ ನಮ್ಮ ಚಿತ್ರದ ಚಿತ್ರೀಕರಣ ನಡೆಸಲಾಗಿದೆ ಎಂದು ಮಾಹಿತಿ ನೀಡಿದರು. ಚಂದ್ರಶೇಖರ ರೆಡ್ಡಿ, ಪ್ರಕಾಶ್‌ಮೂರ್ತಿ, ಕುಮಾರಿ ಸ್ವರ್ಣ, ಶೃತಿ, ದಿನಮಣಿ, ಕಾವ್ಯ ಕುಮಾರಿ ಈ ಚಿತ್ರದ ಉಳಿದ ಪಾತ್ರಗಳಲ್ಲಿದ್ದಾರೆ.

ಮೈಸೂರು ಮಿತ್ರ

ನಂ.ಗೂಡಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ



ನಂಜನಗೂಡಿನಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ನಡೆಯಿತು.

ನಂಜನಗೂಡು, ಫೆ19– ಛತ್ರಪತಿ ಶಿವಾಜಿ ಮಹಾರಾಜರು ವಿಜಯನಗರ ಸಾಮ್ರಾಜ್ಯ ಪತನದ ನಂತರ ಬಹುಮನಿ ಸುಲ್ತಾನರ ಆಳ್ವಿಕೆಯಲ್ಲಿ ನಲುಗಿದ್ದ ಜನರನ್ನು ಒಗ್ಗೂಡಿಸಿ ರಾಜ್ಯ ಕಟ್ಟಿದ ಮಹಾ ಪುರುಷ ಎಂದು ತಾಲೂಕು ಕ್ಷತ್ರೀಯ ಮರಾಠ ಪರಿಷತ್ ಅಧ್ಯಕ್ಷ ಕೆ.ಎನ್.ಕಾಶಿರಾವ್ ತಿಳಿಸಿದರು.

ನಗರದ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ಗುರುವಾರ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಯೋಜಿಸಿದ್ದ ಛತ್ರಪತಿ ಶಿವಾಜಿ ಮಹಾ ರಾಜರ ಜಯಂತಿಯಲ್ಲಿ ಮಾತನಾಡಿದ ಅವರು, ಶಿವಾಜಿ ಮಹಾರಾಜರು ದೇಶದ ಪ್ರಜೆಗಳು ಹೇಗೆ ಧೀರೋದತ್ತವಾಗಿ ಬದುಕಬೇಕು ಎಂಬುದನ್ನು ಕಲಿಸಿದ ಮಹಾಪುರುಷ. ಶಿವಾಜಿ ಮಹಾರಾಜರ ರಾಷ್ಟ್ರಪ್ರೇಮ, ಧರ್ಮ ನಿಷ್ಠೆ ಅಸದಳವಾದುದು. ಶಿವಾಜಿ ಅವರಿಗೆ ತಂದೆ ಶಹಾಜಿ ಭೋಂಸ್ಲೆ ಹಾಗೂ ತಾಯಿ ಜೀಜಾ ಬಾಯಿ ಧರ್ಮ ಗ್ರಂಥಗಳ ಪರಿಚಯ ಮಾಡಿಸಿ, ಧರ್ಮ ನಿಷ್ಠೆ ಕಲಿಸಿದರು. ಶಿವಾಜಿ ಮಹಾರಾಜರು ಹಿಂದೂ ಸಾಮ್ರಾಟರಾಗಿ ಮಾಡಿದ ಸಾಧನೆಯಿಂದಾಗಿ ಇತಿಹಾಸದಲ್ಲಿ ಉಳಿದಿದ್ದಾರೆ ಎಂದು ಹೇಳಿದರು.

ತಾಲೂಕು ರೈತ ಸಂಘದ ಅಧ್ಯಕ್ಷ ಸತೀಶ್ ರಾವ್ ಮಾತನಾಡಿ, ತಾಲೂಕಿನಲ್ಲಿ ಅಲ್ಪಸಂಖ್ಯಾತರಾಗಿರುವ ಮರಾಠ ಜನಾಂಗದ ಸಮುದಾಯ ಭವನ ನಿರ್ಮಿಸಲು ಸರ್ಕಾರ ನಿವೇಶನ ಮಂಜೂರು ಮಾಡಬೇಕು. ಕಳೆದ ಹಲವು ವರ್ಷಗಳಿಂದ ಸಮುದಾಯ ಭವನ ನಿರ್ಮಿಸಿ ಕೊಡುವಂತೆ ಮನವಿ ಸಲ್ಲಿಸಲಾಗಿದೆ. ಶಾಸಕ ದರ್ಶನ್ ಧ್ರುವನಾರಾಯಣ ಅವರು ನಮ್ಮ ಮನವಿ ಪುರಸ್ಕರಿಸಿ ಸಮುದಾಯ ಭವನಕ್ಕೆ ನಿವೇಶನ ಹಾಗೂ ನಿರ್ಮಾಣಕ್ಕೆ ಅನುದಾನ ನೀಡಿ ಸಹಕರಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಕ್ಷತ್ರೀಯ ಮರಾಠ ಪರಿಷತ್ ಗೌರವಾಧ್ಯಕ್ಷ ನಾರಾಯಣರಾವ್, ಪಾಪರಾವ್ ಧುರೆ, ಸತೀಶ್ ರಾವ್ ಧುರೆ, ಧರಣೀಂದ್ರ ರಾವ್, ಬಾಬು ರಾವ್ ಧುರೆ, ಮಂಜುನಾಥ್ ರಾವ್ ಮಗರ್, ರಘುರಾವ್ ಜಾಧವ್, ಶೀಲಾಪವಾರ್, ಚಂದ್ರಶೇಖರ್ ನರೋಟೆ, ಭೈರೋಜಿ ರಾವ್ ಜಾಧವ್, ಈಶ್ವರ್ ರಾವ್ ದೊಂಗ್ರೆ, ಮಜೋಜ್ ರಾವ್, ಜನಾರ್ಧನ್ ರಾವ್, ಶೇಖರ್‌ರಾವ್ ಖಂಡ್ಗರ್ ಉಪಸ್ಥಿತರಿದ್ದರು.

ಮೂಲ ಸೌಕರ್ಯದೊಂದಿಗೆ ಗ್ರಾಮದ ಸಮಸ್ಯೆ ಬಗೆಹರಿಸಿ

ಸಂಸದ ಸುನೀಲ್ ಬೋಸ್‌ಗೆ ಮುಸುವಿನಕೊಪ್ಪಲು ಗ್ರಾಮಸ್ಥರ ಮನವಿ



ಸಂಸದ ಸುನೀಲ್ ಬೋಸ್‌ಗೆ ಗ್ರಾಮಸ್ಥರು ಮನವಿ ಸಲ್ಲಿಸಿದರು.

ತಿ.ನರಸೀಪುರ, ಫೆ.19– ರಸ್ತೆ, ಚರಂಡಿ ಸೇರಿದಂತೆ ಅಗತ್ಯ ಮೂಲ ಸೌಕರ್ಯ ಕಲ್ಪಿಸುವ ಮೂಲಕ ಗ್ರಾಮದ ಸಮಸ್ಯೆಗಳನ್ನು ಬಗೆಹರಿಸುವಂತೆ ತಾಲೂಕಿನ ಮುಸುವಿನ ಕೊಪ್ಪಲು ಗ್ರಾಮಸ್ಥರು ಸಂಸದ ಸುನೀಲ್ ಬೋಸ್ ಅವರಿಗೆ ಮನವಿ ಸಲ್ಲಿಸಿದರು.

ಪಿಎಸಿಎಸ್ ಅಧ್ಯಕ್ಷ ಎಂ.ಶಿವರಾಮು ಅವರ ನಿವಾಸಕ್ಕೆ ಭೇಟಿ ನೀಡಿದ ಸಂಸದ ಸುನೀಲ್ ಬೋಸ್ ಅವರನ್ನು ಭೇಟಿ ಮಾಡಿದ ಗ್ರಾಮಸ್ಥರು ಗ್ರಾಮದಲ್ಲಿ ಸರಿಯಾದ ರಸ್ತೆಗಳಿಲ್ಲ. ಹದಗೆಟ್ಟಿರುವ ರಸ್ತೆ ದುರಸ್ತಿಗೊಳಿಸಬೇಕು. ಜೊತೆಗೆ ಚರಂಡಿ ನಿರ್ಮಿಸಿ ಕೊಡುವಂತೆ ಮನವಿ ಮಾಡಿದರು.

ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಿರ್ಮಾಣವಾಗಿ 80 ವರ್ಷ ಕಳೆದಿದ್ದು, ಇದೀಗ ದುಸ್ಥಿತಿಯಲ್ಲಿದೆ. ಅಲ್ಲದೇ ಆ ಕಟ್ಟಡ ಯಾವುದೇ ಸಂದರ್ಭ ಕುಸಿದು ಬೀಳುವ ಸಂಭವವಿದ್ದು, ಮಕ್ಕಳು ಮತ್ತು ಶಿಕ್ಷಕರು ಜೀವ ಕೈಯಲ್ಲಿಡಿದು ಪಾಠ ಕೇಳುವ ಮತ್ತು ಪಾಠ ಮಾಡುವ ಸ್ಥಿತಿಯಿದೆ. ಸಂಸದರ ನಿಧಿಯಿಂದ ಈ ಶಾಲೆಗೆ ಅಗತ್ಯವಿರುವ 8 ರಿಂದ 10 ಕೊಠಡಿಗಳನ್ನು ನಿರ್ಮಿಸಿಕೊಡಬೇಕೆಂದು ಕೋರಿದರು.

ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಸ್ವಂತ ಕಟ್ಟಡವಿಲ್ಲ. ಗ್ರಾಮದ ಯಾವುದೋ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಘಕ್ಕೆ ಸ್ವಂತ ಕಟ್ಟಡ ನಿರ್ಮಿಸಿಕೊಡಬೇಕೆಂದು ಕೋರಿದ ಗ್ರಾಮಸ್ಥರು ಗ್ರಾಮದಲ್ಲಿ ರೈತರು ಸುಗಂಧರಾಜ ಹೂ ಬೆಳೆಯುತ್ತಿದ್ದು, ದಳ್ಳಾಳಿಗಳ ಹಾವಳಿಯಿಂದ ರೈತರಿಗೆ ಅನ್ಯಾಯವಾಗುತ್ತಿದೆ. ಹೀಗಾಗಿ ಸಮೀಪದ ತುಂಬಲ ಮತ್ತು ಕೆಂಪಯ್ಯನ ಹುಂಡಿ ಗ್ರಾಮದಲ್ಲಿರುವ ಕಾರ್ಖಾನೆಯವರು ನೇರವಾಗಿ ಸುಗಂಧ ರಾಜ ಹೂ ಖರೀದಿಸುವ ವ್ಯವಸ್ಥೆ ಮಾಡಿ ಕೊಡುವ ಮೂಲಕ ರೈತರಿಗಾಗುತ್ತಿರುವ ಅನ್ಯಾಯ ತಡೆಯಬೇಕು ಎಂದು ಮನವಿ ಮಾಡಿದರು.

> ನಿಮ್ಮ ಸಮಸ್ಯೆಗಳು ನನ್ನ ಗಮನಕ್ಕೆ ಬಂದಿದೆ. ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಇದರೊಂದಿಗೆ ತಮ್ಮ ತಂದೆಯವರಾದ ಸಚಿವ ಡಾ.ಹೆಚ್.ಸಿ. ಮಹದೇವಪ್ಪನವರ ಗಮನಕ್ಕೆ ಈ ವಿಚಾರ ತಂದು ನಿಮ್ಮ ಮನವಿಗೆ ಸ್ಪಂದಿಸುತ್ತೇನೆ.
> – ಸುನೀಲ್ ಬೋಸ್, ಸಂಸದ.

ಈ ವೇಳೆ ಪಿಎಸಿಎಸ್ ಅಧ್ಯಕ್ಷ ಎಂ.ಶಿವರಾಮು, ಗ್ರಾಮಸ್ಥರಾದ ನಾಗೇಶ್, ಆನಂದ್, ರಾಜು, ಶರತ್‌ಕುಮಾರ್, ಗ್ರಾಮದ ಯಜಮಾನರಾದ ಪುಟ್ಟಮಾದಯ್ಯ, ಚಂದ್ರಪ್ಪ ನಾಗಣ್ಣ, ಕಾಳಪ್ಪ, ಸೋಮಣ್ಣ, ಶಿವಕುಮಾರ್, ಪುಟ್ಟಸ್ವಾಮಿ, ಕುಮಾರ, ಸಿದ್ದೇಗೌಡ, ದೊಡ್ಡಮಾದನಾಯಕ, ಗೋಪಿ, ಪ್ರಸನ್ನ, ಮಹದೇವಸ್ವಾಮಿ, ಪ್ರಭಾಕರ್ ಸೇರಿದಂತೆ ಇನ್ನಿತರರಿದ್ದರು.

ಸರ್ಕಾರಗಳು ತಂಬಾಕು ಬೆಳೆಗಾರರ ಸಮಸ್ಯೆಗೆ ಸ್ಪಂದಿಸಲಿ

ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಒತ್ತಾಯ



ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಮಾತನಾಡಿದರು.

ಹುಣಸೂರು, ಫೆ.19– ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಕಷ್ಟದಲ್ಲಿರುವ ತಂಬಾಕು ಬೆಳೆಗಾರರ ಸಮಸ್ಯೆಗೆ ಸ್ಪಂದಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಒತ್ತಾಯಿಸಿದರು.

ತಾಲೂಕಿನ ಕಟ್ಟೆಮಳಲವಾಡಿಯ ಡಿ.ದೇವರಾಜ ಅರಸು ಹರಾಜು ಮಾರುಕಟ್ಟೆಯಲ್ಲಿ ಬುಧವಾರ ರೈತರು ತಂಬಾಕು ಬೆಲೆ ಕುಸಿತ ಹಿನ್ನೆಲೆಯಲ್ಲಿ ಮಾರುಕಟ್ಟೆ ಬಂದ್ ಮಾಡಿ ರಸ್ತೆ ತಡೆದ ಹಿನ್ನೆಲೆಯಲ್ಲಿ ಗುರುವಾರ ಹರಾಜು ಮಾರುಕಟ್ಟೆಯ ರೈತ ಭವನದಲ್ಲಿ ರೈತರ ಸಮಸ್ಯೆ ಆಲಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಇದಕ್ಕೂ ನನಗೂ ಸಂಬಂಧವಿಲ್ಲ ಎಂಬಂತೆ ಕೇಂದ್ರದ ಕಡೆ ಬೊಟ್ಟು ಮಾಡುವುದು ಸರಿಯಲ್ಲ. ರಾಜ್ಯ ಸರ್ಕಾರ ರೈತರ ನೆರವಿಗೆ ಬರಬೇಕು. ಆ ಮೂಲಕ ಅವರ ಹಿತ ಕಾಯಬೇಕು. ಅಲ್ಲದೇ ತಂಬಾಕಿನಿಂದ ಬರುವ ತೆರಿಗೆಯಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ 500 ಕೋಟಿ ರೂ. ನೀಡುತ್ತಿದೆ. ಜೊತೆಗೆ ಕೇಂದ್ರ ಸರ್ಕಾರಕ್ಕೂ 3 ಸಾವಿರ ಕೋಟಿ ತೆರಿಗೆ ಹರಿದು ಬರುತ್ತಿದೆ. ಹೀಗಾಗಿ ಎರಡೂ ಸರ್ಕಾರಗಳು ರೈತರ ಬದುಕಿನ ಜೊತೆ ಚೆಲ್ಲಾಟವಾಡದೇ ಅವರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ಆಗ್ರಹಿಸಿದರು.

ಐಟಿಸಿ ಕಂಪನಿ ಉಳಿಯಲು ತಂಬಾಕು ಅವಶ್ಯಕ. ಅಲ್ಲದೇ ಆ ಕಂಪನಿಗಳು ವಹಿವಾಟು ನಡೆಸಲು ಸಾಧ್ಯವಿಲ್ಲ. ಹೀಗಾಗಿ ಮಾರುಕಟ್ಟೆ ಪ್ರಾರಂಭದ ವೇಳೆ ಇದ್ದ ಬೆಲೆ ಏಕಾಏಕಿ ಕುಸಿಯಲು ಕಾರಣವೇನು ಎಂದು ಪ್ರಶ್ನಿಸಿದ ಅವರು, ಕೇಂದ್ರ ಸರ್ಕಾರ ಖರೀದಿದಾರರಿಗೆ ಹೇರಿದ್ದ ತೆರಿಗೆ ಹಿಂಪಡೆದಿದೆ. ಆದರೂ ಕಂಪನಿ ಖರೀದಿದಾರರು ರೈತರಿಂದ ಕಡಿಮೆ ಬೆಲೆಗೆ ತಂಬಾಕು ಕೊಳ್ಳುವ ಹುನ್ನಾರ ನಡೆಸುತ್ತಿದ್ದಾರೆ ಎಂದರು.

ಈ ವೇಳೆ ಜಿಲ್ಲಾ ಪರಿಷತ್ ಮಾಜಿ ಸದಸ್ಯ ನಿಂಗರಾಜ ಮಲ್ಲಾಡಿ, ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್, ತಾಲೂಕು ಅಧ್ಯಕ್ಷ ಚಿಕ್ಕಣ್ಣ, ತಂಬಾಕು ಬೆಳೆಗಾರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಿವಣ್ಣ, ಕಾಪ್ ಕಮಿಟಿ ಅಧ್ಯಕ್ಷ ಪ್ರಭಾಕರ್, ರೈತ ಮುಖಂಡರಾದ ರಾಮೇಗೌಡ, ಸತೀಶ್, ಚಂದ್ರೇಗೌಡ, ಹರೀಶ್, ಸುರೇಶ್, ಹರೀಶ್, ಮಹೇಶ್, ಗಿರೀಶ್, ಪ್ರಸನ್ನ, ಸಂಪತ್, ಗೋಪಾಲ್, ಅಶೋಕ, ಶ್ರೀಧರ್, ಮಹದೇವ್, ನಂಜುಂಡೇಗೌಡ ಸೇರಿದಂತೆ ಸಾವಿರಕ್ಕೂ ಹೆಚ್ಚು ರೈತರಿದ್ದರು.

ಸರಗೂರಲ್ಲಿ ಆಶಾ ಕಾರ್ಯಕರ್ತರ ಕುಂದು ಕೊರತೆ ಸಭೆ



ಸರಗೂರಲ್ಲಿ ಆಶಾ ಕಾರ್ಯಕರ್ತರ ಕುಂದು ಕೊರತೆ ಸಭೆ ನಡೆಯಿತು.

ಸರಗೂರು, ಫೆ.19– ಪಟ್ಟಣದ ತಾಪಂ ಕಚೇರಿಯಲ್ಲಿ ಇಓ ಪ್ರೇಮ್ ಕುಮಾರ್ ಅಧ್ಯಕ್ಷತೆಯಲ್ಲಿ ಆಶಾ ಕಾರ್ಯಕರ್ತರ ಕುಂದು ಕೊರತೆ ಸಭೆ ನಡೆಯಿತು.

ತಾಲೂಕು ಆರೋಗ್ಯಾಧಿಕಾರಿ ಡಾ.ರವಿ ಕುಮಾರ್ ಮಾತನಾಡಿ, ಆಶಾ ಕಾರ್ಯಕರ್ತೆಯರ ಸಮಸ್ಯೆಗಳು, ಗೌರವಧನ ಮತ್ತು ಆರೋಗ್ಯ ಸೇವಾ ತೊಂದರೆಗಳ ಬಗ್ಗೆ ಚರ್ಚಿಸಿ ಪರಿಹಾರ ಕೈಗೊಳ್ಳಲಾಗುವುದು ಎಂದರು.

ಆಶಾ ಕಾರ್ಯಕರ್ತರ ಸಂಘದ ಅಧ್ಯಕ್ಷೆ ಭಾಗ್ಯ ಮಾತನಾಡಿ, ಎಲ್ಲಾ ಆಶಾ ಕಾರ್ಯಕರ್ತರಿಗೂ ಮೊಬೈಲ್ ಫೋನ್ ಕೊಡಿಸಬೇಕು. ಪ್ರತಿ ತಿಂಗಳು ಕಡ್ಡಾಯ ವಾಗಿ ಸಂಬಳ ನೀಡಬೇಕು. ಪ್ರತಿ ಪ್ರಾಥ ಮಿಕ ಆರೋಗ್ಯ ಕೇಂದ್ರದಿಂದ ಕಾರ್ಯ ಕರ್ತರಿಗೆ ನೋಟ್‌ಬುಕ್ ಮತ್ತು ವರದಿ ನಮೂನೆಗಳನ್ನು ನೀಡಬೇಕು. ಗೃಹ ಆರೋಗ್ಯ ಕಾರ್ಯಕ್ರಮಕ್ಕೆ ತಂಡ ರಚಿಸಿ ಕರ್ತವ್ಯ ನಿರ್ವಹಿಸಲು ಅನುವು ಮಾಡಿಕೊಡಬೇಕು ಎಂದರು.

ತಾಪಂ ಇಓ ಪ್ರೇಮ್ ಕುಮಾರ್ ಮಾತನಾಡಿ, ಪ್ರತಿ 3 ತಿಂಗಳಿಗೊಮ್ಮೆ ನಾವು ಆಶಾ ಕಾರ್ಯಕರ್ತರ ಕುಂದು ಕೊರತೆ ಸಭೆ ಮಾಡುತ್ತೇವೆ. ಯಾವುದೇ ಸಮಸ್ಯೆಗಳಿದ್ದರೆ ಬಗೆಹರಿಸೋಣ. ನಾವು ನಿಮ್ಮ ಜೊತೆಗೆ ಇದ್ದೇವೆ. ಆಶಾ ಕಾರ್ಯಕರ್ತರಿಗೆ ಮೊಬೈಲ್ ವಿತರಣೆ ಮಾಡುವ ಬಗ್ಗೆ ನಮಗೆ ಯಾವುದೇ ಆದೇಶ ಬಂದಿಲ್ಲ. ಮುಂದಿನ ದಿನಗಳಲ್ಲಿ ಆದೇಶ ಬಂದರೆ ಖಂಡಿತವಾಗಿ ಕೊಡಿಸುತ್ತೇವೆ. ಎಲ್ಲರೂ ಒಟ್ಟಾಗಿ ಕರ್ತವ್ಯ ನಿರ್ವಹಿಸೋಣ. ನಮ್ಮ ತಾಲೂಕಿಗೆ ಒಳ್ಳೆಯ ಹೆಸರು ತರೋಣ ಎಂದರು.

ಸಭೆಯಲ್ಲಿ ಪುರಸಭೆ ಮುಖ್ಯಾಧಿಕಾರಿ ಸಂತೋಷ್ ಕುಮಾರ್, ಸಿಡಿಪಿಓ ದೀಪ, ವೈದ್ಯಾಧಿಕಾರಿಗಳಾದ ಪಾರ್ಥಸಾರಥಿ, ಚಂದ್ರಶೇಖರ್, ರಾಜು, ರೋಹನ್, ಅಖಿಲ, ಬೃಂದ, ಜಿಲ್ಲಾ ಮಟ್ಟದ ಆಶಾ ಮೇಲ್ವಿಚಾರಕರಾದ ಪ್ರಿಯಾಂಕ, ರಂಜಿತಾ, ತಾಲೂಕು ಮೇಲ್ವಿಚಾರಕರಾದ ಶರಣಪ್ಪ, ಅರ್ಚನಾ, ರೇಖಾ, ರವಿರಾಜ್, ಆಶಾ ಕಾರ್ಯಕರ್ತರು ಹಾಜರಿದ್ದರು.

ಹುಣಸೂರು; ಬೈಕಿಗೆ ಲಾರಿ ಡಿಕ್ಕಿ: ಸ್ಥಳದಲ್ಲೇ ಇಬ್ಬರು ಸಾವು



ಹುಣಸೂರು, ಫೆ.19– ಗೂಡ್ಸ್ ಲಾರಿಯೊಂದು ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರರಿಬ್ಬರು ಸಾವನ್ನಪ್ಪಿರುವ ಘಟನೆ ಮೈಸೂರು–ಬಂಟ್ವಾಳ ಹೆದ್ದಾರಿ–275ರ ತಾಲೂಕಿನ ಕೊತ್ತೇಗಾಲ ಗೇಟ್ ಬಳಿ ಗುರುವಾರ ಸಂಜೆ ನಡೆದಿದೆ.

ಪಿರಿಯಾಪಟ್ಟಣ ತಾಲೂಕಿನ ಹೊಸ ಕೊಪ್ಪಲು ಗ್ರಾಮದ ನಿವಾಸಿ ಕಾಳೇಗೌಡರ ಪುತ್ರ ಸುರೇಶ್(63), ತಮ್ಮೇಗೌಡರ ಪುತ್ರ ಮಹದೇವ(52) ಸಾವನ್ನಪ್ಪಿದವರು.

ಸುರೇಶ್ ಅವರು ತಮ್ಮ ಬೈಕ್‌ನಲ್ಲಿ ಮಹದೇವ ಅವರೊಂದಿಗೆ ಹೊಸಕೊಪ್ಪಲು ಗ್ರಾಮದಿಂದ ಹುಣಸೂರಿಗೆ ಬರುತ್ತಿದ್ದ ವೇಳೆ ಕೋತ್ತೇಗಾಲ ಬಳಿ ಎದುರಿಗೆ ಬಂದ ಲಾರಿ ಡಿಕ್ಕಿ ಹೊಡೆದಿದೆ. ಡಿಕ್ಕಿ ರಭಸಕ್ಕೆ ತೀವ್ರವಾಗಿ ಗಾಯಗೊಂಡ ಸುರೇಶ್ ಹಾಗೂ ಮಹದೇವ ಸ್ಥಳದಲ್ಲೇ ಸಾವನ್ನಪ್ಪಿದರೇ, ಬೈಕ್ ಸುಟ್ಟು ಹೋಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು.

ಅಪಘಾತದಿಂದಾಗಿ ಹೆದ್ದಾರಿ ಸಂಚಾರ 1 ಗಂಟೆಗೂ ಹೆಚ್ಚು ಕಾಲ ಅಸ್ತವ್ಯಸ್ತಗೊಂಡಿತ್ತು ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕುಡಿಯುವ ನೀರಿಗೆ ಬರ: ಹೆಡತಲೆ ಗ್ರಾಪಂಗೆ ಮುತ್ತಿಗೆ



ಬಸವಟ್ಟಿಗೆ ಗ್ರಾಮಸ್ಥರು ಹೆಡತಲೆ ಗ್ರಾಪಂಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ನಂಜನಗೂಡು, ಫೆ.19– ತಾಲೂಕಿನ ಬಸವಟ್ಟಿಗೆ ಗ್ರಾಮದಲ್ಲಿ ಕುಡಿಯುವ ನೀರಿಗೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಸಮರ್ಪಕ ನೀರು ಪೂರೈಕೆ ಮಾಡುವಂತೆ ಆಗ್ರಹಿಸಿ ಗ್ರಾಮಸ್ಥರು ಹೆಡತಲೆ ಗ್ರಾಪಂಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಮಾಜಿ ಗ್ರಾಪಂ ಸದಸ್ಯ ಜವರಯ್ಯ ಮಾತನಾಡಿ, ಕಳೆದ 2 ವರ್ಷದಿಂದ ಕುಡಿ ಯುವ ನೀರಿಗಾಗಿ ಗ್ರಾಮಸ್ಥರು ಪರಿತಪಿ ಸುತ್ತಿದ್ದಾರೆ. 3 ದಿನಗಳಿಗೊಮ್ಮೆ ಅರ್ಧ ಗಂಟೆ ಮಾತ್ರ ನೀರು ಬಿಡುತ್ತಿದ್ದಾರೆ. ಇದ ರಿಂದ ಕುಡಿಯುವ ನೀರಿಗೆ ತೊಂದರೆ ಆಗಿದೆ. ಗ್ರಾಮದಲ್ಲಿ ಜಲಜೀವನ್ ಮಿಷನ್ ಪೈಪ್‌ಲೈನ್ ಅಳವಡಿಸಿ 2 ವರ್ಷವಾದರೂ ಕುಡಿಯುವ ನೀರು ಮಾತ್ರ ಸರಬರಾಜು ಆಗುತ್ತಿಲ್ಲ. ಸಮಸ್ಯೆ ಬಗೆಹರಿಸುವಂತೆ ಸಾಕಷ್ಟು ಬಾರಿ ಎಇಇ ಮನು, ಪಿಡಿಓ ರಾಜಶೇಖರ್ ಅವರಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಇತ್ತೀಚೆಗೆ ಕಸ ಸಂಗ್ರಹಣೆ ವಾಹನವು ಬರುತ್ತಿಲ್ಲ ಎಂದು ಆರೋಪಿಸಿದ ಅವರು, ಕೂಡಲೇ ನೀರಿಗೆ ಸಮಸ್ಯೆ ಬಗೆಹರಿಸಬೇಕು ಎಂದರು.

ಸ್ಥಳಕ್ಕೆ ತಾಪಂ ಇಓ ಆಗಮಿಸುವವರೆಗೆ ಹೋರಾಟ ನಿಲ್ಲಿಸುವುದಿಲ್ಲ. ಗ್ರಾಮಸ್ಥರ ಸಮಸ್ಯೆ ಬಗೆಹರಿಸಲು ಕಾಲಹರಣ ಮಾಡುತ್ತಿರುವ ಪಿಡಿಓ ರಾಜಶೇಖರ್ ಅವರನ್ನು ಈ ಕೂಡಲೇ ವರ್ಗಾವಣೆ ಮಾಡಿ ಶಿಸ್ತು ಕ್ರಮ ಕೈಗೊಳ್ಳಬೇಕು. ನೀರಿನ ಸಮಸ್ಯೆ ಬಗೆಹರಿಸಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಅಂಬೇಡ್ಕರ್ ಸೇನೆ ರಾಜ್ಯಾಧ್ಯಕ್ಷ ನಾಗೇಂದ್ರ, ದಸಂಸ ವಿಭಾಗೀಯ ಸಂಘಟನಾ ಸಂಚಾಲಕ ಪಿ.ಕೃಷ್ಣಮೂರ್ತಿ, ನಂದೀಶ್, ಪ್ರತಾಪ್ ಕುಮಾರ್, ಶಿವಮೂರ್ತಿ, ಮಹೇಂದ್ರ, ಚನ್ನಬಸಮ್ಮ, ಶಾಂತಮ್ಮ, ಗೌರಮ್ಮ, ನಾಗಮ್ಮ, ಮಹದೇವಸ್ವಾಮಿ, ಶಿವಣ್ಣ, ವೆಂಕಟಯ್ಯ, ಸೋಮಶೇಖರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಫೆ.23ರಿಂದ ಜೇಡಿಕಟ್ಟೆ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ

ಜಯಪುರದಲ್ಲಿ ಮುಖಂಡರೊಂದಿಗೆ ಶಾಂತಿ ಸಭೆ



ಸಭೆಯಲ್ಲಿ ಮಾವಿನಹಳ್ಳಿ ಎಸ್.ಸಿದ್ದೇಗೌಡ ಮಾತನಾಡಿದರು.

ಮೈಸೂರು, ಫೆ.19– ತಾಲೂಕಿನ ಜಯಪುರದಲ್ಲಿ ಫೆ.23, 24ರಂದು ಜೇಡಿಕಟ್ಟೆ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ನಡೆಯುವ ಹಿನ್ನೆಲೆಯಲ್ಲಿ ಜಯಪುರ ಠಾಣೆ ಎಸ್‌ಐ ಕಾಳೇಗೌಡರ ನೇತೃತ್ವದಲ್ಲಿ ಶಾಂತಿ ಸಭೆ ನಡೆಯಿತು.

ಜೇಡಿಕಟ್ಟೆ ಮಹದೇಶ್ವರ ದೇವಾಲಯ ಸಮಿತಿ ಅಧ್ಯಕ್ಷ ಮಾವಿನಹಳ್ಳಿ ಎಸ್.ಸಿದ್ದೇಗೌಡ ಮಾತನಾಡಿ, ಫೆ.23, 24ರಂದು ನಡೆಯುವ ಜಾತ್ರಾ ಮಹೋತ್ಸವದ ಬಗ್ಗೆ ಪೊಲೀಸರಿಗೆ ಸಮಗ್ರ ಮಾಹಿತಿ ನೀಡಿದರು.

3 ಗ್ರಾಮಗಳು ಸೇರಿ ಸೌಹಾರ್ದಯುತವಾಗಿ ಜಾತ್ರೆ ಆಚರಿಸುತ್ತೇವೆ. ವಿವಿಧೆಡೆಯಿಂದ ಜಾತ್ರೆಗೆ 25 ಸಾವಿರಕ್ಕೂ ಹೆಚ್ಚು ಜನ ಆಗಮಿಸುತ್ತಾರೆ. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಸೂಕ್ತ ಬಂದೋಬಸ್ತ್ ನೀಡಬೇಕೆಂದು ಮನವಿ ಮಾಡಿಕೊಂಡರು.

ಎಸ್‌ಐ ಕಾಳೇಗೌಡ ಮಾತನಾಡಿ, ಅನ್ನ ಸಂತರ್ಪಣೆ ಹಮ್ಮಿಕೊಂಡಿರುವುದರಿಂದ ಅಡುಗೆಯಲ್ಲಿ ಸ್ವಚ್ಛತೆ ಕಾಪಾಡಬೇಕು. ಶುದ್ಧ ಕುಡಿಯುವ ನೀರು ಒದಗಿಸಬೇಕು. ಅಪರಿಚಿತರಿಗೆ ಅಡುಗೆ ಕೋಣೆಗೆ ಅವಕಾಶ ನೀಡಬಾರದು. ಪಾರ್ಕಿಂಗ್‌ಗೆ ಸೂಕ್ತ ವ್ಯವಸ್ಥೆ ಕಲ್ಪಿಸಲಾಗುವುದು. ಆಂಬುಲೆನ್ಸ್ ಮತ್ತು ಅಗ್ನಿಶಾಮಕ ದಳ ವ್ಯವಸ್ಥೆ ಇರಲಿದ್ದು, ಭದ್ರತೆಗೆ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗುವುದು. 3 ಗ್ರಾಮಗಳ ಜನರು ಯಾವುದೇ ಗೊಂದಲ ಮಾಡಿಕೊಳ್ಳದೆ, ಸೌಹಾರ್ದಯುತವಾಗಿ ಜಾತ್ರೆ ನಡೆಸಬೇಕು. ಅಹಿತಕರ ಘಟನೆಗಳು ಕಂಡು ಬಂದರೆ ಸೂಕ್ತ ಕ್ರಮ ಜರುಗಿಸಲಾಗುವುದು. ದೇವಾಲಯ ಸಮಿತಿ ಸದಸ್ಯರು ಮತ್ತು ಸಾರ್ವಜನಿಕರು ಪೊಲೀಸರಿಗೆ ಸಹಕರಿಸಬೇಕು ಎಂದರು.

ಈ ವೇಳೆ ದೇವಾಲಯ ಸಮಿತಿ ಗೌರವಾಧ್ಯಕ್ಷರಾದ ಚೌಡೇಗೌಡ, ಕಾರ್ಯದರ್ಶಿ ನಾಗೇಶ್, ಸದಸ್ಯರಾದ ಚೌಡಚಾರಿ, ಎ.ದೇವಪ್ಪ, ನಾಗೇಗೌಡ, ಜವರನಾಯಕ, ಬಿ.ರೇಣುಕಾ, ಎಂ.ನಾಗರಾಜು, ಮಲ್ಲಪ್ಪ, ಪಿ.ಬಸವರಾಜು, ನಾಗರಾಜಪ್ಪ, ಬಸವಲಿಂಗಸ್ವಾಮಿ, ಬಸವರಾಜಪ್ಪ, ದೇವಪ್ಪ, ಚಿಕ್ಕಣ್ಣ ಶಿವಣ್ಣ ಮತ್ತು ಮುಖಂಡರು, ಪೊಲೀಸ್ ಸಿಬ್ಬಂದಿ ಭಾಗವಹಿಸಿದ್ದರು.

ನೇಣು ಬಿಗಿದ ಸ್ಥಿತಿಯಲ್ಲಿ ಯುವಕನ ಶವ ಪತ್ತೆ



ಮಲ್ಕುಂಡಿ, ಫೆ19– ನೇಣು ಬಿಗಿದ ಸ್ಥಿತಿಯಲ್ಲಿ ಯುವಕನ ಶವ ಪತ್ತೆಯಾಗಿರುವ ಘಟನೆ ನಂಜನಗೂಡು ತಾಲೂಕಿನ ಮಾದನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಮಹದೇವಸ್ವಾಮಿ ಅವರ ಪುತ್ರ ಸುರೇಶ್(21) ಆತ್ಮಹತ್ಯೆ ಮಾಡಿಕೊಂಡವರು. ಈತ ಕಡಕೊಳದ ಖಾಸಗಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಎನ್ನಲಾಗಿದೆ. ಬುಧವಾರ ರಾತ್ರಿ ಸುರೇಶ್ ತನ್ನ ಸ್ನೇಹಿತರೊಂದಿಗೆ ಗ್ರಾಮದ ಶಾಂತಪ್ಪ ಎಂಬುವರ ಜಮೀನಿನಲ್ಲಿ ಪಾರ್ಟಿ ಮಾಡಿದ್ದಾರೆ. ಆದರೆ ಇಂದು ಬೆಳಗ್ಗೆ ಆತನ ಶವ ಅದೇ ಜಮೀನಿನ ಮರದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹುಲ್ಲಹಳ್ಳಿ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಕೊಲೆ ಶಂಕೆ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಮೃತನ ತಾಯಿ ನೇತ್ರಾವತಿ ತನ್ನ ಮಗನ ಸಾವಿನ ಬಗ್ಗೆ ಸಂಶಯ ವ್ಯಕ್ತಪಡಿಸಿ, ನನ್ನ ಮಗ ಆತ್ಮಹತ್ಯೆ ಮಾಡಿಕೊಳ್ಳುವವನಲ್ಲ. ಹೀಗಾಗಿ ಆತನ ಸಾವಿನ ಬಗ್ಗೆ ತನಿಖೆ ನಡೆಸುವಂತೆ ಹುಲ್ಲಹಳ್ಳಿ ಠಾಣೆಗೆ ದೂರು ನೀಡಿದ್ದಾರೆ.

ನೇಮಕ



ಭೇರ್ಯ, ಫೆ.19– ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕಿನ ವೀರಶೈವ ಲಿಂಗಾಯತ ಸಮಾಜದ ಪ್ರಭಾವಿ ಮುಖಂಡ ಹಾಗೂ ತಾಲೂಕು ಶರಣು ಸಾಹಿತ್ಯ ಪರಿಷತ್ ಅಧ್ಯಕ್ಷ ಚಿಕ್ಕವಡ್ಡರಗುಡಿ ಗ್ರಾಮದ ಸಿ.ಪಿ.ರಮೇಶ್ ಕುಮಾರ್ ಅವರನ್ನು ಕೆಪಿಸಿಸಿ ಸದಸ್ಯರಾಗಿ ನೇಮಕ ಮಾಡಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆದೇಶ ಹೊರಡಿಸಿದ್ದಾರೆ.

ನಾಳೆ ರಾಜ್ಯ ರೈತ ಸಂಘದಿಂದ ಪ್ರತಿಭಟನೆ

ಹೆಚ್.ಡಿ.ಕೋಟೆ, ಫೆ.19– ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಫೆ.21ರಂದು ಪಟ್ಟಣದ ತಹಸೀಲ್ದಾರ್ ಕಚೇರಿ ಎದುರು ಕರ್ನಾಟಕ ರಾಜ್ಯ ರೈತ ಸಂಘ ಹೆಚ್.ಡಿ.ಕೋಟೆ ತಾಲೂಕು ಘಟಕದಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರೈತ ಸಂಘದ ಕಾರ್ಯದರ್ಶಿ ಬಸವರಾಜ್ ತಿಳಿಸಿದ್ದಾರೆ. ಪ್ರತಿಭಟನೆಯಲ್ಲಿ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಅವರು ಭಾಗವಹಿಸಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ರೈತ ಮುಖಂಡರು ಭಾಗವಹಿಸಬೇಕು ಎಂದು ಮನವಿ ಮಾಡಿದ್ದಾರೆ.

ಅಧಿಕಾರವಿಲ್ಲದೇ ಬುದ್ಧಿ ಭ್ರಮಣೆಯಾಗಿರುವುದರಿಂದ

ಹೆಚ್.ವಿಶ್ವನಾಥ್, ಪ್ರತಾಪ್‌ಸಿಂಹರಿಂದ ಡಾ.ಯತೀಂದ್ರ ಟೀಕೆ

ತಾಪಂ ಮಾಜಿ ಉಪಾಧ್ಯಕ್ಷ ಡಾ.ಬಿ.ಮರಯ್ಯ ವ್ಯಂಗ್ಯ



ಸಭೆಯಲ್ಲಿ ತಾಪಂ ಮಾಜಿ ಉಪಾಧ್ಯಕ್ಷ ಡಾ.ಬಿ.ಮರಯ್ಯ ಮಾತನಾಡಿದರು.

ತಿ.ನರಸೀಪುರ, ಫೆ.19– ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಹಾಗೂ ಮಾಜಿ ಸಂಸದ ಪ್ರತಾಪ್ ಸಿಂಹ ಅವರಿಗೆ ಅಧಿಕಾರವಿಲ್ಲದೇ ಬುದ್ಧಿ ಭ್ರಮಣೆಯಾಗಿರುವುದರಿಂದ ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಟೀಕಿಸುತ್ತಿದ್ದಾರೆ ಎಂದು ತಾಪಂ ಮಾಜಿ ಉಪಾಧ್ಯಕ್ಷ ಡಾ.ಬಿ.ಮರಯ್ಯ ವ್ಯಂಗ್ಯವಾಡಿದರು.

ಪುರಸಭೆ ವ್ಯಾಪ್ತಿಯ ಭೈರಾಪುರ ಗ್ರಾಮದ ದಂಡಿನ ಮಾರಮ್ಮ ದೇವಸ್ಥಾನದ ಬಳಿ ಗುರುವಾರ ನಡೆದ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಈ ಇಬ್ಬರೂ ಅಧಿಕಾರವಿಲ್ಲದ ನಾಯಕರು ಮುಖ್ಯಮಂತ್ರಿಗಳ ಸುಪುತ್ರರಾದ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಮೇಲೆ ದಿನಕ್ಕೊಂದು ಆರೋಪ ಮಾಡುತ್ತಿದ್ದು, ಅದರಲ್ಲಿ ಯಾವುದೇ ಹುರುಳಿಲ್ಲ. ಇಬ್ಬರೂ ಮುಖಂಡರು ಅಧಿಕಾರ ಕಳೆದುಕೊಂಡು ಹತಾಶರಾಗಿ ಮನೆಯಲ್ಲಿ ಕೆಲಸವಿಲ್ಲದೇ ಕುಳಿತಿರುವುದರಿಂದ ತಾವು ಯಾವಾಗಲೂ ಸುದ್ದಿಯಾಗಬೇಕೆಂಬ ಏಕೈಕ ಉದ್ದೇಶದಿಂದ ಡಾ.ಯತೀಂದ್ರ ಅವರ ಮೇಲೆ ಸುಖಾಸುಮ್ಮನೆ ಆರೋಪ ಹೊರಿಸುತ್ತಿದ್ದಾರೆ ಎಂದರು.

ನಮ್ಮ ಪಕ್ಷದಲ್ಲಿದ್ದ ವಿಶ್ವನಾಥ್ ಅವರನ್ನು ಈಗ ಪಕ್ಷದಿಂದ ಹೊರ ಹಾಕಲಾಗಿದೆ. ಈಗ ಅವರಿಗೆ ಏನು ಕೆಲಸವಿಲ್ಲ. ಅವರ ಮಾತಿಗೆ ಯಾವುದೇ ಮನ್ನಣೆ ನೀಡುವ ಅವಶ್ಯಕತೆ ಇಲ್ಲ. ಆದರೆ ಮಾಜಿ ಸಂಸದ ಪ್ರತಾಪ್ ಸಿಂಹ ಡಾ.ಯತೀಂದ್ರ ಅವರು ರಾಜ್ಯ ಸರ್ಕಾರದಲ್ಲಿ ಮುಖ್ಯಮಂತ್ರಿಯಂತೆ ದರ್ಬಾರ್ ನಡೆಸುತ್ತಿದ್ದಾರೆ ಎಂದು ಆರೋಪಿಸುತ್ತಿದ್ದಾರೆ. ಸಿದ್ದ ರಾಮಯ್ಯ ಅವರಿಗೆ ಮುಖ್ಯಮಂತ್ರಿಯಾಗಿ ಇಡೀ ರಾಜ್ಯದ ಸಮಸ್ಯೆ ಬಗೆಹರಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಕೆಲ ಜವಾಬ್ದಾರಿಗಳನ್ನು ಡಾ.ಯತೀಂದ್ರರಿಗೆ ನೀಡಿದ್ದಾರೆ. ಹೀಗಾಗಿ ಅವರು ದಿನ ಬೆಳಗಾದರೆ ಮನೆಯಲ್ಲಿ ಕೂರದೇ ಕಾಲಿಗೆ ಚಕ್ರ ಕಟ್ಟಿಕೊಂಡಂತೆ ಕ್ಷೇತ್ರದಲ್ಲಿ ಜನರನ್ನು ಭೇಟಿ ಮಾಡಿ ಜನರ ಕಷ್ಟ ಪರಿಹರಿಸುವ ಕೆಲಸ ಮಾಡುತ್ತಿದ್ದಾರೆ. ಅಂತಹ ನಾಯಕರ ಬಗ್ಗೆ ಟೀಕೆ ಮಾಡಬೇಕಾದರೆ ಎಚ್ಚರಿಕೆಯಿಂದ ಇರಬೇಕು. ಮುಂದಿನ ದಿನಗಳಲ್ಲಿ ಎಂಎಲ್‌ಸಿ ಡಾ.ಯತೀಂದ್ರ ಸಿಎಂ ಸಿದ್ದರಾಮಯ್ಯ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿದರೆ ನಿಮ್ಮ ವಿರುದ್ಧ ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ತಾಕತ್ತಿದ್ದರೆ ವರುಣದಲ್ಲಿ ನಿಂತು ಗೆಲ್ಲಲಿ: ಬಿಜೆಪಿಯಿಂದ ಟಿಕೆಟ್ ಪಡೆಯಲು ಸಾಧ್ಯವಾಗದೇ ತನ್ನ ಪಕ್ಷದಲ್ಲಿಯೇ ಮೂಲೆ ಗುಂಪಾಗಿರುವ ಪ್ರತಾಪ್ ಸಿಂಹ ಅವರು ತಮ್ಮ ಪಕ್ಷದ ಹೈಕಮಾಂಡ್ ಮೆಚ್ಚಿಸಲು ಕಾಂಗ್ರೆಸ್ ಪಕ್ಷದ ಮೇಲೆ ಆರೋಪ ಮಾಡುತ್ತಿದ್ದಾರೆ. ಏನೇ ಸರ್ಕಸ್ ಮಾಡಿದರೂ ಅವರಿಗೆ ಪಕ್ಷ ಟಿಕೆಟ್ ನೀಡಿಲ್ಲ. ಅವರ ಬದಲಿಗೆ ಮೈಸೂರು ಮಹಾರಾಜರಿಗೆ ಟಿಕೆಟ್ ಕೊಟ್ಟು ಗೆಲ್ಲಿಸಿಕೊಳ್ಳಲಾಗಿದೆ. ನಿಜವಾಗಿಯೂ ಪ್ರತಾಪ್ ಸಿಂಹ ಅವರಿಗೆ ತಾಕತ್ತಿದ್ದರೆ ಮುಂಬರುವ ಚುನಾವಣೆಯಲ್ಲಿ ವರುಣದಿಂದ ಸ್ಪರ್ಧಿಸಿ ಗೆಲುವು ಸಾಧಿಸಲಿ ಎಂದು ಸವಾಲು ಹಾಕಿದರು.

ಸಭೆಯಲ್ಲಿ ಯಜಮಾನರಾದ ಚಿಕ್ಕಲಿಂಗಯ್ಯ, ಚಿಕ್ಕನಂಜಯ್ಯ, ಮರಯ್ಯ(ಜವರಯ್ಯ), ಮಹದೇವ, ಎಸ್.ಮಾದಯ್ಯ, ಮಂಜು, ಚಿಕ್ಕರೆ ಮಹದೇವು, ಮೈಸೂರು ಮಹದೇವು, ಡಾ.ರಾಜೇಶ್, ಕುಮಾರ, ಅಶೋಕ್, ಕೇಬಲ್ ಶಿವು, ಸ್ವಾಮಿ, ಶಂಕರ, ರವಿ, ಅಪ್ಪು, ದೊರೆ ಮತ್ತಿತರರಿದ್ದರು.

ಸಿಲ್ಕ್ ಫಿಲೇಚರ್ ಆವರಣದಲ್ಲೇ ಕ್ರೀಡಾಂಗಣ ನಿರ್ಮಾಣವಾಗಲಿ

ತಿ.ನರಸೀಪುರ: ಸಿಎಂ ಸಿದ್ದರಾಮಯ್ಯ, ಸಚಿವ ಮಹದೇವಪ್ಪ, ಎಂಎಲ್‌ಸಿ ಡಾ.ಯತೀಂದ್ರ ಹಾಗೂ ಸಂಸದ ಸುನೀಲ್ ಬೋಸ್ ಅವರ ಪರಿಶ್ರಮದಿಂದ ಪಟ್ಟಣದ ಸಿಲ್ಕ್ ಫಿಲೇಚರ್ ಆವರಣದ 5 ಎಕರೆ ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸಲು 10 ಕೋಟಿ ರೂ.ಗಳ ಅನುದಾನ ಬಿಡುಗಡೆಯಾಗಿದೆ. ಕ್ಷೇತ್ರದ ಜನತೆ, ನೂರಾರು ಕ್ರೀಡಾಪಟುಗಳ ಬಹು ವರ್ಷಗಳ ಕನಸು ನನಸಾಗುವ ಕಾಲ ಸಮೀಪಿಸುತ್ತಿರುವಾಗ ಪರಿಸರವಾದಿಗಳು ಮರಗಳ ಹನನ ಮಾಡಿ ಕ್ರೀಡಾಂಗಣ ನಿರ್ಮಾಣ ಮಾಡುವುದು ಬೇಡ ಎಂಬ ಖ್ಯಾತೆ ತೆಗೆದಿದ್ದಾರೆ. ಪರಿಸರವಾದಿಗಳು ಎಂದು ಹೇಳಿಕೊಳ್ಳುವ ಇವರಿಗೆ ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ನೂರಾರು ಮರಗಳನ್ನು ಕಡಿದಾಗ ಪರಿಸರದ ಬಗ್ಗೆ ಇವರಿಗಿದ್ದ ಕಾಳಜಿ ಯಾಕೆ ಜಾಗೃತವಾಗಲಿಲ್ಲ. ಹೀಗಾಗಿ ಇಲ್ಲಿ ಕ್ರೀಡಾಂಗಣ ನಿರ್ಮಾಣವಾದರೆ ನೂರಾರು ಕ್ರೀಡಾಪಟುಗಳು ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗುವ ಜೊತೆಗೆ ಆಸುಪಾಸಿನ ಸ್ಥಳಗಳಿಗೆ ಬೇಡಿಕೆ ಉಂಟಾಗಲಿದ್ದು, ಇದೇ ಸ್ಥಳದಲ್ಲೇ ಆದಷ್ಟು ಬೇಗ ಕ್ರೀಡಾಂಗಣ ನಿರ್ಮಿಸಲು ರಾಜ್ಯ ಸರ್ಕಾರ ಮುಂದಾಗಬೇಕು ಎಂದು ಮರಯ್ಯ ಒತ್ತಾಯಿಸಿದರು.

ಅಂಗಡಿ ಬೀಗ ಒಡೆದು ಕಳ್ಳತನ



ಹೆಚ್.ಡಿ.ಕೋಟೆ, ಫೆ19– ಚಿಲ್ಲರೆ ಅಂಗಡಿ ಬೀಗ ಒಡೆದು ಒಳ ನುಗ್ಗಿರುವ ದುಷ್ಕರ್ಮಿಗಳು 20 ಸಾವಿರ ರೂ. ನಗದು ಸೇರಿದಂತೆ ದಿನಸಿ ಪದಾರ್ಥಗಳನ್ನು ಕಳವು ಮಾಡಿ ಪರಾರಿಯಾಗಿರುವ ಘಟನೆ ತಾಲೂಕಿನ ಭೋಗೇಶ್ವರ ಕಾಲೋನಿ ಗ್ರಾಮದಲ್ಲಿ ಗುರುವಾರ ಮುಂಜಾನೆ ನಡೆದಿದೆ. ಗ್ರಾಮದ ನಿವಾಸಿ ಮೂರ್ತಿ ಎಂಬುವರ ಚಿಲ್ಲರೆ ಅಂಗಡಿಯಲ್ಲಿ ಕಳವು ನಡೆದಿರುವುದು. ಬುಧವಾರ ರಾತ್ರಿ ಎಂದಿನಂತೆ ಅಂಗಡಿ ಬಾಗಿಲು ಹಾಕಿ ಮೂರ್ತಿ ಅವರು ಮನೆಗೆ ತೆರಳಿದ್ದರು. ಗುರುವಾರ ಮುಂಜಾನೆ ಅಂಗಡಿ ಬೀಗ ಒಡೆದು ಒಳ ನುಗ್ಗಿರುವ ದುಷ್ಕರ್ಮಿಗಳು ಹಣ ಹಾಗೂ ದಿನಸಿ ಪದಾರ್ಥಗಳನ್ನು ಕಳವು ಮಾಡಿ ಪರಾರಿಯಾಗಿದ್ದಾರೆ. ಮೂರ್ತಿ ಅವರು ಎಂದಿನಂತೆ ಅಂಗಡಿ ತೆರೆಯಲು ಬಂದ ವೇಳೆ ಕಳ್ಳತನ ನಡೆದಿರುವುದು ಬೆಳಕಿಗೆ ಬಂದಿದೆ.

ಅಂಗಡಿ ಮಾಲೀಕ ಮೂರ್ತಿ ಮಾತನಾಡಿ, ಆರೋಗ್ಯ ಸಮಸ್ಯೆಯಿಂದಾಗಿ ಬೇರೆ ಕೆಲಸ ಮಾಡಲು ಸಾಧ್ಯವಾಗದ ಕಾರಣ ಅಂಗಡಿ ತೆರೆದು ಜೀವನ ನಡೆಸುತ್ತಿದ್ದೆ. ಆದರೆ ಇದೀಗ ಅಂಗಡಿಯಲ್ಲಿ ಕಳ್ಳತನವಾಗಿರುವುದರಿಂದ ನನಗೆ ದಿಕ್ಕೇ ತೋಚದಂತಾಗಿದೆ. ಈ ಸಂಬಂಧ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದೇನೆ. ಪೊಲೀಸರು ದುಷ್ಕರ್ಮಿಗಳನ್ನು ಹಿಡಿದು ಸೂಕ್ತ ಕ್ರಮ ಕೈಗೊಳ್ಳಬೇಕು ಆಗ್ರಹಿಸಿದರು. ಈ ಸಂಬಂಧ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಹೆಚ್.ಆರ್.ವೆಂಕಟೇಶ್ ನಿಧನ



ಹುಣಸೂರು, ಫೆ.19– ನಗರದ ಕೊಲ್ಲಾಪುರದಮ್ಮ ಬೀದಿ ನಿವಾಸಿ, ಪುರಸಭೆ ಮಾಜಿ ಸದಸ್ಯ ಹೆಚ್.ಆರ್.ವೆಂಕಟೇಶ್(87) ಗುರುವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ನಗರದ ತಾಲೂಕು ಕಚೇರಿ ಪಕ್ಕದಲ್ಲಿರುವ ಚಿತಾಗಾರದಲ್ಲಿ ನಡೆಯಲಿದೆ.

ಕೆಎಸ್‌ಓಯು ಅಕ್ರಮ ಪ್ರಕರಣ ; ನಿವೃತ್ತ ನ್ಯಾ.ಬಿ.ಎ.ಪಾಟೀಲ್ ನೇತೃತ್ವದ

ಸತ್ಯ ಶೋಧನಾ ಸಮಿತಿಯಿಂದ ತನಿಖೆ ಆರಂಭ

ಮೈಸೂರು,ಫೆ.19(ಪಿಎಂ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ (ಕೆಎಸ್‌ಓಯು) ನಡೆದಿದೆ ಎನ್ನಲಾದ ಅಕ್ರಮಗಳ ಸಂಬಂಧ ಕರ್ನಾಟಕ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ.ಎ.ಪಾಟೀಲ್ ಅವರ ಅಧ್ಯಕ್ಷತೆಯ ಏಕವ್ಯಕ್ತಿ ಸತ್ಯಶೋಧನಾ ಸಮಿತಿಯು ತನಿಖೆ ಆರಂಭಿಸಿತು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಸದರಿ ಸಮಿತಿ ರಚಿಸಿ ತಿಂಗಳೊಳಗೆ ವರದಿ ನೀಡುವಂತೆ ಕೆಎಸ್‌ಓಯು ಕುಲಾಧಿಪತಿ ಗಳೂ ಆದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಜ.30ರಂದು ಅಧಿಸೂಚನೆ ಹೊರಡಿಸಿ ಆದೇಶಿಸಿದ್ದರು. ಈ ಹಿನ್ನೆಲೆಯಲ್ಲಿ ಸಮಿತಿ ಅಧ್ಯಕ್ಷ ನ್ಯಾ.ಬಿ.ಎ. ಪಾಟೀಲ್ ಬುಧವಾರ ನಗರದ ಕೆಎಸ್‌ಓಯುಗೆ ಭೇಟಿ ನೀಡಿ ತನಿಖೆ ಆರಂಭಿಸಿದರು.



ಬಿ.ಎ.ಪಾಟೀಲ್

ಏನೇನು ಆರೋಪ: ಮಂಜೂರಾದ ಹುದ್ದೆಗಳಿಗಿಂತ ಹೆಚ್ಚಿನ ತಾತ್ಕಾಲಿಕ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನೇಮಕಾತಿ ಮತ್ತು ಪದನಾಮಗಳ ಬದಲಾವಣೆ ಸೇರಿದಂತೆ ಅನೇಕ ಅಕ್ರಮಗಳು ನಡೆದಿವೆ ಎಂದು ಆರೋಪಿಸಲಾಗಿದೆ. ಅಲ್ಲದೆ, ಅನಗತ್ಯವಾಗಿ ಪ್ರಾದೇಶಿಕ ಕೇಂದ್ರಗಳನ್ನು ತೆರೆದಿರುವುದು ಮತ್ತು ಈ ಕೇಂದ್ರಗಳಿಗೆ ತಾತ್ಕಾಲಿಕ ನಿರ್ದೇಶಕರ ನೇಮಕಾತಿ ಮಾಡಿರುವುದು, ರಾಜ್ಯ ಸರ್ಕಾರ ಮತ್ತು ಕೆಎಸ್‌ಓಯು ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಇಲ್ಲದೆ ಹುದ್ದೆಗಳ ಸೃಷ್ಟಿಸಿರುವುದು, ನಿಯಮ ಬಾಹಿರವಾಗಿ ಖಾಸಗಿ ಅಧ್ಯಯನ ಕೇಂದ್ರಗಳನ್ನು ತೆರೆಯಲು ಅನುಮತಿ ನೀಡಿರುವುದು ಹಾಗೂ ನವದೆಹಲಿಯ ವರ್ಚುವಲ್ ಎಜುಕೇಷನ್ ಟ್ರಸ್ಟ್‌ಗೆ ನಿಯಮಬಾಹಿರವಾಗಿ 1.71 ಕೋಟಿ ರೂ. ಪಾವತಿ ಮಾಡಿರುವ ಆರೋಪ ಸಂಬಂಧ ತನಿಖೆ ಆರಂಭಿಸಲಾಗಿದೆ.

ಕೆಎಸ್‌ಓಯುನ ಈ ಹಿಂದಿನ ಕುಲಸಚಿವರ (ಆಡಳಿತ) ವಿರುದ್ಧ ಭ್ರಷ್ಟಾಚಾರ ಆರೋಪ ಕೇಳಿ ಬಂದಿತ್ತು. ಈ ಸಂಬಂಧ ವಿವಿ ನೌಕರರು ಸದರಿ ಕುಲಸಚಿವರ ವಿರುದ್ಧ ಅವರ ಕಚೇರಿ ಎದುರೇ ಪ್ರತಿಭಟನೆ ನಡೆಸಿದ್ದರು. ಇದು ಮಾಧ್ಯಮಗಳಲ್ಲಿ ಸುದ್ದಿಯಾಗಿತ್ತಲ್ಲದೆ, ವಿಧಾನಸಭೆಯಲ್ಲಿಯೂ ಚರ್ಚೆಯಾಗಿತ್ತು.

ಈ ವಿಚಾರವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದ ಕಾರಣ ಉನ್ನತ ಶಿಕ್ಷಣ ಇಲಾಖೆ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳ ನಿರ್ದೇಶನದಂತೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ ಉಪಾಧ್ಯಕ್ಷರೂ ಆದ ವಿಶ್ರಾಂತ ಕುಲಪತಿ ಪ್ರೊ.ಎಸ್. ಆರ್.ನಿರಂಜನ ಅವರು ಕೆಎಸ್‌ಓಯುಗೆ ಭೇಟಿ ನೀಡಿ ವಿವಿಧ ಕಡತಗಳನ್ನು ಅವಲೋಕಿಸಿ ಮಾಹಿತಿ ಕಲೆ ಹಾಕಿದ್ದರು.

ಇವರು ಪ್ರಾಥಮಿಕ ಹಂತದ ತನಿಖೆ ನಡೆಸಿ ಉನ್ನತ ಶಿಕ್ಷಣ ಇಲಾಖೆಗೆ ವರದಿ ಸಲ್ಲಿಸಿದ್ದರು. ಗಂಭೀರ ಲೋಪಗಳು ಆಗಿರುವುದನ್ನು ಸದರಿ ವರದಿಯಲ್ಲಿ ಉಲ್ಲೇಖಿಸಿರುವುದನ್ನು ರಾಜ್ಯಪಾಲರು ಹೊರಡಿಸಿರುವ ಅಧಿಸೂಚನೆಯಲ್ಲಿ ಪ್ರಸ್ತಾಪಿಸಲಾಗಿದೆ. ವರದಿಯ ಶಿಫಾರಸಿನ ಆಧಾರದಲ್ಲಿ ರಾಜ್ಯ ಸರ್ಕಾರವು ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆ ನಡೆಸಲು ಸಮಿತಿ ರಚಿಸಬೇಕೆಂದು ರಾಜ್ಯಪಾಲರನ್ನು ಕೋರಿತ್ತು. ಅದರಂತೆ ಸತ್ಯಶೋಧನಾ ಸಮಿತಿ ರಚಿಸಿ ತನಿಖೆಗೆ ನಿಯೋಜಿಸಲಾಗಿದೆ.

ಬೆಂಗಳೂರಿನ ಕುಮಾರಕೃಪಾ ಅತಿಥಿ ಗೃಹದಲ್ಲಿ ಸಮಿತಿಯ ಕಚೇರಿಯನ್ನು ತೆರೆದಿದ್ದು, ಅಲ್ಲಿಂದ ಅದು ಕಾರ್ಯ ನಿರ್ವಹಣೆ ಮಾಡಲಿದೆ. ಅಗತ್ಯ ಇರುವ ಸಂದರ್ಭದಲ್ಲಿ ಕರಾಮುವಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದೆ.

ವಿವಿಯಲ್ಲೇ ಸಮಿತಿ ಕಚೇರಿ ತೆರೆಯಬೇಕು: 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕರ್ನಾಟಕ ರಾಜ್ಯ ಮುಕ್ತ ವಿವಿ ಖಾಯಂ ಅಧ್ಯಾಪಕರ ಸಂಘದ ಕಾರ್ಯದರ್ಶಿ ಹಾಗೂ ಕೆಎಸ್‌ಓಯು ಸಾರ್ವಜನಿಕ ಆಡಳಿತ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಹೆಚ್.ಕೆ. ಜಗದೀಶ್ ಬಾಬು, ನವದೆಹಲಿಯ ವರ್ಚುವಲ್ ಎಜುಕೇಷನ್ ಟ್ರಸ್ಟ್‌ಗೆ ನಿಯಮ ಬಾಹಿರವಾಗಿ 1.71 ಕೋಟಿ ರೂ. ಪಾವತಿ ಮಾಡಿರುವ ಸಂಬಂಧ ನಾನು ಪ್ರತ್ಯೇಕ ದೂರು ನೀಡಿದ್ದೇನೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿವಿ ಖಾಯಂ ಅಧ್ಯಾಪಕರ ಸಂಘ ಹಾಗೂ ಖಾಯಂ ಬೋಧಕೇತರ ಸಂಘದಿಂದಲೂ ಅಕ್ರಮಗಳ ಸಂಬಂಧ ದೂರು ನೀಡಲಾಗಿದೆ. ಫೆ.25ರಂದು ಬೆಳಗ್ಗೆ 11ಕ್ಕೆ ಕೆಎಸ್‌ಓಯು ಆವರಣದಲ್ಲಿರುವ ಅತಿಥಿ ಗೃಹಕ್ಕೆ ಆರೋಪಗಳ ಸಂಬಂಧ ಪೂರಕ ದಾಖಲೆಗಳೊಂದಿಗೆ ಹಾಜರಿರುವಂತೆ ನನಗೆ ಸಮಿತಿ ನೋಟಿಸ್ ನೀಡಿದೆ. ರಾಜ್ಯಪಾಲರು ಸತ್ಯಶೋಧನಾ ಸಮಿತಿ ರಚಿಸಿರುವ ಅಧಿಸೂಚನೆ ಆಧಾರದಲ್ಲಿ ವಿವಿಯಿಂದಲೂ ಪ್ರತ್ಯೇಕ ಅಧಿ ಸೂಚನೆ ಹೊರಡಿಸಿ ಪ್ರಚಾರಪಡಿಸಿದ್ದರೆ, ತನಿಖೆಗೆ ಸಹಕಾರಿಯಾಗುತ್ತಿತ್ತು ಎಂದು ಹೇಳಿದರು.

ಜೊತೆಗೆ ಸಮಿತಿ ಕಚೇರಿಯನ್ನು ಕುಮಾರಕೃಪಾದಲ್ಲಿ ತೆರೆಯಲಾಗಿದೆ. ಆದರೆ ಕೆಎಸ್‌ಓಯುನಲ್ಲೇ ಸಮಿತಿ ಕಚೇರಿ ತೆರೆಯಬೇಕೆಂಬುದು ನಮ್ಮ ಬೇಡಿಕೆಯಾಗಿದೆ. ಅಕ್ರಮಗಳ ಸಂಬಂಧ ಪ್ರೊ.ಎಸ್.ಆರ್.ನಿರಂಜನ ಅವರು ನೀಡಿರುವ ವರದಿಯ ಪ್ರತಿ ನೀಡಬೇಕೆಂದು ಆರ್‌ಟಿಐ ಮುಖೇನ ಕೋರಿದ್ದರೂ ತನಿಖೆ ಹಂತವಿರುವ ಕಾರಣ ಕೊಡಲು ಸಾಧ್ಯವಿಲ್ಲ ಎಂದು ತಿಳಿಸಲಾಗಿದೆ ಎಂದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ಕಾ ದಿ ಫಾರೆಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
ಸರಳ ಸುಬ್ಬರಾವ್ (ಕ)	4 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭಗವತಿ (ತ)	4 ಪ್ರದರ್ಶನಗಳು
ಸಂಗಂ	
ಸೆಕೆಂಡ್ ಕೇಸ್ ಆಫ್ ಸೀತಾರಾಂ (ಕ) + ಆಲ್ಫಾ (ಕ)	2+2 ಪ್ರದರ್ಶನಗಳು
ಲಿಡೋ	
ಲ್ಯಾಂಡ್‌ಲಾರ್ಡ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಧರ್ಮಿಷ್ಠ (ಕ)	4 ಪ್ರದರ್ಶನಗಳು

ಜಾತ್ಯಾತೀತ ಪ್ರಗತಿಪರ ಮೈತ್ರಿಕೂಟ ಸೇರಿದ ಡಿಎಂಡಿಕೆ



ಎಲ್.ಕೆ. ಸುದೀಶ್, ಪ್ರೇಮಲತಾ ವಿಜಯಕಾಂತ್ ಡಿಎಂಕೆ ಅಧ್ಯಕ್ಷರೂ ಆಗಿರುವ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರನ್ನು ಭೇಟಿಯಾದರು.

ಚೆನ್ನೈ, ಫೆ19– ದೇಶೀಯ ಮುರ್ಪೋಕ್ಕು ದ್ರಾವಿಡ ಕಳಗಂ(ಡಿಎಂಡಿಕೆ) ಗುರುವಾರ ಅಧಿಕೃತವಾಗಿ ಡಿಎಂಕೆ ನೇತೃತ್ವದ ಜಾತ್ಯಾತೀತ ಪ್ರಗತಿಪರ ಮೈತ್ರಿಕೂಟ (ಎಸ್‌ಪಿಎ) ಸೇರ್ಪಡೆಯಾಗಿದೆ. ಇದರೊಂದಿಗೆ ವಾರಗಳ ರಾಜಕೀಯ ಊಹಾಪೋಹಗಳಿಗೆ ಅಂತ್ಯ ಹಾಡಿದೆ.

ಡಿಎಂಡಿಕೆ ಪ್ರಧಾನ ಕಾರ್ಯದರ್ಶಿ ಪ್ರೇಮಲತಾ ವಿಜಯಕಾಂತ್ ಮತ್ತು ಪಕ್ಷದ ಖಜಾಂಚಿ ಎಲ್.ಕೆ. ಸುದೀಶ್ ಅವರು ದ್ರಾವಿಡ ಮುನ್ನೇತ್ರ ಕಳಗಂ (ಡಿಎಂಕೆ) ಅಧ್ಯಕ್ಷರೂ ಆಗಿರುವ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರನ್ನು ಚೆನ್ನೈನ ಪಕ್ಷದ ಪ್ರಧಾನ ಕಚೇರಿ ಅಣ್ಣಾ ಅರಿವಲಯಂನಲ್ಲಿ ಭೇಟಿಯಾಗಿ ಎಸ್‌ಪಿಎ ಮೈತ್ರಿಕೂಟ ಸೇರಿದರು.

ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಮತ್ತು ಡಿಎಂಕೆ ಉಪ ಪ್ರಧಾನ ಕಾರ್ಯದರ್ಶಿ ಕನಿಮೋಳಿ ಕರುಣಾನಿಧಿ ಸೇರಿದಂತೆ ಎರಡೂ ಪಕ್ಷಗಳ ಹಿರಿಯ ನಾಯಕರು ಸಭೆಯಲ್ಲಿ ಹಾಜರಿದ್ದರು.

2005 ರಲ್ಲಿ ನಟ–ರಾಜಕಾರಣಿ ವಿಜಯಕಾಂತ್ ಸ್ಥಾಪಿಸಿದ ಡಿಎಂಡಿಕೆ, ಈ ಹಿಂದೆ ಯಾವತ್ತೂ ಡಿಎಂಕೆ ಜೊತೆ ಮೈತ್ರಿ ಅಥವಾ ಹೊಂದಾಣಿಕೆ ಮಾಡಿಕೊಂಡಿಲ್ಲ. ಡಿಎಂಡಿಕೆ, ಡಿಎಂಕೆ ಜೊತೆ ಕೈಜೋಡಿಸಿರುವುದು ಇದೇ ಮೊದಲು.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಸಿಎಂ ಸ್ಟಾಲಿನ್, ಡಿಎಂಡಿಕೆಯನ್ನು ಮೈತ್ರಿಕೂಟಕ್ಕೆ ಸ್ವಾಗತಿಸಿದ್ದಾರೆ. ಸದ್ಭಾವನೆಯ ಬಂಧವು ತಮಿಳುನಾಡಿನ ಪ್ರಗತಿ ಮತ್ತು ಸಮೃದ್ಧಿಗೆ ಕೊಡುಗೆ ನೀಡುವುದನ್ನು ಮುಂದುವರಿಸುತ್ತದೆ ಎಂದು ಹೇಳಿದ್ದಾರೆ.


ಬಾವಸಾರ್ ಕ್ಷತ್ರಿಯ ಮಂಡಳಿಯಿಂದ ಛತ್ರಪತಿ ಶಿವಾಜಿ ಜಯಂತಿ



ಮೈಸೂರು, ಫೆ.19– ಮೈಸೂರಿನ ಬಾವಸಾರ್ ಕ್ಷತ್ರಿಯ ಮಂಡಳಿ, ಬಿ.ವಿ.ಐ. ರಾಯಲ್ ಕ್ಲಬ್ ಮೈಸೂರು ವತಿಯಿಂದ ಛತ್ರಪತಿ ಶಿವಾಜಿ ಮಹಾರಾಜ್ ಅವರ 396ನೇ ಜಯಂತಿ ಆಚರಿಸಲಾಯಿತು.

ಈ ವೇಳೆ ಬಾವಸಾರ್ ಕ್ಷತ್ರಿಯ ಮಂಡಳಿ ಅಧ್ಯಕ್ಷ ಶಿವಾಜಿ ರಾವ್ ರಾಂಪುರೆ, ಎನ್.ಗಣೇಶ್ ಲಾಲಿಗೆ, ಗೌರ್ನರ್ ಬಿ.ವಿ.ಐ.ಏರಿಯಾ ರವೀಂದ್ರ ವುತ್ ನಿಕರ್, ಗೌರ್ನರ್ ಸೆಕ್ರೆಟರಿ ಬಾವುಸರ್, ರಾಯಲ್ ಕ್ಲಬ್ ತಿರುಪತಿ ರಾವ್, ಅಧ್ಯಕ್ಷ ಶೇಖರ್ ಸಿಂತ್ರೆ, ಕಾರ್ಯದರ್ಶಿ ಅರವಿಂದ್ ಕುಮಾರ್, ರೇಲೇಕರ್ ಖಜಾಂಚಿ ಉಮಾಕಾಂತ್ ಜಾದವ್, ಉಪಾಧ್ಯಕ್ಷ ಕೃಷ್ಣ ಮಾವತ್ಕರ್, ಸುಧಾ ಜಾದವ್, ನಾಗಲಕ್ಷ್ಮಿ, ವೊಡ್ಡೊನೆ ಬಾಬುರಾವ್, ರಾಜೇಶ್ ಕುತ್ನಿಕರ್, ಅರುಣ್ ಕುವಾರ್, ಶೇಖರ್, ಲೋಕೇಶ್ ಸಿಂತ್ರೆ, ಮಂಜುನಾಥ್ ಲಾಳಿಗೆ, ಗೋಪಾಲಕೃಷ್ಣ ಕುತ್ನಿಕರ್, ಡಾ.ಲಕ್ಷ್ಮಿನಾರಾಯಣರಾವ್, ಉಡಾಳೇ ರಘು, ವಕೀಲ ಶಿವರಾಜ್ ರಾವ್ ರೇಲೇಕರ್, ಬಿ.ವಿ.ಐ. ರಾಯಲ್ ಕ್ಲಬ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮಥುರಾದಲ್ಲಿ ಕಾಲುವೆಗೆ ಬಿದ್ದ ಕಾರು; ಮೂವರು ಸಹೋದರರು ಸೇರಿ ನಾಲ್ವರು ಸಾವು



ಮಥುರಾ, ಫೆ.19– ಉತ್ತರ ಪ್ರದೇಶದ ಮಥುರಾದಲ್ಲಿ ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ಕಾಲುವೆಗೆ ಬಿದ್ದಿದ್ದು, ಭೀಕರ ಅಪಘಾತದಲ್ಲಿ ಮೂವರು ಸಹೋದರರು ಸೇರಿದಂತೆ ನಾಲ್ವರು ಸಾವನ್ನಪ್ಪಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

ಪೊಲೀಸರ ಪ್ರಕಾರ, ಬುಧವಾರ ರಾತ್ರಿ ನಹ್ಲಾ ದೇವಿ ಸೇತುವೆಯ ಬಳಿ ಕಾರು ಮಹಮೂದ್‌ಪುರದಿಂದ ದೀಗ್‌ಗೆ ಪ್ರಯಾಣಿಸುತ್ತಿದ್ದಾಗ ಈ ಅಪಘಾತ ಸಂಭವಿಸಿದೆ.

ರಸ್ತೆಯಲ್ಲಿ ತೀಕ್ಷ್ಣವಾದ ತಿರುವು ಇದ್ದ ಕಾರಣ ಅತಿ ವೇಗದಲ್ಲಿ ಕಾರು ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ತಡೆ ಗೋಡೆಗೆ ಡಿಕ್ಕಿ ಹೊಡೆದು ಕಾಲುವೆಗೆ ಬಿದ್ದಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ(ಗ್ರಾಮೀಣ) ಸುರೇಶ್ ಚಂದ್ರ ರಾವತ್ ಹೇಳಿದ್ದಾರೆ.


ಸುಮಾರು ಆರು ಮೀಟರ್ ಅಗಲದ ಕಾಲುವೆಗೆ ಕಾರು ಬಿದ್ದಿದೆ. ಸ್ಥಳೀಯ ನಿವಾಸಿಗಳು ಸ್ಥಳಕ್ಕೆ ಧಾವಿಸಿ ಕಾರನ್ನು ಕಾಲುವೆಯಿಂದ ಹೊರತೆಗೆಯುವಲ್ಲಿ ಯಶಸ್ವಿಯಾದರು. ಆದರೆ ಅದರಲ್ಲಿದ್ದವರನ್ನು ಉಳಿಸಲು ಸಾಧ್ಯವಾಗಲಿಲ್ಲ. ನಂತರ ಅವರು ಪೊಲೀಸರಿಗೆ ಮಾಹಿತಿ ನೀಡಿದರು ಎಂದು ರಾವತ್ ತಿಳಿಸಿದ್ದಾರೆ.

ಪೊಲೀಸರು ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದಾರೆ ಎಂದು ಅವರು ಹೇಳಿದರು.

ಮೃತರನ್ನು ರಾಹುಲ್(23) ಮತ್ತು ಅವರ ಸೋದರಸಂಬಂಧಿಗಳಾದ ಅಮಿತ್ (23) ಮತ್ತು ಮೋಹಿತ್ (21) ಎಂದು ಗುರುತಿಸಲಾಗಿದ್ದು, ಎಲ್ಲರೂ ಮಹಾವನ್ ಪೊಲೀಸ್ ಠಾಣೆ ವ್ಯಾಪ್ತಿಯ ಬಲದೇವ್‌ಗಢ ನಿವಾಸಿಗಳು ಎನ್ನಲಾಗಿದೆ. ಮತ್ತೊಬ್ಬರ ಗುರುತು ಪತ್ತೆಯಾಗಿಲ್ಲ. ಆದರೆ ಅವರು ಇಪ್ಪತ್ತರ ಹರೆಯದವರೂ ಮತ್ತು ಈ ಮೂವರ ಸ್ನೇಹಿತ ಎಂದು ಪೊಲೀಸರು ತಿಳಿಸಿದ್ದಾರೆ.

ವೃತ್ತಿ ಯಾವುದೇ ಇರಲಿ ಕೌಶಲ್ಯತೆ ಆಧರಿಸಿ ಮಾಡಬೇಕು

ಲೇಖಕ ಡಾ. ವಿಪುಲ್ ಮಂಕಡ್ ಕಿವಿಮಾತು



ಲೇಖಕ ಡಾ.ವಿಪುಲ್ ಮಂಕಡ್ ತಮ್ಮ ಕೃತಿ 'ವೆನ್ ಸೈನ್ಸ್ ಮೀಟ್ಸ್ ಸೋಲ್' ಬಿಡುಗಡೆ ಮಾಡಿದರು.

ಮೈಸೂರು, ಫೆ.19(ವಿವಿಹೆಚ್)– ಭಗವದ್ಗೀತೆ ಹೇಳುವಂತೆ ವೈದ್ಯರಾಗಲಿ ಅಥವಾ ಯಾವುದೇ ವೃತ್ತಿಯಲ್ಲಿರಲಿ ನಮ್ಮ ಕೆಲಸವನ್ನು ಜ್ಞಾನ, ಕೌಶಲ, ಅನುಭವ ಬಳಸಿಕೊಂಡು ಮಾಡಬೇಕು. ಪ್ರತಿಫಲ ಏನೇ ಆದರೂ ಸ್ವೀಕರಿಸಿ ಮುಂದುವರಿಯಬೇಕು ಎಂದು ಲೇಖಕ ಡಾ. ವಿಪುಲ್ ಮಂಕಡ್ ಅಭಿಪ್ರಾಯಪಟ್ಟರು.

ವಾಣಿವಿಲಾಸ ಮೊಹಲ್ಲಾದ ದ ಸೊರೆಂಟೊ ಸಭಾಂಗಣದಲ್ಲಿ ಗುರುವಾರ ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ ತಮ್ಮ ಕೃತಿ 'ವೆನ್ ಸೈನ್ಸ್ ಮೀಟ್ಸ್ ಸೋಲ್' ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತದಲ್ಲಿ ಜನಿಸಿದ್ದರಿಂದಲೇ ಭಾರತೀಯರಾಗಿದ್ದೇವೆ. ಅನುವಂಶೀಯವಾಗಿ ನಾವು ಏನಾಗಿದ್ದೇವೋ ಅದಕ್ಕೆ ಪೂರ್ವಜರೂ ಕಾರಣ. ಇಲ್ಲಿನ ಪ್ರಕೃತಿಯು ವಂಶವಾಹಿಯನ್ನು ಪೋಷಿಸಿ, ಆಯ್ಕೆ ಮಾಡಿದೆ. ಎಲ್ಲ ಸಮುದಾಯಗಳ ನಡುವೆ ವೈವಾಹಿಕ ಸಂಬಂಧಗಳು ನಡೆದಿವೆ. ಆದರೆ 1,300 ವರ್ಷದಿಂದೀಚೆಗೆ ಜಾತಿ ಸಂಕೋಲೆಗಳು ಹೆಚ್ಚಾದವು ಎಂದು ಬೇಸರ ವ್ಯಕ್ತಪಡಿಸಿದರು.

ರಾಮಾಯಣ, ಮಹಾಭಾರತ ಕೂಡ ಎಲ್ಲರೂ ಒಂದೇ ಎಂದು ಹೇಳುತ್ತವೆ. ಬೆಸ್ತ ಸಮುದಾಯದ ವ್ಯಾಸ, ಬೇಡ ಸಮುದಾಯದ ವಾಲ್ಮೀಕಿ ಇವುಗಳನ್ನು ಬರೆದದ್ದು. ಜ್ಞಾನ, ಸೃಜನಶೀಲತೆಯು ಬ್ರಾಹ್ಮಣರಿಂದಲೇ ಹೊಮ್ಮಿಲ್ಲ ಪ್ರತಿಯೊಬ್ಬರಲ್ಲೂ ವೈಜ್ಞಾನಿಕ ಮನೋಭಾವ ಮೂಡಬೇಕು. ಎಲ್ಲರೂ ಮನುಷ್ಯರಾಗಬೇಕು ಎಂದರು.

ಭಾರತದಲ್ಲಿ ಉತ್ತರ–ದಕ್ಷಿಣ, ಮೇಲು ಕೀಳು, ಜಾತಿ ವರ್ಗ ತಾರತಮ್ಯ ಹೆಚ್ಚಾಗಿಯೇ ಇದೆ. ಅಮೆರಿಕದಲ್ಲೂ ಜನಾಂಗೀಯವಾದವಲ್ಲದೇ ರಾಷ್ಟ್ರೀಯತೆ, ಧಾರ್ಮಿಕತೆ ಹೆಸರಿನಲ್ಲಿ ತಾರತಮ್ಯವಿದೆ. ಮಾನವೀಯ ಗುಣವುಳ್ಳ ಒಳ್ಳೆಯ ಜನರು ಇದನ್ನು ಎದುರಿಸುವಂತಾಗಿದೆ ಎಂದರು.

ಲೇಖಕಿ ಡಾ..ನಳಿನಿ ಚಂದರ್ ಸಂವಾದ ನಡೆಸಿಕೊಟ್ಟರು. ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷೆ ಶುಭಾ ಸಂಜಯ್ ಅರಸ್, ಇಂಡಸ್ ಉದ್ಯಮಿಗಳ ಸಂಸ್ಥೆಯ (ಟಿಐಇ) ಮೈಸೂರು ವಿಭಾಗದ ಮುಖ್ಯಸ್ಥ ಭಾಸ್ಕರ್ ಕಳಲೆ ಉಪಸ್ಥಿತರಿದ್ದರು.

ಕ್ರಿಕೆಟ್ ಪಂದ್ಯದ ವೇಳೆ ಜೇನುನೊಣಗಳ ದಾಳಿ; ಅಂಪೈರ್ ಸಾವು, 15–20 ಆಟಗಾರರಿಗೆ ಗಾಯ!



ಮಾಣಿಕ್ ಗುಪ್ತಾ

ಕಾನ್ಪುರ, ಫೆ.19– ಉನ್ನಾವೊ ಜಿಲ್ಲೆಯಲ್ಲಿ ಕ್ರಿಕೆಟ್ ಪಂದ್ಯದ ವೇಳೆ ಜೇನುನೊಣಗಳ ಹಿಂಡು ದಾಳಿ ಮಾಡಿ 65 ವರ್ಷದ ಅಂಪೈರ್ ಸಾವಿಗೀಡಾಗಿದ್ದು, ಹಲವಾರು ಆಟಗಾರರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಬುಧವಾರ ಸಂಜೆ ಶುಕ್ಲಗಂಜ್ ಪ್ರದೇಶದ ಸಪ್ರು ಮೈದಾನದಲ್ಲಿ ಘಟನೆ ನಡೆದಿದ್ದು, ಪಂದ್ಯವನ್ನು ಆಯೋಜಿಸಿದ್ದ ಕಾನ್ಪುರ ಕ್ರಿಕೆಟ್ ಅಸೋಸಿಯೇಷನ್‌ನ ಉನ್ನತ ಪದಾಧಿಕಾರಿಯೊಬ್ಬರು ದೃಢಪಡಿಸಿದ್ದಾರೆ.

ಪೊಲೀಸ್ ಅಧಿಕಾರಿಗಳ ಪ್ರಕಾರ, ಕಾನ್ಪುರದ ಮಾಣಿಕ್ ಗುಪ್ತಾ ಅವರು ಕ್ರಿಕೆಟ್ ಪಂದ್ಯದ ಅಂಪೈರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾಗ ಜೇನುನೊಣಗಳ ಹಿಂಡು ಇದ್ದಕ್ಕಿದ್ದಂತೆ ದಾಳಿ ಮಾಡಿದೆ. ಈ ವೇಳೆ ಆಟಗಾರರು ಮತ್ತು ಮೈದಾನದಲ್ಲಿದ್ದ ಇತರರ ಮೇಲೆ ದಾಳಿ ಮಾಡಿವೆ.

ಆಟಗಾರರು ಮತ್ತು ಪ್ರೇಕ್ಷಕರು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಸ್ಥಳದಿಂದ ಓಡಿದ್ದಾರೆ. ಆದರೆ, ದಾಳಿಯಲ್ಲಿ ಗುಪ್ತಾ ಗಂಭೀರವಾಗಿ ಗಾಯಗೊಂಡು ಪ್ರಜ್ಞೆ ತಪ್ಪಿ ಬಿದ್ದಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಆರಂಭದಲ್ಲಿ ಅವರನ್ನು ಶುಕ್ಲಗಂಜ್‌ನ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು ಮತ್ತು ನಂತರ ಅವರ ಸ್ಥಿತಿ ಹದಗೆಟ್ಟ ಕಾರಣ ಕಾನ್ಪುರದ ಲಾಲಾ ಲಜಪತ್ ರಾಯ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ.

ಮತ್ತೊಬ್ಬ ಅಂಪೈರ್ ಮತ್ತು ಸುಮಾರು 15 ರಿಂದ 20 ಆಟಗಾರರಿಗೆ ಜೇನುನೊಣಗಳು ದಾಳಿ ಮಾಡಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾನ್ಪುರ ಕ್ರಿಕೆಟ್ ಅಸೋಸಿಯೇಷನ್‌ನ ಅಧ್ಯಕ್ಷ ಎಸ್.ಎನ್. ಸಿಂಗ್, ಉನ್ನಾವೊದಲ್ಲಿ ನಡೆದ ಕ್ರಿಕೆಟ್ ಪಂದ್ಯದ ಸಮಯದಲ್ಲಿ ಜೇನುನೊಣಗಳ ದಾಳಿಯಿಂದ ಅಂಪೈರ್ ಮಾಣಿಕ್ ಗುಪ್ತಾ ಸಾವಿಗೀಡಾಗಿದ್ದಾರೆ ಎಂದು ಸುದ್ದಿಸಂಸ್ಥೆ ಪಿಟಿಐಗೆ ತಿಳಿಸಿದ್ದಾರೆ.

ಗುಪ್ತಾ ಅವರನ್ನು ಆಸ್ಪತ್ರೆಗೆ ಸಾಗಿಸುವಾಗ, ಜೇನುನೊಣಗಳು ಇನ್ನೂ ಅವರ ಮುಖ ಮತ್ತು ದೇಹಕ್ಕೆ ಅಂಟಿಕೊಂಡಿದ್ದವು. ಇದು ದಾಳಿಯ ತೀವ್ರತೆಯನ್ನು ಒತ್ತಿಹೇಳುತ್ತದೆ ಎಂದು ಸಿಂಗ್ ಹೇಳಿದರು.

ಸಂಘದ ಪರವಾಗಿ ಹೃತ್ಪೂರ್ವಕ ಸಂತಾಪ ವ್ಯಕ್ತಪಡಿಸಿದ ಅವರು, ಈ ದುಃಖದ ಸಮಯದಲ್ಲಿ ದುಃಖಿತ ಕುಟುಂಬದೊಂದಿಗೆ ದೃಢವಾಗಿ ನಿಲ್ಲುವುದಾಗಿ ಹೇಳಿದರು.

ಕರ್ನಾಟಕ ಒನ್ ಕೇಂದ್ರಗಳಿಗೆ ಅರ್ಜಿ ಆಹ್ವಾನ

ಮೈಸೂರು, ಫೆ.19– ರಾಜ್ಯ ಸರ್ಕಾರದ ನೂತನ ಯೋಜನೆಗಳನ್ನು ಸೇವಾ ಸಿಂಧು ಪೋರ್ಟಲ್ ಮೂಲಕ ಅನುಷ್ಠಾನಗೊಳಿಸುತ್ತಿದ್ದು, ಮೈಸೂರು ಜಿಲ್ಲೆಯಲ್ಲಿ ಖಾಲಿ ಇರುವ ಕರ್ನಾಟಕ ಒನ್ ಕೇಂದ್ರಗಳಿಗೆ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಅರ್ಜಿಯನ್ನು ಹೆಗ್ಗಡದೇವನ ಕೋಟೆ ತಾಲೂಕಿನ ಹೆಗ್ಗಡದೇವನ ಕೋಟೆ ಪುರಸಭೆ, ಹುಣಸೂರು ನಗರ ಸಭೆ, ಮೈಸೂರು ತಾಲೂಕಿನ ಭೋಗಾದಿ ಪಟ್ಟಣ ಪಂಚಾಯಿತಿ, ಹೂಟಗಳ್ಳಿ ನಗರ ಸಭೆ, ಕಡಕೋಳ ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ, ಮೈಸೂರು ಮಹಾನಗರ ಪಾಲಿಕೆ, ಪಿರಿಯಾಪಟ್ಟಣ ಪುರಸಭೆ, ಸರಗೂರು ಪಟ್ಟಣ ಪಂಚಾಯಿತಿಗಳಲ್ಲಿ ಆಹ್ವಾನಿಸಲಾಗಿದೆ.

ಆಸಕ್ತಿ ಇರುವ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು (https://www.karnatakaone.gov.in/Public/Franchisee Terms) ನಲ್ಲಿ ಫೆಬ್ರವರಿ 16 ರಿಂದ ಮಾರ್ಚ್ 2ರ ಸಂಜೆ 8 ಗಂಟೆಯವರೆಗೆ ಆನ್ ಲೈನ್ ಮೂಲಕ ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ. ಇನ್ನಾವುದೇ ರೀತಿಯಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜವಾಬ್ದಾರಿಯುತ ಪತ್ರಿಕೋದ್ಯಮ ರಾಷ್ಟ್ರಾಭಿವೃದ್ಧಿಗೆ ಆಧಾರ

ಮಹಾರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ. ವಿ.ಷಣ್ಮುಗಂ ಅಭಿಮತ



ಮಹಾರಾಜ ಪದವಿ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಆಯೋಜಿಸಿದ್ದ 'ವೃತ್ತಿ ಅವಕಾಶಗಳು ಮತ್ತು ಉದ್ಯೋಗಾರ್ಹತಾ ಕೌಶಲ್ಯಗಳು' ಕುರಿತ ಕಾರ್ಯಾಗಾರದಲ್ಲಿ ಮಹಾರಾಜ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ವಿ. ಷಣ್ಮುಗಂ ಮಾತನಾಡಿದರು.

ಮೈಸೂರು, ಫೆ19(ಎಂಟಿವೈ)– ಸಮಾಜದ ದಿಕ್ಕನ್ನು ನಿರ್ಧರಿಸುವ ಶಕ್ತಿಯುಳ್ಳ ಪತ್ರಿಕೆಗಳು ಜನರಿಗೆ ಒಳಿತಾಗುವ ಸಕಾರಾತ್ಮಕ ಸುದ್ದಿಗಳಿಗೆ ಆದ್ಯತೆ ನೀಡಬೇಕು ಎಂದು ಮಹಾರಾಜ ಕಾಲೇಜು ಪ್ರಾಂಶುಪಾಲ ಪ್ರೊ.ವಿ. ಷಣ್ಮುಗಂ ಸಲಹೆ ನೀಡಿದ್ದಾರೆ.

ಮೈಸೂರಿನ ಮಹಾರಾಜ ಪದವಿ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ರೂಸಾ 2.0 ಯೋಜನೆಯ ಅಡಿಯಲ್ಲಿ ಆಯೋಜಿಸಿದ್ದ 'ವೃತ್ತಿ ಅವಕಾಶಗಳು ಮತ್ತು ಉದ್ಯೋಗಾರ್ಹತಾ ಕೌಶಲ್ಯಗಳು' ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪತ್ರಿಕೋದ್ಯಮವು ಸಮಾಜದ ದಿಕ್ಕನ್ನು ರೂಪಿಸುವ ಶಕ್ತಿಯುತ ಮಾಧ್ಯಮವಾಗಿದ್ದು, ಉತ್ತಮ ಪತ್ರಿಕೆ ಜನಮನ ಸೆಳೆಯುವ ಮೂಲಕ ಸಮಾಜವನ್ನು ಸಕಾರಾತ್ಮಕವಾಗಿ ರೂಪಿಸುತ್ತದೆ. ಸುಳ್ಳು ಅಥವಾ ದಾರಿ ತಪ್ಪಿಸುವ ಮಾಹಿತಿಯನ್ನು ನೀಡುವ ಪತ್ರಿಕೆಗಳು ಸಮಾಜದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ. ಹೀಗಾಗಿ ಜವಾಬ್ದಾರಿಯುತ ಪತ್ರಿಕೋದ್ಯಮವು ರಾಷ್ಟ್ರದ ಅಭಿವೃದ್ಧಿಗೆ ಆಧಾರವಾಗಿವೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ತಮ್ಮ ಸಂವಹನ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು ಅತ್ಯವಶ್ಯಕವಾಗಿದ್ದು, ಅದು ವ್ಯಕ್ತಿತ್ವ ವಿಕಾಸಕ್ಕೂ ದಾರಿಯಾಗುತ್ತದೆ. ಅಲ್ಲದೆ, ಪತ್ರಿಕೋದ್ಯಮದ ವಿದ್ಯಾರ್ಥಿಗಳು ಭಾಷೆಯ ಮೇಲೆ ದೃಢವಾದ ಹಿಡಿತ ಮತ್ತು ಕೌಶಲ್ಯಾಭಿವೃದ್ಧಿ ಹೊಂದಿದ್ದರೆ ವೃತ್ತಿಜೀವನದಲ್ಲಿ ಯಶಸ್ಸು ಗಳಿಸಬಹುದು ಎಂದು ಅಭಿಪ್ರಾಯಪಟ್ಟರು.

ಕಾರ್ಯಾಗಾರದಲ್ಲಿ ಮೈಸೂರು ವಿಶ್ವವಿದ್ಯಾಲಯದ ಐಕ್ಯೂಎಸಿ ಸಂಯೋಜಕ ಡಾ.ಜೆ.ಲೋಹಿತ್ 'ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಭಾಷಾ ಪ್ರಾವೀಣ್ಯತೆ ಮತ್ತು ಪರಿಣಾಮಕಾರಿ ಸಂವಹನ ಕೌಶಲ್ಯಗಳ ಅಗತ್ಯತೆ' ಕುರಿತು ವಿವರಿಸಿದರು. ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕ ಜಿ.ಜಡಿಯಪ್ಪ 'ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಕ್ಷೇತ್ರದಲ್ಲಿ ಲಭ್ಯವಿರುವ ವಿವಿಧ ಉದ್ಯೋಗಾವಕಾಶ'ಗಳ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ತತ್ವಶಾಸ್ತ್ರ ವಿಭಾಗದ ಅಧ್ಯಾಪಕ ಡಾ. ಬಸವರಾಜು ಕೆ. ಎನ್. ಸಂವಿಧಾನ ಪೀಠಿಕೆ ಬೋಧಿಸಿದರು. ಯೋಗಶ್ರೀ ಮತ್ತು ಚಂದ್ರಕಲಾ ಪ್ರಾರ್ಥಿಸಿದರು. ಮಹದೇವ ಪ್ರಸಾದ್ ಸ್ವಾಗತಿಸಿದರು, ನಂದೀಶ ವಂದಿಸಿದರು. ಎಂ.ಕೆ.ಕೀರ್ತನಾ ಮತ್ತು ಪಿ.ದೀಕ್ಷಾ ನಿರೂಪಿಸಿದರು. ವಿಭಾಗದ ಅಧ್ಯಾಪಕರಾದ ಡಾ. ಗೋಪಾಲ, ಡಾ. ಶ್ವೇತ ಎಂ. ಹನ್ಸ್, ಕೇಶವಮೂರ್ತಿ, ಡಾ.ನವೀನ ಎನ್. ಹಾಗೂ ಇತರ ವಿಭಾಗಗಳ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಆಂಧ್ರದಲ್ಲಿ ಕೆ.ಜಿ. ತಂಬಾಕಿಗೆ 412 ರೂ., ಕರ್ನಾಟಕದಲ್ಲಿ ರೂ.260!

ಕೇಂದ್ರ ಸರ್ಕಾರದ ನಡೆಗೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಕಿಡಿ



ಮೈಸೂರಿನ ಪಿರಿಯಾಪಟ್ಟಣದ ಕಗ್ಗುಂಡಿಯಲ್ಲಿರುವ ತಂಬಾಕು ಮಾರುಕಟ್ಟೆಗೆ ಗುರುವಾರ ಭೇಟಿ ನೀಡಿದ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ರೈತರ ಹೋರಾಟಕ್ಕೆ ಬೆಂಬಲ ನೀಡಿದರು.

ಮೈಸೂರು, ಫೆ.19(ಬಿಎಲ್ ಯು)– ಆಂಧ್ರಪ್ರದೇಶದಲ್ಲಿ ಒಂದು ಕೆ.ಜಿ. ತಂಬಾಕು 472 ರೂಪಾಯಿಗಳಿಗೆ ಹರಾಜಾಗುತ್ತಿದ್ದರೆ, ಕರ್ನಾಟಕದಲ್ಲಿ 260 ರೂಪಾಯಿಗೆ ಮಾರಾಟವಾಗುತ್ತಿದೆ. ಇದರಿಂದ ರೈತರಿಗೆ 212 ರೂಪಾಯಿ ನಷ್ಟವಾಗುತ್ತಿದೆ. ಈ ಸಮಸ್ಯೆ ಪರಿಹಾರ ಮಾಡಲು ರಾಜ್ಯ ಸಂಸದರು ವಿಫಲರಾಗಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ಮೈಸೂರಿನ ಪಿರಿಯಾಪಟ್ಟಣದ ಕಗ್ಗುಂಡಿಯಲ್ಲಿರುವ ತಂಬಾಕು ಮಾರುಕಟ್ಟೆಗೆ ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಜೊತೆ ಭೇಟಿ ನೀಡಿ ನ್ಯಾಯಕ್ಕಾಗಿ ಹೋರಾಟ ಮಾಡುತ್ತಿರುವ ರೈತರನ್ನು ಭೇಟಿ ಮಾಡಿ ಬೆಂಬಲ ಸೂಚಿಸಿದರು.

ಈ ವೇಳೆ ಮಾತನಾಡಿದ ಲಕ್ಷ್ಮಣ್, ಒಂದು ಕೆ.ಜಿ. ತಂಬಾಕು ಬೆಳೆಯಲು ಕನಿಷ್ಠ 280 ವೆಚ್ಚವಾಗುತ್ತಿದ್ದರೆ, ಇಲ್ಲಿನ ರೈತರಿಗೆ 260 ರೂಪಾಯಿ ಬೆಲೆ ನೀಡುತ್ತಿದ್ದಾರೆ. ಇದರಿಂದ ತಂಬಾಕು ಬೆಳೆಯುವ ರೈತರು ಆರ್ಥಿಕ ಸಂಕಷ್ಟಕ್ಕೊಳಗಾಗಿದ್ದಾರೆ ಎಂದು ತಿಳಿಸಿದರು.

ಕಂಪನಿಗಳು ಹೇಳಿದ ರೀತಿಯಲ್ಲಿ ಹರಾಜು ಪ್ರಕ್ರಿಯೆ ನಡೆಯುತ್ತಿದೆ. ಅಧಿಕಾರಿಗಳು ಕಂಪನಿಗಳ ಜೊತೆ ಶಾಮೀಲಾಗಿದ್ದಾರೆ ಎಂದು ಆಪಾದಿಸಿದರು.

ಈ ಹಿಂದೆ ಇದ್ದ ಜಿಎಸ್ ಟಿ ಶೇಕಡ 28 ರಿಂದ 40 ರಷ್ಟು ಹೆಚ್ಚಾಗಿದೆ. ಒಟ್ಟಾರೆ ಕೇಂದ್ರ ಸರ್ಕಾರದ ಧೋರಣೆಯಿಂದ ರೈತರು ಬವಣೆ ಪಡುವಂತಾಗಿದೆ ಎಂದು ಲಕ್ಷ್ಮಣ್ ಆರೋಪಿಸಿದರು.

ಈ ವೇಳೆ ಪಶು ಸಂಗೋಪನಾ ಸಚಿವ ವೆಂಕಟೇಶ್ ಅವರು ತಂಬಾಕು ಮಂಡಳಿ ವ್ಯವಸ್ಥಾಪಕ ನಿರ್ದೇಶಕರ ಜೊತೆ ದೂರವಾಣಿಯಲ್ಲಿ ಮಾತನಾಡಿದರು. ಕಂಪನಿಗಳು ನಮ್ಮೊಡನೆ ಸಹಕರಿಸುತ್ತಿಲ್ಲ, ನಾವು ಕರೆಯುವ ಸಭೆಗೆ ಬರುವುದಿಲ್ಲ ಎಂದು ವ್ಯವಸ್ಥಾಪಕ ನಿರ್ದೇಶಕರು ಸ್ಪಷ್ಟಪಡಿಸಿದರು ಎಂದು ತಿಳಿಸಿದರು.

ತಮಗೆ ನ್ಯಾಯ ಸಿಗುತ್ತಿಲ್ಲವೆಂದು ರೈತರು ಕಳೆದ ಎರಡು ದಿನಗಳಿಂದ ಮಾರುಕಟ್ಟೆ ಬಂದ್ ಮಾಡಿ ಪ್ರತಿಭಟನೆ ನಡೆಸುತ್ತಿದ್ದಾರೆ. ಈಗಲಾದರೂ ಕೇಂದ್ರ ಸರ್ಕಾರ ಕರ್ನಾಟಕದ ರೈತರ ಹಿತ ಕಾಯುವ ನಿಟ್ಟಿನಲ್ಲಿ ಕ್ರಮಕ್ಕೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ಮೋಡಿ ಮಾಡಿದ ವೃತ್ತಿಪರರ ಸುಮಧುರ ಗಾಯನ

ಮೈಸೂರು ರಿದಮ್ಸ್‌ನಿಂದ ಬಹುಭಾಷಾ ಚಲನಚಿತ್ರಗೀತೆಗಳ ರಸಸಂಜೆ



ಮೈಸೂರು, ಫೆ.19– ಮೈಸೂರು ರಿದಮ್ಸ್ ಕರೋಕೆ ಕ್ಲಬ್ ವತಿಯಿಂದ ನಗರದ ಜೆಎಲ್ ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ 'ಸಂಗೀತದ ಅಲೆಗಳ ಮೇಲೆ ಪ್ರೀತಿಯ ಪಯಣ' ಶೀರ್ಷಿಕೆಯಲ್ಲಿ ಬಹುಭಾಷಾ ಚಲನಚಿತ್ರಗೀತೆಗಳ ರಸಸಂಜೆ– ಸೀಸನ್ 3 ಕಾರ್ಯಕ್ರಮ ಗುರುವಾರ ನಡೆಯಿತು.

ಸಾಫ್ಟ್‌ವೇರ್ ಉದ್ಯೋಗಿಗಳಾದ ಎಸ್. ಅಮರ್, ಅಶ್ವಿನ್ ಅತ್ರಿ, ರವಿಕುಮಾರ್, ಪ್ರಾಧ್ಯಾಪಕ ಪ್ರಕಾಶ್, ಕಿವಿ, ಮೂಗು, ಗಂಟಲು ತಜ್ಞೆ ಡಾ.ಎಲ್. ಸುಮಾ, ನೇತ್ರ ತಜ್ಞ ಡಾ.ಬಾಲಕಿರಣ್, ಗುತ್ತಿಗೆದಾರ ಅಶ್ವತ್ಥ್ ನಾರಾಯಣ್, ಅಬ್ಕಾರಿ ಇಲಾಖೆ ನಿವೃತ್ತ ಉಪ ಆಯುಕ್ತ ವೆಂಕಟೇಶ್ ಪದಕಿ, ಸಹಾಯಕ ಪ್ರಾಧ್ಯಾಪಕಿ ಶರಣ್ಯ, ಮೆಡಿಕಲ್ ಟ್ರಾನ್ಸ್ ಸ್ಕ್ರಿಪ್ಷನಿಸ್ಟ್ ಜ್ಯೋತಿ ಪ್ರತಾಪ್, ಪೈ ಎಲೆಕ್ಟ್ರಾನಿಕ್ಸ್‌ನ ಸಹನಾ ಪೈ – ಹೀಗೆ ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹವ್ಯಾಸಿ ಗಾಯಕರು ಸುಮಾರು 40 ಗೀತೆಗಳನ್ನು ಹಾಡಿದರು. ಲತಾ ಬೆಂಗಳೂರು ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಕನ್ನಡ ಸುಗಮ ಸಂಗೀತ ಪರಿಷತ್ತು ಜಿಲ್ಲಾಧ್ಯಕ್ಷ ನಾಗರಾಜ್ ವಿ. ಬೈರಿ, ಮಾತನಾಡಿ, ವಿವಿಧ ವೃತ್ತಿಪರರು ಬಿಡುವು ಮಾಡಿಕೊಂಡು ಗಾಯನದಲ್ಲಿ ತೊಡಗಿಸಿಕೊಂಡು ಬೆಳೆಯುತ್ತಿರುವುದು ಉತ್ತಮವಾದುದು. ಇದೇ ರೀತಿ ಸಮಾಜಕ್ಕೆ ಸಂಗೀತ ಸೇವೆ ಮಾಡುತ್ತಿರಿ ಎಂದು ಹಾರೈಸಿದರು.

ಮುಖ್ಯ ಅತಿಥಿಯಾಗಿದ್ದ ಕುವೆಂಪುನಗರ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಾಂಶುಪಾಲ, ಅಂಕಣಕಾರ ಡಾ.ಗುಬ್ಬಿಗೂಡು ರಮೇಶ್ ಮಾತನಾಡಿ, ಮೈಸೂರಿಗೆ ಸಾಂಸ್ಕೃತಿಕ ರಾಜಧಾನಿ ಎಂಬ ಹೆಸರು ಸುಮ್ಮನೆ ಬಂದಿಲ್ಲ. ಆ ರೀತಿಯ ಚಟುವಟಿಕೆಗಳನ್ನು ನಿರಂತರವಾಗಿ ಇಲ್ಲಿನ ಸಂಘ, ಸಂಸ್ಥೆಗಳು ನಡೆಸಿಕೊಂಡು ಬರುತ್ತಿವೆ ಎಂದು ಶ್ಲಾಘಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಬಿಜೆಪಿ ನಗರ ಉಪಾಧ್ಯಕ್ಷ ಎಂ.ಎ. ಬಾಲಕೃಷ್ಣ ಮುಖ್ಯ ಅತಿಥಿಗಳಾಗಿದ್ದರು. ರಿದಮ್ಸ್ ವ್ಯವಸ್ಥಾಪಕ ಪ್ರವೀಣ್ ಘಾಟ್ಗೆ ಇನ್ನಿತರರಿದ್ದರು

ಉದ್ಯಾನವನ ನಿರ್ವಹಣೆಗಾಗಿ ಮಹಿಳಾ ಸ್ವ ಸಹಾಯ ಸಂಘಗಳಿಂದ ಅರ್ಜಿ ಆಹ್ವಾನ

ಮೈಸೂರು,ಫೆ.19– ಸರ್ಕಾರದ ನಿರ್ದೇಶನದಂತೆ ಕೇಂದ್ರ ಪುರಸ್ಕೃತ ಅಮೃತ್–2.0 ಅಭಿಯಾನದ ಅಮೃತ್ ಮಿತ್ರ ಕಾರ್ಯಕ್ರಮದ ತಾಂತ್ರಿಕೇತರ ಚಟುವಟಿಕೆಯ ಅಡಿಯಲ್ಲಿ ಕೃಷ್ಣರಾಜನಗರ ಪುರಸಭೆ ವ್ಯಾಪ್ತಿಯ ವಾರ್ಡ್ ನಂ.9 ರಲ್ಲಿರುವ ಮಹಾತ್ಮ ಗಾಂಧಿ ಉದ್ಯಾನವನ(ಪಾರ್ಕ್)ವನ್ನು ನಿರ್ವಹಣೆ ಮಾಡುವ ಸಲುವಾಗಿ, ಕೆ.ಆರ್.ನಗರ ಪುರಸಭೆಯ ಡೇ–ನಲ್ಮ್ ಯೋಜನೆಯಡಿ ರಚನೆಗೊಂಡಿರುವ ಅರ್ಹ ಮಹಿಳಾ ಸ್ವ–ಸಹಾಯ ಸಂಘಗಳಿಂದ ಅಧಿಕೃತವಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕೆ.ಆರ್.ನಗರ ಪುರಸಭಾ ವ್ಯಾಪ್ತಿಯಲ್ಲಿನ ಆಸಕ್ತ ಅರ್ಹ ಮಹಿಳಾ ಸ್ವ–ಸಹಾಯ ಸಂಘಗಳು ಕೆ.ಆರ್.ನಗರದ ಪುರಸಭೆಯ ಡೇ–ನಲ್ಮ್ ಶಾಖೆಗೆ ಭೇಟಿ ನೀಡಿ ನಿಗದಿತ ಅರ್ಜಿ ನಮೂನೆಯನ್ನು ಪಡೆದುಕೊಂಡು ಫೆ.26 ರೊಳಗೆ ಕಛೇರಿಗೆ ಸಲ್ಲಿಸಬಹುದಾಗಿದೆ. ನಿಗದಿತ ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಡೇ–ನಲ್ಮ್ ಶಾಖೆಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಬಹುದಾಗಿದೆ ಎಂದು ಕೃಷ್ಣರಾಜನಗರದ ಪುರಸಭೆಯ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

LOANS

- Housing Loans 7.55%
- Mortgage Loans
- Site Purchase Loans and
- Site Mortgage Loan
- Business Loans.
- Balance Transfer and Top up Loan.
- School & Hospital Purchase & Mortgage Loan
- We do for 11B & Revenue Properties, Fast processing.
- Attractive Rate of Interest.

*Condition & Apply

Call:
7353533739 / 9742435519

FOR SALE
2400 sft
CORNER COMMERCIAL PROPERTY
on 80 feet road for sale at J P Nagar, Mysore.
Call : 99807 47256

ಪ್ರಮಾಣ ಪತ್ರ

ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು, ಹರವೆ ಹೋಬಳಿ, ಮೂಡ್ಲಾಕೂಡು ಗ್ರಾಮದಲ್ಲಿ ವಾಸವಾಗಿರುವ ರಾಜಶೇಖರ ರವರ ಮಗನಾದ ದಕ್ಷಿಣಮೂರ್ತಿ .ಆರ್ ಆದ ನನ್ನ ಎಲ್ಲಾ ದಾಖಲಾತಿಗಳಲ್ಲಿ ನನ್ನ ತಂದೆಯ ಹೆಸರು ರಾಜಶೇಖರ ಎಂದು ನಮೂದಾಗಿರುತ್ತದೆ. ಆದರೆ ನನ್ನ ಚಾಲನಾ ಪರವಾನಗಿ (KA10 20130002661) ಯಲ್ಲಿ ನನ್ನ ತಂದೆಯ ಹೆಸರು ರಾಜಶೇಖರಮೂರ್ತಿ ಎಂದು ನಮೂದಾಗಿರುತ್ತದೆ. ಈ ಎರಡೂ ಹೆಸರುಗಳು ನನ್ನ ತಂದೆಯ ಹೆಸರೇ ಆಗಿರುತ್ತದೆ. ನಾನು ಇನ್ನು ಮುಂದೆ ನನ್ನ ತಂದೆಯ ಹೆಸರನ್ನು ರಾಜಶೇಖರ ಎಂಬ ಹೆಸರಿನಿಂದಲೇ ಮುಂದುವರಿಸಿಕೊಂಡು ಹೋಗುವುದಾಗಿ ನೋಟರಿ ಎಂ.ಪಿ. ನಾಗಲಕ್ಷ್ಮಿ, ಚಾಮರಾಜನಗರ ರವರ ಮುಂದೆ ದಿನಾಂಕ 13–02–2026 ರಂದು ಪ್ರಮಾಣೀಕರಿಸುತ್ತೇನೆ.

ಸಹಿ/– ದಕ್ಷಿಣಮೂರ್ತಿ.ಆರ್

FLAT FOR SALE
Fully furnished 4.5 BHK, Luxury Flat measuring 2640sqft East facing balconies overlooking Chamundi hills for **immediate sale at Brigade Mountain View Apartments,** Agrahara, beside JSS Hospital
Call: 99002 90093 / 99003 63084

ಹೆರಿಟೇಜ್ ಸಿಟಿ ಲೇಔಟ್
HERITAGE CITY LAYOUT
Developers: Sri Vinyaka Garden City
20x30, 20x40 & 30x40
MUDA Approved
Sarkari Uttanahalli and Hadajana
- Hadajana Circle to Uthanahalli Temple Road,
- One Kilometer from Ring Road
- 9 Kilometers from City Bus Stand
- 8 Kilometers from Mysore Airport

Bank Loan Available | Ready For Registration
7222060666
7406067631

ಹಸಿರು ನಮ್ಮ ಉಸಿರು

IN THE COURT OF THE SENIOR CIVIL JUDGE and CJM at MYSURU
O.S. No-710/ 12025

Plaintiff : M. Raghavendra, V/S
Defendants : Smt. Deepika and others. I.A.No. II /2025
Applicant: M. Raghavendra... Plaintiff, V/S **Opponents:** Smt. Deepika and others........ Defendants

APPLICATION UNDER ORDER 39 RULE 1 AND 2 READ WITH SECTION 151 of C.P.C

For the reasons set out in the accompanying affidavit, the Applicant/Plaintiff most humbly prays this Hon'ble Court be pleased to pass an Ex-Parte order of Temporary Injunction against the defendants restraining them, their agents, servants or anybody acting on behalf of the Opponents/ Defendants from alienating the application schedule property to any person pending disposal of the suit in the interest of justice and equity.

SCHEDULE

Vacant site No-156, measuring East-West 12 meters, North-South 09 meters, in total 108 Square meters, curved out in survey number situated at 162/1,2,3, 163/1,2,3,4, 164/1, 165/2, 166/14,5,6,7,8,9, 167/1,2, 168, 169/1,2,3 situated at Hanchya Village, Kasaba Hobli, Mysuru Taluk, K. S.F.C Lay-out, bounded on East : Road, West : Vacant site No-129, North : Vacant site No-155, South : Vacant Site No-157

Sd/- CJ & CJM Court, Mysore
Sd/-Advocate for Plaintiff
Sd/-Applicant/Plaintiff
Place : Mysuru
Date : 29-04-2025



Prof. Dr. NAGAMALESH U M
MBBS, MD, DNB (Cardiology), FACC, FESC, FSCAI
Lead Consultant - Cardiology, Interventional Cardiologist, Aster CMI Hospital, Bangalore
Director - Heart Failure, Transplant & MCS Program, Aster Hospitals, Bangalore

Saturday, 21st February 2026
Four Chambers Heart Care Centre
475, Udayaravi Rd., Kuvempunagar, Mysuru.
Time : 11:00 am - 1:00 pm

If you are experiencing the following symptoms, you may need specific treatment and care:
- Unable to carry out regular work
- Loss of weight
- Flactuation of kidney function levels
- Breathlessness
- Difficulty lying down flat on the bed

For appointments call: 8884440703 9663876402
Scan to download
Aster CMI HOSPITAL HEBBAL, BANGALORE

ಇಂಪೀರಿಯಲ್ ಸಿಟಿ
ಮೆಗಾ ರೆಸಿಡೆನ್ಷಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
ಕೇವಲ ₹749/ ಪ್ರತಿ ಚದರ ಅಡಿ
ಬುಕಿಂಗ್ ಪ್ರಾರಂಭವಾಗಿದೆ
ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕಿ.ಮೀ
MUDA LIMITS
ಸುಲಭ 4 ಕಂತುಗಳ ಸೌಲಭ್ಯವಿದೆ
30x40 | 30x50
40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್
90713 86615
95133 01854

ಸೈಟುಗಳು ಮಾರಾಟಕ್ಕಿದೆ
ಬನ್ನೂರು ರಸ್ತೆ ಸಮೀಪವಿರುವ ಡೆಲ್ಲಿ ಪಬ್ಲಿಕ್ ಸ್ಕೂಲ್ ಹಾಗೂ ಜ್ಞಾನ ಸರೋವರ ಇಂಟರ್ನ್ಯಾಷನಲ್ ಸ್ಕೂಲ್ ಸಮೀಪ ಅಭಿವೃದ್ಧಿ ಪಡಿಸಿದ ಲೇಔಟ್‌ನಲ್ಲಿ ಮುಡಾ ಅನುಮೋದಿತ **60x40** ಸೈಟ್‌ಗಳು ಮಾರಾಟಕ್ಕಿದೆ.
ಸಂಪರ್ಕಿಸಿ: ಆಸ್ಟರ್ 9731749500

MAHATHMA GANDHI B.ED COLLEGE
Sathagalli, Mysuru
Academic Year: 2025-2026
ADMISSION FOR
B.Ed (Last Few Seats Left)
Contact No:
● 0821-2420374 ● 93438 28203
Office: Mahathma Gandhi Trust, #27, Sri Lalitha, Sonar Street, Chamaraja Mohalla, Mysore
Email : mahatmagandhitrust@gmail.com

6ನೇ ವರ್ಷದ ಪುಣ್ಯ ಸ್ಮರಣೆ




ಶ್ರೀಮತಿ ಎಂ. ಮಾದಮ್ಮ ನವರು
(ಎಂ. ಶಾಂತಾ)
ನಿವೃತ್ತ ಶಿಕ್ಷಕಿ

ನೀವು ನಮ್ಮನ್ನು ಅಗಲಿ 6 ವರ್ಷ ಕಳೆದರೂ
ನಿಮ್ಮ ನೆನಪು ನಮ್ಮೆಲ್ಲರ ಮನದಲ್ಲಿ ಅಚ್ಚ–ಹಸಿರಾಗಿದೆ
ನಿಮ್ಮ ಆತ್ಮಕ್ಕೆ ಪರಮಾತ್ಮನು ಚಿರಶಾಂತಿ ಕರುಣಿಸಲಿ

ಸದಾ ನಿಮ್ಮ ಸ್ಮರಣೆಯಲ್ಲಿರುವ :
ಶ್ರೀ ಆರ್. ರಂಗಸ್ವಾಮಿ ಶಾಂತಾ ಮತ್ತು ಮಕ್ಕಳು

10ನೇ ವರ್ಷದ ಪುಣ್ಯಸ್ಮರಣೆ



ಶ್ರೀಯುತ T.J. ಕೆಂಪನಂಜಯ್ಯ ರವರು
(Ret. CDO)

ಸದಾ ನಿಮ್ಮ ನೆನಪಿನಲ್ಲಿರುವ
ಪತ್ನಿ: ರಾಜಮ್ಮ ಹಾಗೂ
ಕುಟುಂಬವರ್ಗದವರು, ತಾಂಡವಪುರ

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ಚಿನ್ನದ ಗುಣಮಟ್ಟದ ಆಧಾರದ ಮೇಲೆ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ.
ಒಂದು ಗ್ರಾಂ ಚಿನ್ನದ ದರ: 14,600 (24 CT)
9108146123

ಸೈಟು ಬೇಕಾಗಿದೆ
1) T ನರಸೀಪುರ ರಸ್ತೆ,
2) ಬನ್ನೂರು ರಸ್ತೆ,
3) ಸಪ್ತಮಾತೃಕ ಬಡಾವಣೆಗಳು
4) ಲಾಲ್ ಬಹದ್ದೂರ್ ಶಾಸ್ತ್ರಿ ನಗರಗಳಲ್ಲಿ
ಮಾಲೀಕರು ಸಂಪರ್ಕಿಸಿ
9686714571
9741624588

mysilkerae
KALENI SILK INDUSTRY
Celebrate your Special Occasion with Elegance
Ugadi Festive Offer
Make this Ugadi Memorable with timeless Silk Sophistication.
UP TO 30% DISCOUNT
100% PURE SILK / GOLD ZARI SAREES
Woven on traditional looms exclusively with pure silk from the historic region of Mysore.
KALENI SILK INDUSTRY
263, Hebbal Industrial Area, Opp. to Annapurna Aahar Hotel, Mysore - 570018
9538724611 / 9845817295

ಸಾರ್ವಜನಿಕ ಪ್ರಕಟಣೆ

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ, ಹೊರವಳ್ಳಿ ಗ್ರಾಮದ ಸರ್ವೆ ನಂ.79/4 ವಿಸ್ತೀರ್ಣ 1.08 ಗುಂಟೆ ಜಮೀನುಗಳನ್ನು ನನ್ನ ಕಕ್ಷಿದಾರರಾದ ಶ್ರೀ ಸಿದ್ದು ಗಣಪತಿಹಳ್ಳಿ ಚಂದ್ರಶೇಖರಯ್ಯ ರವರು ಮತ್ತು ಇವರ ಕುಟುಂಬದವರು ಶುದ್ಧ ಕ್ರಯಕ್ಕೆ ಈ ಜಮೀನಿನ ಮಾಲೀಕರಾದ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ, ತೊರವಳ್ಳಿ ಗ್ರಾಮದ ಶ್ರೀ ಮಹೇಶ್ ಬಿನ್ ಮಹೇಶ್ ಬಿನ್ ಸಿದ್ದಪ್ಪ ಶ್ರೀಮತಿ ಕೋಮಲ ಕೋಂ ಮಹೇಶ್ ಹಾಗೂ ಮಧುಕುಮಾರ್ ಬಿನ್ ಮಹೇಶ್ ರವರುಗಳಿಂದ ಶುದ್ಧಕ್ರಯಕ್ಕೆ ಖರೀದಿಸುತ್ತಿದ್ದು, ಈ ಸ್ವತ್ತುಗಳ ಜಮೀನುಗಳಿಗೆ ಸಂಬಂಧಪಟ್ಟವರು ತಂಟೆ ತಕರಾರು, ಆಧಾರ, ಭೋಗ್ಯ, ಕ್ರಯದ ಒಪ್ಪಂದ ಬ್ಯಾಂಕ್‌ನ ಸಾಲ ಹಾಗೂ ಇತರೆ ಋಣಭಾರಗಳು ಯಾರಿಗಾದರೂ ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 7 ದಿನಗಳ ಒಳಗೆ ಕರೆಮಾಡಿ ಅಥವಾ ಖುದ್ದು ತಿಳಿಸತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ, ತೊರವಳ್ಳಿ ಗ್ರಾಮದ ಸರ್ವೆ ನಂ.79/4 ರ ಒಟ್ಟು ವಿಸ್ತೀರ್ಣ 1.08 ಗುಂಟೆ ಆಕಾರ 1.05 ಪೈಸೆಯುಳ್ಳ ಜಮೀನು ಮಾತ್ರ, ಚೆಕ್ಕುಬಂದಿ:– ಪೂರ್ವಕ್ಕೆ : ಸರ್ಕಾರಿ ರಸ್ತೆ ಪಶ್ಚಿಮಕ್ಕೆ : ಸಿದ್ದಯ್ಯ ರವರ ಜಮೀನು, ಉತ್ತರಕ್ಕೆ : ಕೂಸಯ್ಯ ರವರ ಜಮೀನು, ದಕ್ಷಿಣಕ್ಕೆ : ಮಹೇಶ್ ರವರ ಜಮೀನು, ಈ ಮಧ್ಯೆಯಿರುವ ಸರ್ವೆ ನಂ.79/4ರ 1.08 ಗುಂಟೆ ಜಮೀನು ಮಾತ್ರವೇ ನಾವು ಕ್ರಯಕ್ಕೆ ತೆಗೆದುಕೊಳ್ಳುವ ಸ್ವತ್ತುಗಳಾಗಿರುತ್ತದೆ.

ಸಹಿ/– ಎನ್.ಜಿ.ಶಿವಾನಂದಸ್ವಾಮಿ, ಎಂ.ಎ, ಎಲ್.ಎಲ್.ಬಿ., ಕೆ.ಎ.ಆರ್ 79/2016
ವಿನೋದ, ಬಿ.ಎ, ಎಲ್.ಎಲ್.ಬಿ, ವಕೀಲರು, #08, ಅಂಜನಾದ್ರಿ ಕಾಂಪ್ಲೆಕ್ಸ್, ರಾಮಶೆಟ್ಟಿ ಲೇಔಟ್, ಬಿ.ಎನ್ ರಸ್ತೆ, ನಂಜನಗೂಡು
Ph: 9845897735
ಸಿದ್ದು ಗಣಪತಿಹಳ್ಳಿ ಚಂದ್ರಶೇಖರ್
9845897735, 9880080045, 9845897735

ಕರ್ನಾಟಕ ಗೃಹ ಮಂಡಳಿ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ–10/ಬೇ.ಸ.ಪ್ರ/2025–26 ದಿನಾಂಕ: 19–02–2026

ಬೇಡಿಕೆ ಸಮೀಕ್ಷೆ ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯ ವತಿಯಿಂದ ಮಂಡ್ಯ ಜಿಲ್ಲೆ ಮತ್ತು ತಾಲ್ಲೂಕು, ಕೊತ್ತತ್ತಿ–1 ಹೋಬಳಿ, ಎಲೆಚಾಕನಹಳ್ಳಿ ಗ್ರಾಮದ ಸರ್ವೆ ನಂ 62,63/1,63/2,63/3ಎ,64/1,64/2,64/3,64/4ಬಿ,64/ 5,64/7,64/8,69/1,69/2,69/3,69/5 ನಂಬರ್ ಜಮೀನಿನಲ್ಲಿ ಅಭಿವೃದ್ಧಿಪಡಿಸಿರುವ ವಸತಿ ಬಡಾವಣೆಯಲ್ಲಿ ಮನೆಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದ್ದು, ಸದರಿ ಯೋಜನೆಯಲ್ಲಿ ವಿವಿಧ ವರ್ಗದ ಮನೆಗಳನ್ನು ಹೊಂದಲು ಬಯಸುವ ಸಾರ್ವಜನಿಕರಿಂದ ಬೇಡಿಕೆ ಸಮೀಕ್ಷೆಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಾರ್ವಜನಿಕರು **e-payment** ಮೂಲಕ ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು ಪಾವತಿಸಿ ದಿನಾಂಕ:23–02–2026 ರಿಂದ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 23–03–2026 ಆಗಿರುತ್ತದೆ.

ಕ್ರ ಸಂ	ಬಡಾವಣೆಯ ಹೆಸರು ಮತ್ತು ಸ್ಥಳ	ವರ್ಗ	ಅಂದಾಜು ಒಟ್ಟು ಮನೆಗಳು	ನೋಂದಣಿ ಶುಲ್ಕ (ರೂ)	ಆರಂಭಿಕ ಠೇವಣಿ (ರೂ)	ಮನೆಯ ತಾತ್ಕಾಲಿಕ ಬೆಲೆ (ಪ್ರತಿ ಚ.ಅ ಗೆ)
1	ಮಂಡ್ಯ ಜಿಲ್ಲೆ ಮತ್ತು ತಾಲ್ಲೂಕು, ಕೊತ್ತತ್ತಿ–1 ಹೋಬಳಿ, ಎಲೆಚಾಕನಹಳ್ಳಿ ಗ್ರಾಮ	LIG	20	500/-	50,000/-	76,11,302/-
		MIG	20	1,000/-	75,000/-	87,81,577/-
		HIG	10	1,500/-	1,00,000/-	1,25,82,203/-

ಅರ್ಜಿ ನೊಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು **e-payment** ಮೂಲಕ ಪಾವತಿಸಿ ಅರ್ಜಿ ಸಲ್ಲಿಸಲು ಹಾಗೂ ನಿಯಮ ಮತ್ತು ಷರತ್ತುಗಳ ವಿವರಗಳಿಗಾಗಿ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು.
ಹೆಚ್ಚಿನ ವಿವರಗಳಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಮಂಡ್ಯ ಇವರ ದೂರವಾಣಿ ಸಂಖ್ಯೆ:08232–220478 ಅಥವಾ ಸಹಾಯಕ ಕಂದಾಯ ಅಧಿಕಾರಿಗಳು, ಮಂಡ್ಯ ರವರ ಮೊ.6362218708 ಹಾಗೂ ಕಂದಾಯ ಅಧಿಕಾರಿಗಳು, ಕರ್ನಾಟಕ ಗೃಹ ಮಂಡಳಿ, ಕೇಂದ್ರ ಕಛೇರಿ, ಹಂಚಿಕೆ ಶಾಖೆ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009, ದೂರವಾಣಿ ಸಂಖ್ಯೆ:080–22273511 extn 308/309 ರಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/5761/Zen/2025-26

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

2 BHK HOME INTERIORS @ ₹ 2.9 Lakh Onwards
Home Space Mart



ISO 9001:2015 Certified Company Depot
Mysuru • Kushalnagar • Bengaluru
For Site Visit :
9108923123

SALE 15700 sqft North facing, Commercial Building in Mysore, New Kanthraj Urs 100ft Road, 95ft frontage, Suitable for showrooms, Ready to occupy with passenger and goods lift, Clear titles.
Call Verna Developers
MG Road Bangalore
9353128035

ಕರ್ನಾಟಕ ಗೃಹ ಮಂಡಳಿ
ಗೃಹ ಆಯುಕ್ತರ ಕಛೇರಿ, 4ನೇ ಮಹಡಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಪ.ಪ್ರ/2025–26 ದಿನಾಂಕ: 19–02–2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವಸತಿಯಿಂದ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಪಂಜನಹಳ್ಳಿ 3ನೇ ಹಂತದ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಈಗಾಗಲೇ ಹಂಚಿಕೆ ಮಾಡಲಾಗಿದೆ. ಹಂಚಿಕೆ ನಂತರ ಖಾಲಿ ಉಳಿದಿರುವ ಹಾಗೂ ಬಿಡಿ (Stray) ನಿವೇಶನಗಳನ್ನು ವಿಲೇವಾರಿ ಮಾಡಲು ಆನ್‌ಲೈನ್ ಮುಖಾಂತರ ಸಾರ್ವಜನಿಕರಿಂದ ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿಯೊಂದಿಗೆ ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಾರ್ವಜನಿಕರು e-payment ಮೂಲಕ ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿ ಹಣವನ್ನು ಪಾವತಿ ಮಾಡಿ **ದಿನಾಂಕ: 23.02.2026** ರಿಂದ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 23.03.2026 ಆಗಿರುತ್ತದೆ.

ಸ್ಥಳ ಮತ್ತು ಜಿಲ್ಲೆ	ವರ್ಗ	ಹಂಚಿಕೆಗೆ ಲಭ್ಯವಿರು ಸ್ವತ್ತುಗಳು	ನೊಂದಣಿ ಶುಲ್ಕ (ರೂ.ಗಳಲ್ಲಿ)	ಆರಂಭಿಕ ಠೇವಣಿ (ರೂ.ಗಳಲ್ಲಿ)	ಮಂಡಳಿ ದರ (ಪ್ರತಿ ಚದರಡಿಗೆ)
ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು ಪಂಜನಹಳ್ಳಿ 3ನೇ ಹಂತ ಬಡಾವಣೆ	EWS	19	300/-	5,000/-	390/-
	LIG	68	500/-	10,000/-	780/-
	MIG	98	1000/-	40,000/-	
	HIG	35	1,500/-	50,000/-	

ಅರ್ಜಿ ನೊಂದಣಿ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿಸಿ ಅರ್ಜಿ ಸಲ್ಲಿಸಲು ಹಾಗೂ ನಿಯಮ ಮತ್ತು ಷರತ್ತುಗಳ ಪೂರ್ಣ ವಿವರಗಳಿಗಾಗಿ ಮಂಡಳಿಯ ವೆಬ್‌ಸೈಟ್ **https://www.karnataka.gov.in** ಸಂಪರ್ಕಿಸುವುದು.

ಹೆಚ್ಚಿನ ಮಾಹಿತಿಗಾಗಿ ಚಾಮರಾಜನಗರ ಜಿಲ್ಲಾ ಯೋಜನಾ ಕಛೇರಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಮೊಬೈಲ್ ಸಂಖ್ಯೆ: 9448425643 ಹಾಗೂ ಕೇಂದ್ರ ಕಛೇರಿಯ ಕಂದಾಯ ಅಧಿಕಾರಿಗಳು, ದೂರವಾಣಿ ಸಂಖ್ಯೆ: 080-22273511 ext 306/307/308/309 ಸಂಪರ್ಕಿಸುವುದು.

ಸಹಿ/–, ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/RO5759/AAPL/2025-26